# 1. ಆ ದೇಶವೇ ಅವರ ತಾಯಿ

**- ಹೊಯಿಸಳ**

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ರಾಜಕುಮಾರನ ಕೂಗನ್ನು ಕೇಳಿ ಬೆಂಕಿ ಏನೆಂದು ಹೇಳಿತು?

   ನನ್ನ ಹೊಗೆಯನ್ನು ಕಳಿಸಿ ಹುಡುಕಿಬಿಡುತ್ತೇನಯ್ಯ ರಾಜಕುಮಾರ ಅಳಬೇಡಪ್ಪ ಎಂದಿತು.

2. ಭಾರತೀಯರು ಯಾವ ಬಣ್ಣದವರು?

   ಭಾರತೀಯರು 'ಜೇನುತುಪ್ಪದ' ಬಣ್ಣದವರು.

3. ಭರತನ ತಾಯಿಯು ಏಕೆ ಅತ್ತಳು?

   ಭರತನ ತಂದೆಯ ಬೈಗುಳಗಳನ್ನು ಸಹಿಸಿಕೊಳ್ಳಲಾಗದೆ ಅತ್ತುಬಿಟ್ಟಳು.

4. ತಾಯಿಯ ಕಣ್ಣೀರು ಹರಿದು ಹೋಗಿ ಏನಾಯಿತು?

   ಪ್ರಾಣಿ ಪಕ್ಷಿಗಳು ಸುರಿಸಿದ ಕಣ್ಣೀರಿನೊಂದಿಗೆ ಸೇರಿ ದೊಡ್ಡ ಹೊಳೆಯಾಯಿತು.

5. ಭಾರತೀಯರು ಬೆಳಗ್ಗೆ ಎದ್ದು ಭೂಮಿಯ ಮೇಲೆ ಕಾಲಿಡುವ ಮುಂಚೆ ಏನು ಹೇಳುತ್ತಾರೆ?

   'ಪಾದಸ್ಪರ್ಶಂ ಕ್ಷಮಸ್ವ ಮೇ' ಎಂದು ಹೇಳುತ್ತಾರೆ

6. ಮಲಗುವಾಗ ಭಾರತೀಯರು ಭೂಮಿಗೆ ಏನೆಂದು ಹೇಳುತ್ತಾರೆ?

   'ನಿನ್ನ ಮಡಿಲಲ್ಲಿ ಇರುತ್ತೇನೆ ತಾಯಿ' ಎಂದು ಹೇಳುತ್ತಾರೆ.

ಕೆಳಗಿನ ಪ್ರಶ್ನೆಗಳಿಗೆ **2/3** ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಗಾಳಿ, ನೀರು, ಬೆಂಕಿಗಳು ರಾಜಕುಮಾರನಿಗೆ ಏನು ಹೇಳಿದವು?

   ಗಾಳಿ ಬೀಸುವುದನ್ನು ಬಿಟ್ಟು 'ಏನಯ್ಯಾ ರಾಜಕುಮಾರ? ಎಂದಿತು, ನೀರು ಹರಿಯುವುದನ್ನು ಬಿಟ್ಟು "ಬರಲಿಲ್ಲವೇ ನಿನ್ನ ತಾಯಿ? ಎಂದು ಕೇಳಿತು, ಬೆಂಕಿಯು ಉರಿಯುವುದನ್ನು ಬಿಟ್ಟು "ನನ್ನ ಹೊಗೆಯನ್ನು ಕಳಿಸಿ ಹುಡುಕಿಬಿಡುತ್ತೇನಯ್ಯ ರಾಜಕುಮಾರ ಅಳಬೇಡಪ್ಪ" ಎಂದಿತು.

2. ಚಿನ್ನದ ಕೋಲಿನ ಮಹಿಮೆ ಏನು?

   ಚಿನ್ನದ ಕೋಲನ್ನು ಹಿಡಿದು ಕೊಂಡರೆ ಏನು ಬೇಕಾದರೂ ಆಗಬಹುದು; ಎಲ್ಲಿ ಬೇಕಾದರೂ ಹೋಗಬಹುದು. ಇದು ಅದರ ಮಹಿಮೆ.

3. ಭರತ ಕುಮಾರನಿಗೆ ಸೂರ್ಯ ಮಾಡಿದ ಸಹಾಯವೇನು?

   ಸೂರ್ಯನು ಮೋಡಗಳನ್ನು ಕರಗಿಸಿ ಕತ್ತಲೆಯನ್ನು ಸುಟ್ಟು ಬೂದಿ ಮಾಡುವ ಮೂಲಕ ಭರತ ಕುಮಾರನಿಗೆ ಸಹಾಯ ಮಾಡಿದನು.

4. ಭರತಕುಮಾರನ ಕನಸಿನಲ್ಲಿ ತಾಯಿ ಬಂದು ಏನೆಂದು ಹೇಳಿದಳು?

ಭರತ ಕುಮಾರ ನಾನು ಈ ನೆಲದಲ್ಲಿ ಅಡಗಿ ಹೋಗಿದ್ದೇನೆ, ನೀರಿನಲ್ಲಿ ಕರಗಿ ಹೋಗಿದ್ದೇನೆ. ನಿನ್ನ ರೋದನವನ್ನು ಕೇಳಿ, ಕೇಳಿ ಕೊರಗಿ ಕೊರಗಿ ಇಲ್ಲೇ ಇದ್ದು ಬಿಟ್ಟಿದ್ದೇನೆ. ಈ ನೆಲವೇ ನಾನೆಂದು ಭಾವಿಸಿಕೊ ಎಂದಳು

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಚಿನ್ನದ ಕೋಲನ್ನು ಬಳಸಿ ರಾಜಕುಮಾರನು ತನ್ನ ತಾಯಿಯನ್ನು ಎಲ್ಲೆಲ್ಲಿ ಹುಡುಕಿದನು?

   ಚಿನ್ನದ ಕೋಲನ್ನು ಬಳಸಿ ರಾಜಕುಮಾರನು 'ಹಾವಾಗಿ ನೆಲವನ್ನು ಹೊಕ್ಕು ಹುಡುಕಿದನು. ಹೊಳೆಯಾಗಿ ಕಾಡೆಲ್ಲ ನೋಡಿದನು.  ಹಕ್ಕಿಯಾಗಿ ಆಕಾಶದಲ್ಲಿ ಅಲೆದನು. ಬಸವನಾಗಿ ಊರೆಲ್ಲ ತಿರುಗಿದನು. ಸಿಂಹವಾಗಿ ಆರ್ಭಟಿಸಿದ. ಮೀನಾಗಿ ಮೌನದಿಂದ ಎಲ್ಲೆಲ್ಲೂ ತನ್ನ ತಾಯಿಯನ್ನು ಹುಡುಕಿದನು.'

2. ಭರತಕುಮಾರ ತನ್ನ ತಾಯಿಯನ್ನು ಭೂಮಿಯ ಮೇಲೆ ಕಂಡುಕೊಂಡ ಬಗೆ ಹೇಗೆ?

   ಭರತಕುಮಾರನು ಈ ಭೂಮಿಯಲ್ಲಿ ಹರಿಯುವ ನೀರಿನಲ್ಲಿ ತಾಯಿಯ ಹಾಲಿನ ರುಚಿಯನ್ನು; ಹೂವಿನ ಕಂಪಿನಲ್ಲಿ ತಾಯಿಯ ಪರಿಮಳವನ್ನು, ಹಕ್ಕಿಯ ದನಿಯಲ್ಲಿ ತಾಯಿಯ ಪ್ರೀತಿಯ ಸ್ವರವನ್ನು, ನೆಲದಲ್ಲಿ ತಾಯಿಯ ಛಾಯೆಯನ್ನು ಕಾಣುವ ಮೂಲಕ ಈ ಭೂಮಿಯ ಮೇಲೆ ತನ್ನ ತಾಯಿಯನ್ನು ಕಂಡುಕೊಂಡನು.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಬರಲಿಲ್ಲವೇ ನಿನ್ನ ತಾಯಿ?

   ಈ ಪಸ್ತುತ ವಾಕ್ಯವನ್ನು 'ಹೊಯಿಸಲ' ಅವರು ಬರೆದಿರುವ 'ಬಂದ ಬಂದ ಸಂತಂಮ್ಮಣ್ಣ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಆ ದೇಶವೇ ಅವರ ತಾಯಿ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ನೀರು ಭರತಕುಮಾರನಿಗೆ ಹೇಳುತ್ತದೆ. ಭರತನು "ನನ್ನ ತಾಯೀ, ಓ ನನ್ನ ತಾಯೀ" ಎಂದು ಜೋರಾಗಿ ಕೂಗಿಕೊಂಡು ತನ್ನ ತಾಯಿಯನ್ನು ಹುಡುಕುವುದನ್ನು ಕಂಡು ನೀರು, 'ಬರಲಿಲ್ಲವೇ ನಿನ್ನ ತಾಯಿ' ಎಂದು ಕೇಳುತ್ತದೆ. ಆ ಸಂದರ್ಭದಲ್ಲಿ ಈ ಮಾತು ಬಳಕೆಯಾಗಿದೆ.

2. ಎಲೆ ಸೂರ್ಯ ಎಲ್ಲಿದ್ದೀಯೆ, ಬೆಳಕು ಬೇಕು ನನಗೆ

   ಈ ಪಸ್ತುತ ವಾಕ್ಯವನ್ನು 'ಹೊಯಿಸಲ' ಅವರು ಬರೆದಿರುವ 'ಬಂದ ಬಂದ ಸಂತಂಮ್ಮಣ್ಣ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಆ ದೇಶವೇ ಅವರ ತಾಯಿ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ಭರತಕುಮಾರನು ಸೂರ್ಯನಿಗೆ ಹೇಳುತ್ತಾನೆ. ಭರತನ ತಾಯಿಯನ್ನು ಕಾಣದೆ ಅಳುತ್ತಾ ಕುಳಿತ ಸಂದರ್ಭದಲ್ಲಿ ಅವನ ದುಃಖ ಅವನ ತಾಯಿಯ ದುಃಖದೊಂದಿಗೆ ಸೇರಿ ಕಣ್ಣೀರೆಲ್ಲ ಮೋಡವಾಗಿ ಬಾನೆಲ್ಲ ಮುಸುಕಿ ಕತ್ತಲಾದಾಗ ಭರತನು ಸೂರ್ಯನನ್ನು ಕುರಿತು 'ಎಲೆ ಸೂರ್ಯ ಎಲ್ಲಿದ್ದೀಯೆ, ಬೆಳಕು ಬೇಕು ನನಗೆ' ಎಂದು ಹೇಳುತ್ತಾನೆ

3. ಈ ನೆಲವೇ ನಾನೆಂದು ಭಾವಿಸಿಕೊ

ಈ ಪಸ್ತುತ ವಾಕ್ಯವನ್ನು 'ಹೊಯಿಸಲ' ಅವರು ಬರೆದಿರುವ 'ಬಂದ ಬಂದ ಸಂತಂಮ್ಮಣ್ಣ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಆ ದೇಶವೇ ಅವರ ತಾಯಿ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ತಾಯಿಯು ಕನಸಿನಲ್ಲಿ ಬಂದು ಭರತಕುಮಾರನಿಗೆ ಹೇಳಿದಳು. ತಾಯಿಯನ್ನು ಹುಡುಕಿ ಹುಡುಕಿ ಆಯಾಸಗೊಂಡು ಭರತಕುಮಾರನು ಮಲಗಿದ್ದಾಗ ಅವನ ತಾಯಿಯು ಅವನ ಕನಸ್ಸಿನಲ್ಲಿ ಬಂದು ನಾನು ಈ ನೆಲದಲ್ಲಿ ಅಡಗಿ ಹೋಗಿದ್ದೇನೆ, ನೀರಿನಲ್ಲಿ ಕರಗಿ ಹೋಗಿದ್ದೇನೆ. ನಿನ್ನ ರೋದನವನ್ನು ಕೇಳಿ, ಕೇಳಿ ಕೊರಗಿ ಕೊರಗಿ ಇಲ್ಲೇ ಇದ್ದು ಬಿಟ್ಟಿದ್ದೇನೆ. 'ಈ ನೆಲವೇ ನಾನೆಂದು ಭಾವಿಸಿಕೊ' ಎಂದಳು.

4. ಪಾದಸ್ಪರ್ಶಂ ಕ್ಷಮಸ್ವ ಮೇ

ಈ ಪಸ್ತುತ ವಾಕ್ಯವನ್ನು 'ಹೊಯಿಸಲ' ಅವರು ಬರೆದಿರುವ 'ಬಂದ ಬಂದ ಸಂತಂಮ್ಮಣ್ಣ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಆ ದೇಶವೇ ಅವರ ತಾಯಿ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನನ್ನು ಲೇಖಕರು ಓದುಗರಿಗೆ ಹೇಳುತ್ತಾರೆ. ಅಂದರೆ ಭೂಮಿಯನ್ನು ತಾಯಿಯೆಂದು ತಿಳಿದಿರುವ ಭಾರತಿಯರು ಬೆಳಗ್ಗೆ ಎದ್ದು ಭೂಮಿಯ ಮೇಲೆ ಕಾಲಿಡುವ ಮೊದಲು 'ಪಾದಸ್ಪರ್ಶಂ ಕ್ಷಮಸ್ವ ಮೇ' ಎಂದು ಹೇಳಿ ಕಾಲಿಡುತ್ತಾರೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ

1. ದೇವತೆ ಭರತಕುಮಾರನಿಗೆ <u>ಚಿನ್ನದ ಕೋಲು</u> ಕೊಟ್ಟಿತು.
2. ಸೂರ್ಯ <u>ಸೋತು</u> ಸಣ್ಣಗಾಗಿ ಹೋಗಿದ್ದ.
3. ರಾಜಕುಮಾರ ತನ್ನ <u>ನೆಲವನ್ನೇ</u> ತಾಯಿಯೆಂದು ಭಾವಿಸಿಕೊಂಡ.
4. ನೀರಿಗೆ ಆತನ <u>ತಾಯಿಯ</u> ಹಾಲಿನ ರುಚಿಯಿತ್ತು.

'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರ |
|---|---|---|
| 1. ಗಡ್ಡದ | ಜಲಪಾತ | ಸಿಂಹ |
| 2. ಸಂಜೀವಿನಿ | ನವಿಲು | ನದಿ |
| 3. ಪಟ್ಟೆ | ಹಾವು | ಹುಲಿ |
| 4. ನೀರು ಬೀಳು | ನದಿ | ಜಲಪಾತ |

| | | | |
|---|---|---|---|
| 5. | ಬಾಲದಲ್ಲಿ ಕಣ್ಣಿರುವ ಹಕ್ಕಿ | ಸಿಂಹ<br>ಹುಲಿ | ನವಿಲು |

## ಭಾಷಾಭ್ಯಾಸ

ಇವುಗಳಿಗೆ ತದ್ಭವ ಪದಗಳನ್ನು ಬರೆಯಿರಿ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ರಾಜ | ರಾಯ | ಆಕಾಶ | ಆಗಸ |
| ಕುಮಾರ | ಕುವರ | ಧ್ವನಿ | ದನಿ |
| ಪಕ್ಷಿ | ಪಕ್ಕಿ | ಸ್ವರ | ಸರ |
| ಸಿಂಹ | ಸಿಂಗ | ದೃಷ್ಟಿ | ದಿಟ್ಟಿ |

ಕೆಳಗಿನ ಪದಗಳ ನಾನಾರ್ಥ ಬರೆದು, ವಾಕ್ಯಗಳಲ್ಲಿ ಬರೆಯಿರಿ

| | | | |
|---|---|---|---|
| ಕಾಡು | ಅರಣ್ಯ/ ಕಾಡು | : | ನಮ್ಮ ಊರಿನ ಸುತ್ತ ದಟ್ಟವಾದ ಕಾಡು ಇದೆ |
| | ಪೀಡಿಸು | : | ಶ್ರೀಕೃಷ್ಣನು ಗೋಪಿಕೆಯರ ವಸ್ತ್ರಗಳನ್ನು ಬಚ್ಚಿಟ್ಟು ಕಾಡುತ್ತಿದ್ದನು. |
| ಹರಿ | ವಿಷ್ಣು | : | ವಿಷ್ಣುವಿಗೆ ಹರಿ ಎಂದು ಕರೆಯುತ್ತಾರೆ. |
| | ಚಲಿಸು / ಹರಿಯುವುದು | : | ನದಿಯು ಹರಿಯುತ್ತಿದೆ. |
| ತಂದೆ | ಜನಕ | : | ರಾಮನ ತಂದೆ ದಶರಥ. |
| | ತೆಗೆದಿಕೊಂಡು ಬರುವುದು | : | ನಾನು ಅಂಗಡಿಯಿಂದ ಹಣ್ಣು ತಂದೆನು. |
| ಹೊಳೆ | ನದಿ | : | ಹೊಳೆ ಜೋರಾಗಿ ಹರಿಯುತ್ತಿದೆ. |
| | ಹೊಳಪು | : | ನಕ್ಷತ್ರಗಳು ಹೊಳೆಯುತ್ತವೆ. |
| ಕರೆ | ಕರೆಯುವುದು | : | ಮಗು ಅಮ್ಮ ಎಂದು ಜೋರಾಗಿ ಕರೆಯಿತು. |
| | ಕಲೆ/ ಕೊಳೆ | : | ಬಟ್ಟೆಯು ತುಂಬಾ ಕರೆಯಾಗಿದೆ. |

# 2. ಮತ್ತೆ ಬದುಕಿರಿ

- ಎಚ್. ಕೆ. ರಾಮನಾಥ್

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ರಾಮಕೃಷ್ಣನಿಗೆ ಯಾವ ಕಾಲದ ಹಸಿವು ತಟ್ಟಿತ್ತು?

   ಕ್ಷಾಮಕಾಲದ ಹಸಿವು ತಟ್ಟಿತ್ತು
2. ಕೃಷ್ಣದೇವರಾಯನೊಡನೆ ಪಗಡೆಯಾಟ ಆಡುತ್ತಿದ್ದವನು ಯಾರು?

   ಪ್ರಧಾನಿ ಸಾಳುವ ತಿಮ್ಮರಸ
3. ತೆನಾಲಿ ರಾಮಕೃಷ್ಣನು ತನ್ನ ಹೆಂಡತಿಯು ಎಲ್ಲಿಗೆ ಹೋದಳೆಂದು ದೊರೆಯ ಬಳಿ ಹೇಳಿದನು?

   ಕೈಲಾಸಕ್ಕೆ ಹೋದಳೆಂದು ಹೇಳಿದನು
4. ದೊರೆಯು ರಾಮಕೃಷ್ಣನಿಗೆ ಎಷ್ಟು ವರಹಗಳನ್ನು ಕೊಡಲು ಹೇಳಿದನು?

   ದೊರೆಯು ರಾಮಕೃಷ್ಣನಿಗೆ ನೂರು ವರಹಗಳನ್ನು ಕೊಡಲು ಹೇಳಿದನು
5. ರಾಮಕೃಷ್ಣನ ಹೆಂಡತಿಯು ತನ್ನ ಗಂಡ ಎಲ್ಲಿಗೆ ಹೋದನೆಂದು ರಾಣಿಗೆ ಹೇಳಿದಳು?

   ವೈಕುಂಠಕ್ಕೆ ಹೋದನೆಂದು ಹೇಳಿದಳು
6. ತೆನಾಲಿ ರಾಮಕೃಷ್ಣ ಹಾಗೂ ಅವನ ಹೆಂಡತಿ ಸತ್ತಿರುವರೋ ಇಲ್ಲವೋ ತಿಳಿಯಲು ರಾಜರಾಣಿಯರು ಏನು ಮಾಡಿದರು?

   ರಾಮಕೃಷ್ಣನ ಮನೆಗೆ ಬಂದರು
7. ರಾಜರಾಣಿಯರು ಬಂದಿರುವುದನ್ನು ತಿಳಿದ ತೆನಾಲಿ ರಾಮಕೃಷ್ಣ ಹಾಗೂ ಅವನ ಹೆಂಡತಿ ಏನು ಮಾಡಿದರು?

   ಮನೆಯಲ್ಲಿ ಸತ್ತಿರುವಂತೆ ಮಲಗಿಕೊಂಡರು
8. ಬಹುಮಾನ ಬೇಕಾದರೆ ಏನು ಮಾಡಬೇಕು ಎಂದು ದೊರೆಯು ಹೇಳಿದನು?

   ಸತ್ತು ಮತ್ತೆ ಬದುಕಿರಿ ಎಂದನು

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ರಾಮಕೃಷ್ಣನು ತನ್ನ ಹೆಂಡತಿಯ ಕಿವಿಯಲ್ಲಿ ಹೇಳಿದ ಉಪಾಯ ಯಾವುದು?

   ರಾಮಕೃಷ್ಣನು ತನ್ನ ಹೆಂಡತಿಯ ಕಿವಿಯಲ್ಲಿ ಹೇಳಿದ ಉಪಾಯವೆಂದರೆ; ಹೆಂಡತಿ ಸತ್ತಿದ್ದಾಳೆಂದು ರಾಮಕೃಷ್ಣನು ರಾಜನಲ್ಲಿಯೂ ಮತ್ತು ಗಂಡ ಸತ್ತಿದ್ದಾನೆಂದು ಗೌರಿ ರಾಣಿಯಲ್ಲಿಯೂ ಹೇಳಿ ಅವರಿಂದ ಹಣದ ಸಹಾಯ ಪಡೆಯುವುದಾಗಿತ್ತು.
2. ರಾಮಕೃಷ್ಣನೇ ಸತ್ತಿರುವನೆಂದು ರಾಣಿ ದೊರೆಗೆ ಹೇಗೆ ಹೇಳಿದಳು?

   ಸುಳ್ಳು ಹೇಳಬೇಡಿ ರಾಮಕೃಷ್ಣನೇ ಸತ್ತಿರುವುದು. ಅವನ ಶವಸಂಸ್ಕಾರಕ್ಕಾಗಿ ನಾನೇ ಗೌರಿಗೆ ನೂರು ವರಹಗಳನ್ನು ಕೊಟ್ಟು ಕಳುಹಿಸಿದ್ದೇನೆ ಎಂದು ಹೇಳಿದಳು

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ರಾಮಕೃಷ್ಣನನ್ನು ಆತನ ಹೆಂಡತಿ ಹಂಗಿಸಿದ ಬಗೆ ಹೇಗೆ?

   ವಿಜಯನಗರದ ಸಾಮ್ರಾಟ ಕೃಷ್ಣದೇವರಾಯನ ವಿದೂಷಕ ಅನ್ನುತ್ತೀರಿ. ಅರಮನೆಯಲ್ಲಿಯೂ ನಿಮಗೆ ಒಂದು ಹೊತ್ತಿನ ಊಟವು ಸಿಗದೆ ಹೋಯಿತೆ. ಎಂದು ಹೇಳುವ ಮೂಲಕ ರಾಮಕೃಷ್ಣನ ಹೆಂಡತಿ ಗೌರಿಯು ರಾಮಕೃಷ್ಣನನ್ನು ಹಂಗಿಸಿದಳು.

2. ತೆನಾಲಿ ರಾಮಕೃಷ್ಣ ಹಾಗೂ ಗೌರಿ ಈ ಇಬ್ಬರಲ್ಲಿ ಮೊದಲು ಸತ್ತವರು ಯಾರೆಂದು ತಿಳಿಯಲು ಮಂತ್ರಿಯು ಮಾಡಿದ ಉಪಾಯವೇನು?

   ತೆನಾಲಿ ರಾಮಕೃಷ್ಣ ಹಾಗೂ ಗೌರಿ ಈ ಇಬ್ಬರಲ್ಲಿ ಮೊದಲು ಸತ್ತವರು ಯಾರೆಂದು ತಿಳಿಯಲು ಮಂತ್ರಿ ಸಾಳ್ವ ತಿಮ್ಮರಸರು ಪ್ರಭು! ಈ ವಿಷಯದಲ್ಲಿ ನಿಮಗೂ ಮಹಾರಾಣಿಯವರಿಗೂ ಮನಸ್ತಾಪ ಏಕೆ? ಒಂದು ಕೆಲಸ ಮಾಡೋಣ. ಯಾರು ಮೊದಲು ಸತ್ತವರು ಅಂತ ತಿಳಿಸುವವರಿಗೆ ಒಂದು ಸಹಸ್ರ ವರಹ ಬಹುಮಾನ ಅಂತ ಡಂಗುರ ಹೊಡೆಸೋಣ ಎಂಬ ಉಪಾಯವನ್ನು ಮಾಡಿದರು.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ತಾಳಲಾರೆ ವಿಧಿಯ ಶಾಪ! ತಾಳಲಾರೆನ್ನೈ!

   ಈ ಪಸ್ತುತ ವಾಕ್ಯವನ್ನು 'ಎಚ್.ಕೆ. ರಾಮನಾಥ' ಅವರು ಬರೆದಿರುವ 'ಮತ್ತೆ ಬದುಕಿರಿ' ಎಂಬ ನಾಟಕ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ತೆನಾಲಿ ರಾಮಕೃಷ್ಣನು ತನ್ನ ಹೆಂಡತಿ ಗೌರಿಗೆ ಹೇಳಿದನು. ರಾಮಕೃಷ್ಣನು ಹಸಿವು ಎಂದು ಮನೆಗೆ ಬಂದಾಗ ಹೆಂಡತಿಯು ಮನೆಯಲ್ಲಿ ಒಂದು ಕಾಳು ಅಕ್ಕಿಯೂ ಇಲ್ಲ. ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕ್ಕೊಂಡು ಕೂತಿರೋದು ಅನ್ನಿ ಎಂದು ಹೇಳುತ್ತಾಳೆ. ಆಗ ಹಸಿವೆಯನ್ನು ತಾಳಲಾರದೆ ರಾಮಕೃಷ್ಣನು ಹೊಟ್ಟೆ ಹಿಡಿದು ಹಸಿವೂ! ಹಸಿವೂ! 'ತಾಳಲಾರೆ ವಿಧಿಯ ಶಾಪ! ತಾಳಲಾರೆನ್ನೈ!' ಎಂದು ಹೇಳುತ್ತಾನೆ.

2. ಹೂಂ. ನಿಮ್ಮ ಕೈಹಿಡಿದ ಮೇಲೆ ಇನ್ನೂ ಏನೇನು ಮಾಡಬೇಕೋ?

   ಈ ಪಸ್ತುತ ವಾಕ್ಯವನ್ನು 'ಎಚ್.ಕೆ. ರಾಮನಾಥ' ಅವರು ಬರೆದಿರುವ 'ಮತ್ತೆ ಬದುಕಿರಿ' ಎಂಬ ನಾಟಕ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ. ಈ ಮಾತನ್ನು ಗೌರಿಯು ತೆನಾಲಿ ರಾಮಕೃಷ್ಣನಿಗೆ ಹೇಳಿದಳು.

   ರಾಮಕೃಷ್ಣನು ಹಸಿವೆಯನ್ನು ನಿವಾರಿಸಿಕೊಳ್ಳಲು ಒಂದು ಉಪಾಯವನ್ನು ಮಾಡಿ ಅದರಂತೆ ಹೆಂಡತಿಗೆ ಸತ್ತಿದ್ದಾಳೆಂದು ರಾಮಕೃಷ್ಣನು ರಾಜನಲ್ಲಿಯೂ ಮತ್ತು ಗಂಡ ಸತ್ತಿದ್ದಾನೆಂದು ಗೌರಿ ರಾಣಿಯಲ್ಲಿಯೂ ಹೇಳಿ ಅವರಿಂದ ಹಣದ ಸಹಾಯ ಪಡೆಯುವ ಯೋಜನೆಯನ್ನು ರೂಪಿಸುತ್ತಾನೆ. ಅದರಂತೆ ಗೌರಿ ರಾಣಿಯ ಬಳಿ ಹೋಗಲು ಸಿದ್ಧಳಾದಾಗ ಅವಳಿಗೆ ರಾಮಕೃಷ್ಣನು ತಲೆ ಕೆದರಿಕೊಂಡು ಹೋಗಲು ಸೂಚಿಸುತ್ತಾನೆ. ಆಗ ಗೌರಿಯು 'ಹೂಂ. ನಿಮ್ಮ ಕೈಹಿಡಿದ ಮೇಲೆ ಇನ್ನೂ ಏನೇನು ಮಾಡಬೇಕೋ?' ಎಂದು ಹೇಳುತ್ತಾಳೆ.

3. ಉಪಾಯವಿಲ್ದೆ ಇದ್ರೆ ಅಪಾಯವೇ

ಈ ಪಸ್ತುತ ವಾಕ್ಯವನ್ನು 'ಎಚ್.ಕೆ. ರಾಮನಾಥ' ಅವರು ಬರೆದಿರುವ 'ಮತ್ತೆ ಬದುಕಿರಿ' ಎಂಬ ನಾಟಕ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ತೆನಾಲಿ ರಾಮಕೃಷ್ಣನು ತನ್ನ ಹೆಂಡತಿ ಗೌರಿಗೆ ಹೇಳಿದನು. ರಾಮಕೃಷ್ಣನ ಉಪಾಯ ಫಲಿಸಿ ರಾಜ ಮತ್ತು ರಾಣಿಯರಿಂದ ಹಣವನ್ನು ಪಡೆದು ತಮಗೆ ಬೇಕಾದದ್ದನು ತಂದು ರುಚಿಯಾದ ಅಡುಗೆ ಮಾಡಿಕೊಂಡು ಊಟಕ್ಕೆ ಕುಳಿತಾಗ ರಾಮಕೃಷ್ಣನು 'ಉಪಾಯವಿಲ್ದೆ ಇದ್ರೆ ಅಪಾಯವೇ' ಎಂದು ಹೇಳುತ್ತಾನೆ.

4. ಹೂಂ, ಸತ್ತು ಮತ್ತೆ ಬದುಕಿರಿ!

ಈ ಪಸ್ತುತ ವಾಕ್ಯವನ್ನು 'ಎಚ್.ಕೆ. ರಾಮನಾಥ' ಅವರು ಬರೆದಿರುವ 'ಮತ್ತೆ ಬದುಕಿರಿ' ಎಂಬ ನಾಟಕ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕೃಷ್ಣದೇವರಾಯನು ತೆನಾಲಿ ರಾಮಕೃಷ್ಣ ಮತ್ತು ಗೌರಿಗೆ ಹೇಳಿದನು. ರಾಮಕೃಷ್ಣ ಮತ್ತು ಆತನ ಹೆಂಡತಿ ಸಾಯುವ ಉಪಾಯದಲ್ಲಿ ಸಿಕ್ಕಿಬಿಳುತ್ತಾರೆ. ಆಗ ರಾಜ ಕೃಷ್ಣ ದೇವರಾಯನು ಹಾಸ್ಯಕ್ಕಾಗಿ ಸತ್ತಂತೆ ನಟಿಸಿ ಮತ್ತೆ ಬದುಕಿರಿ ಎಂದು ಹೇಳುವಾಗ 'ಹೂಂ, ಸತ್ತು ಮತ್ತೆ ಬದುಕಿರಿ!' ಎಂಬ ಮಾತನ್ನು ಹೇಳುತ್ತಾನೆ.

## ಭಾಷಾಭ್ಯಾಸ

ಇವುಗಳಿಗೆ ತದ್ಭವ ಪದಗಳನ್ನು ಬರೆಯಿರಿ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ವಿಧಿ | ಬಿದಿ | ಆಶ್ಚರ್ಯ | ಅಚ್ಚರಿ |
| ಸಂತೋಷ | ಸಂತಸ | ಸಹಸ್ರ | ಸಾವಿರ |

ಕೆಳಗಿನ ಪದಗಳನ್ನು ಕೂಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ.

| ಪೂರ್ವಪದ | + | ಉತ್ತರ ಪದ | = | ಸಂಧಿಪದ | ಸಂಧಿಯ ಹೆಸರು |
|---|---|---|---|---|---|
| ನೀನು | + | ಈಗ | = | ನೀನೀಗ | (ಲೋಪಸಂಧಿ) |
| ಪರಮ | + | ಆಶ್ಚರ್ಯ | = | ಪರಮಾಶ್ಚರ್ಯ | (ಸವರ್ಣ ದೀರ್ಘ ಸಂಧಿ) |
| ಕೈ | + | ಅಲ್ಲಿ | = | ಕೈಯಲ್ಲಿ | (ಆಗಮ ಸಂಧಿ) (ಯಕಾರ ಆಗಮ ಸಂಧಿ) |
| ಸಹಾಯ | + | ಆಯಿತು | = | ಸಹಾಯವಾಯಿತು | (ಆಗಮ ಸಂಧಿ) ( ವಕಾರಾಗಮ ಸಂಧಿ) |
| ಇನ್ನು | + | ಎಲ್ಲಿ | = | ಇನ್ನೆಲ್ಲಿ | (ಲೋಪಸಂಧಿ) |

'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರ |
|---|---|---|

| | | |
|---|---|---|
| 1. ಗೌರಿ | ಸಖಿ | ಹೆಂಡತಿ |
| 2. ಸಾಳುವ ತಿಮ್ಮರಸ | ರಾಜ | ಮಹಾಮಂತ್ರಿ |
| 3. ಕೃಷ್ಣ ದೇವರಾಯ | ಹೆಂಡತಿ | ರಾಜ |
| 4. ಮಂದಾರವಲ್ಲಿ | ವಿದೂಷಕ | ಸಖಿ |
| 5. ತೆನಾಲಿ ರಾಮಕೃಷ್ಣ | ರಾಣಿ | ವಿದೂಷಕ |
| | ಮಹಾಮಂತ್ರಿ | |

# 3. ಲಠ್ಠಣಿಗೆ ಪುರಾಣ

- ಯಮುನಾ ಮೂರ್ತಿ

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. 'ದಪ್ಪ' ಅನ್ನೋದಕ್ಕೆ ಧಾರವಾಡದ ಕಡೆ ಏನೆಂದು ಕರೆಯುತ್ತಾರೆ?
   'ಲಠ್ಠ' ಎಂದು ಕರೆಯುತ್ತಾರೆ
2. ಯಾರ ವಿಚಾರಸರಣಿ ಲೇಖಕಿಯ ಮನಸ್ಸಿನಲ್ಲಿ ಗೊಂದಲ ಎಬ್ಬಿಸಿತು?
   ಪ್ರಭಾಳ ವಿಚಾರ ಸರಣಿ ಲೇಖಕಿಯ ಮನಸ್ಸಿನಲ್ಲಿ ಗೊಂದಲ ಎಬ್ಬಿಸಿತು.
3. ಹಿಟ್ಟಿನ ಮುದ್ದೆಯನ್ನು ಚಪಾತಿ ಆಕಾರಕ್ಕೆ ತರುವ ಕ್ರಿಯೆಗೆ ಏನನ್ನುತ್ತಾರೆ?
   ಲಟ್ಟಿಸುವುದು ಎಂದು ಕರೆಯುತ್ತಾರೆ.
4. ಲಠ್ಠಣಿಗೆಯಿಂದ ಲಟ್ಟಿಸುವಾಗ ಕೇಳಿಸುವ ಶಬ್ದವೇನು?
   ಲಟ್ ಲಟ್ ಲಟ್ ಲಟ್ ಎಂಬ ಶಬ್ದ ಕೇಳಿಸುತ್ತದೆ.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. "ಲಠ್ಠಣಿಗೆ ಅಂತ ಯಾಕ ಕರೀತಾರೆ" ಎಂದು ಕೇಳಿದ ಪ್ರಶ್ನೆಗೆ ಅಜ್ಜಿ ಹೇಳಿದ ಉತ್ತರವೇನು?
   ಯಾಕೆ ಅಂದರೆ; ನಮ್ಮ ಅಜ್ಜಿ ಲಠ್ಠಣಿಗೆ ಅಂದ್ರು, ನಮ್ಮ ಅಮ್ಮನೂ ಲಠ್ಠಣಿಗೆ ಅಂದ್ರು, ನಾನು ಲಠ್ಠಣಿಗೆ ಅಂದೆ ನನ್ನ ಮಗಳೂ ಲಠ್ಠಣಿಗೆ ಅಂದಳು, ಈಗ ನೀನೂ ಅಂತಿದ್ದೀಯ" ಎಂಬುದು ಅಜ್ಜಿಯ ಉತ್ತರವಾಗಿದೆ.
2. ಲಠ್ಠಣಿಗೆಯ ಜನ್ಮ ರಹಸ್ಯದ ಬಗ್ಗೆ ವಿಚಾರ ಮಾಡಿ ಬಳಿಕ ಸಮಾಧಾನ ಪಟ್ಟುಕೊಂಡದ್ದು ಹೇಗೆ?
   ಲಠ್ಠಣಿಗೆಯ ಜನ್ಮ ರಹಸ್ಯದ ಬಗ್ಗೆ ವಿಚಾರ ಮಾಡಿ ಉತ್ತರ ಸಿಗದೆ ಬೇಸರವಾಗಿ ಕಡೆಗೆ ನಾಲ್ಕು ಬಿಸಿಬಿಸಿ ಚಪಾತಿ, ಬಾಳೆಹಣ್ಣಿನ ಸೀಕರಣೆ, ಆಲುಗಡ್ಡೆ ಪಲ್ಯವನ್ನು ತಿಂದು ಲೇಖಕರು ಸಮಾಧಾನ ಪಟ್ಟುಕೊಂಡರು.
3. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದ್ದು ಏಕೆ?
   ಪೂರ್ಣಿಮಾಳು ರಾತ್ರಿ ಮಲಗಿದಾಗಲೂ ಅವಳ ಕೈಗಳಿಂದ ಅವಳ ಗಂಡನ ಬೆನ್ನನ್ನು ರೊಟ್ಟಿ ಬಡಿದಂತೆ ಬಡಿದಿದ್ದರಿಂದ ಅವಳ ಗಂಡನ ಬೆನ್ನು ನೀಲಿ ಗಟ್ಟಿತು.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಲಾರಿ ಕೆಳಗೆ ಬಿದ್ದ ನಾಣ್ಯವನ್ನು 'ಲೊಟ್ಟ' ತೆಗೆದದ್ದು ಹೇಗೆ? ವಿವರಿಸಿರಿ.
   ಒಂದು ಸಲ ಒಂದು ಚಿಕ್ಕ ನಾಣ್ಯ ಕೈಜಾರಿ ಉರುಳಿಕೊಂಡು ಹೋಗಿ ಒಂದು ದೊಡ್ಡ ಲಾರಿಯ ಕೆಳಗೆ ಹೋಗಿಬಿಡುತ್ತೆ. ಭಾರಿ ಗಾತ್ರದ ದೇಹವನ್ನು ಹೊಂದಿದ್ದ ಲೊಟ್ಟಳು ದೇಹ ಬಗ್ಗಿಸಿ ಲಾರಿಯ ಕೆಳಗೆ ಬಿದ್ದಿರುವ ನಾಣ್ಯವನ್ನು ಹುಡುಕಲು ಸಾಧ್ಯವಾಗುವುದಿಲ್ಲ. ಆಗ ಲೊಟ್ಟಳು ಸುಲಭವಾಗಿ ಲಾರಿಯನ್ನು ಎತ್ತಿ ಪಕ್ಕಕ್ಕೆ ಸರಿಸಿ ನಾಣ್ಯವನ್ನು ತೆಗೆದುಕೊಳ್ಳುತ್ತಾಳೆ.

2. ಉರುಳು ಸೇವೆಯನ್ನು ಲೇಖಕಿ ಹೇಗೆ ಮಾಡಿದರು?

ಸನ್ಯಾಸಿಯ ಸಲಹೆಯಂತೆ ಗಂಡನ ಒಪ್ಪಿಗೆ ಪಡೆದು ಮನೆಗೆಲಸ ಮುಗಿಸಿ ಮಠಕ್ಕೆ ಹೋಗಿ ಅಲ್ಲಿ ಎಲ್ಲರ ಊಟವಾಗುವ ತನಕ ಕಾದಿದ್ದು, ಒದ್ದೆ ಸೀರೆ ಬಿಗಿಯಾಗಿ ಮೈಗೆ ಸುತ್ತಿ, ಎರಡು ಕೈಗಳನ್ನು ಮೇಲೆತ್ತಿ ಜೋಡಿಸಿ, ಕಾಲುಗಳನ್ನೂ ನೀಳವಾಗಿ ಜೋಡಿಸಿ ಭಕ್ತರು ಊಟ ಮಾಡಿದ ಎಂಜಲಿನ ಮೇಲೆ ಉರುಳು ಸೇವೆ ಮಾಡಿ ಮನೆಗೆ ಹಿಂದಿರುಗುತ್ತಿದ್ದರು.

3. ಲಥ್ಥಣಿಗೆಯ ಜನ್ಮ ರಹಸ್ಯ ಏನು?

ಎಂಜಲಿನಲ್ಲಿದ್ದ ಸಜ್ಜಿಗೆ ಉಂಡೆಗಳ ಮೇಲೆ ಪೂರ್ಣಿಮ ಉರುಳಿದಾಗ ಅವುಗಳ ರೊಟ್ಟಿಯಂತೆ ಆಕಾರ ತಾಳಿ ನೆಲಕ್ಕೆ ಅಂಟಿಕೊಂಡಿದ್ದವು. ಇದನ್ನು ಗಮನಿಸಿದ ಪೂರ್ಣಿಮ ಮರದ ತುಂಡನ್ನು ತೆಗೆದುಕೊಂಡು ಎರಡು ಕಡೆಗಳಲ್ಲಿಯೂ ಅದನ್ನು ಕೆತ್ತಿ ಹಿಡಿಯಲು ಜಾಗ ಮಾಡಿಕೊಂಡಳು. ನಂತರ ಹಿಟ್ಟಿನ ಮುದ್ದೆಯನ್ನು ಇಟ್ಟು ಮರದ ಕೊರಡಿನಿಂದ ಒತ್ತಿ ಉರುಳಿಸಿದಾಗ ಸುಲಭವಾಗಿ ತೆಳ್ಳನೆಯ ರೊಟ್ಟಿಯಾಯಿತು. ಹೀಗೆ ಪೂರ್ಣಿಮ ಲಥ್ಥಣಿಗೆಯನ್ನು ಕಂಡುಕೊಂಡಳು ಇದೆ ಲಥ್ಥಣಿಗೆಯ ಜನ್ಮ ರಹಸ್ಯವಾಗಿದೆ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. "ಅಯ್ಯ ನಮ್ಮವ್ವ, ಏನ್ ಲಥ್ಥ ಇದಾಳ ಈಕೆ!"

ಈ ಪಸ್ತುತ ವಾಕ್ಯವನ್ನು 'ಯಮುನಾ ಮೂರ್ತಿ' ಅವರು ಬರೆದಿರುವ 'ಪ್ರಸಾರ ಹಾಸ್ಯ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಲಥ್ಥಣಿಗೆ ಪುರಾಣ' ಎಂಬ ಗದ್ಯಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಅಪರಿಚಿತರೊಬ್ಬರು ಲೇಖಕಿಯನ್ನು ಕುರಿತು ಹೇಳಿದರು. ಲೇಖಕಿಯು ಧಾರವಾಡದ ಅವರ ಗೆಳತಿ ಪ್ರಭಳಾ ಮನೆಗೆ ಹೋಗಿದ್ದಾಗ ಅವರ ಮನೆಗೆ ಬಂದಿದ್ದ ಯಾರೊ ಅಪರಿಚಿತರೊಬ್ಬರು ಲೇಖಕರ ಗಾತ್ರವನ್ನು ನೋಡಿ "ಅಯ್ಯ ನಮ್ಮವ್ವ, ಏನ್ ಲಥ್ಥ ಇದಾಳ ಈಕೆ!" ಎಂದು ಹಾಸ್ಯ ಮಾಡುವ ಸಂದರ್ಭದಲ್ಲಿ ಈ ಮಾತು ಬಳಕೆಯಾಗಿದೆ.

2. "ನಿನ್ನ ಪುರಾಣ ಈಗ ನೀನೇ ಹೇಳ್ಬಿಡು"

ಈ ಪಸ್ತುತ ವಾಕ್ಯವನ್ನು 'ಯಮುನಾ ಮೂರ್ತಿ' ಅವರು ಬರೆದಿರುವ 'ಪ್ರಸಾರ ಹಾಸ್ಯ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಲಥ್ಥಣಿಗೆ ಪುರಾಣ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕಿಯು ಕನಸ್ಸಿನಲ್ಲಿ ಬಂದ ಲಥ್ಥಣಿಗೆಗೆ ಹೇಳುತ್ತಾಳೆ. ಲೇಖಕಿಯು ದಿನವಿಡಿ ಲಥ್ಥಣಿಗೆ ಜನ್ಮ ವೃತ್ತಾಂತದ ಬಗ್ಗೆ ತಲೆಕೆಡಿಸಿಕೊಂಡು ಉತ್ತರ ಸಿಕ್ಕದೆ ಊಟ ಮುಗಿಸಿ ಮಲಗಿಕೊಳ್ಳುತ್ತಾಳೆ. ಆಗ ಅವಳ ಕನಸ್ಸಿನಲ್ಲಿ ಲಥ್ಥಣಿಗೆಯು ಬಂದು ನಗುತ್ತಾ ನಾನು ಯಾರು ಗೊತ್ತಾಗಲಿಲ್ಲವೆ. ನಾನೇ ನೀನು ದಿನವಿಡಿ ತಲೆಕೆಡಿಸಿಕೊಂಡು ವಿಚಾರ ಮಾಡಿದ ಲಥ್ಥಣಿಗೆ ಎಂದು ಹೇಳುತ್ತದೆ. ಈ ಮಾತಿಗೆ ಪ್ರತಿಯಾಗಿ ಲೇಖಕಿಯು ಹೌದೆ ಹಾಗಿದ್ದರೆ "ನಿನ್ನ ಪುರಾಣ ಈಗ ನೀನೇ ಹೇಳ್ಬಿಡು" ಎಂದು ಹೇಳುತ್ತಾರೆ.

3. "ಇದು ನಿನ್ನ ಪೂರ್ವ ಜನ್ಮದ ಪಾಪದ ಫಲ"

ಈ ಪಸ್ತುತ ವಾಕ್ಯವನ್ನು 'ಯಮುನಾ ಮೂರ್ತಿ' ಅವರು ಬರೆದಿರುವ 'ಪ್ರಸಾರ ಹಾಸ್ಯ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಲಥ್ಥಣಿಗೆ ಪುರಾಣ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಸನ್ಯಾಸಿಯು ಪೂರ್ಣಿಮಾಳಿಗೆ ಹೇಳುತ್ತಾನೆ. ಲೇಖಕಿಯ ಕನಸ್ಸಿನಲ್ಲಿ ಬರುವ ಪೂರ್ಣಿಮ ಲಥ್ಥಣಿಗೆ ಸೃಷ್ಟಿಯಾದ ಹಿನ್ನೆಲೆಯನ್ನು ಹೇಳುವ ಸಂದರ್ಭದಲ್ಲಿ ತಾನು ನಿದ್ರೆಯಲ್ಲಿಯೂ ರೊಟ್ಟಿ ತಟ್ಟುವಂತೆ ಗಂಡನ ಬೆನ್ನನ್ನು ನೀಲಿಯಾಗುವಂತೆ ತಟ್ಟಿದ್ದರಿಂದ ಅವಳ ಗಂಡ ಕಾಟವನ್ನು ತಾಳಲಾರದೆ ವಿಚ್ಛೇದನ ನೀಡಲು ಮುಂದಾಗುತ್ತಾನೆ. ಇದರಿಂದ ಭಯಗೊಂಡ ಪೂರ್ಣಿಮ ಪರಿಹಾರಕ್ಕಾಗಿ ಸನ್ಯಾಸಿಯನ್ನು ಕೇಳಿದಾಗ ಸನ್ಯಾಸಿಯು "ಇದು ನಿನ್ನ ಪೂರ್ವ ಜನ್ಮದ ಪಾಪದ ಫಲ" ಎಂದು ಹೇಳುತ್ತಾನೆ.

ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

1. ಪುರಾಣ, ಹೂರಣ, ಪ್ರವಚನ, ಪುಣ್ಯಕಥೆ (ಹೂರಣ)
2. ಕರೀತಾರ, ಹ್ಯಾಂಗ, ಮನ್ಯಾಗಿನ, ಹೊಗಳುತ್ತಾ ( ಹೊಗಳುತ್ತಾ)
3. ಸಾಧ್ಯ, ಅಸಾಧ್ಯ, ದುಸ್ಸಾಧ್ಯ, ಸಾನ್ನಿಧ್ಯ ( ಸಾನ್ನಿಧ್ಯ)

ಕೆಳಗಿನ ಪದಗಳ ವಿರುದ್ದಾರ್ಥಕ ಪದ ಬರೆಯಿರಿ.

| | | | | | |
|---|---|---|---|---|---|
| ಸಮಾನ | x | ಅಸಮಾನ | ಸಾಧ್ಯ | x | ಅಸಾಧ್ಯ |
| ಅರ್ಥ | x | ಅನರ್ಥ | ಆಗಮನ | x | ನಿರ್ಗಮನ |

ಈ ಕೆಳಗಿನ ಪದಗಳ ನಾನಾರ್ಥ ಬರೆಯಿರಿ.

| | | |
|---|---|---|
| ಹೊಳೆ | - | ನದಿ, ಮಿಂಚುವುದು, ಹೊಳಪು |
| ಕರಿ | - | ಕಪ್ಪು, ಆನೆ |
| ತುಂಬಿ | - | ಭರ್ತಿಮಾಡಿ, ದುಂಬಿ |
| ಉರುಳು | - | ನೆಲದ ಮೇಲೆ ಉರುಳುವುದು, ಗಂಟು, ಹಗ್ಗ |

ಕೆಳಗಿನ ನುಡಿಗಟ್ಟುಗಳ ಅರ್ಥವನ್ನು ಬರೆಯಿರಿ.

| | | | | | |
|---|---|---|---|---|---|
| ಕಿವಿಗೊಡು | - | ಗಮನವಿಟ್ಟು ಆಲಿಸು | ಕಣ್ಣು ಕೆಂಪಾಗು | - | ಕೋಪ ಬರುವುದು |
| ನೀರುಕುಡಿದಂತೆ | - | ಅತ್ಯಂತ ಸುಲಭ | ಬೆನ್ತಟ್ಟು | - | ಪ್ರೋತ್ಸಾಹಿಸು |
| ಕಬ್ಬಿಣದ ಕಡಲೆ | - | ಅತ್ಯಂತ ಕಠಿಣ | ಹುಬ್ಬೇರಿಸು | - | ಗರ್ವಪಡು / ಹೆಮ್ಮೆಪಡು |

# 4. ಏರುವ ಬಾರ ಕೇದಾರ

**- ಲೀಲಾವತಿ ಎಸ್. ರಾವ್**

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ಲೇಖಕಿ ಚಿಕ್ಕಂದಿನಿಂದ ಯಾವ ಕನಸು ಕಾಣುತ್ತಿದ್ದರು?
   ಹಿಮಾಲಯದ ಕನಸು ಕಾಣುತ್ತಿದ್ದರು
2. ಬಿಸಿನೀರು ಹರಿದು ಎಲ್ಲಿಗೆ ಬೀಳುತ್ತದೆ?
   ಬಿಸಿನೀರು ಹರಿದು ಬಂದು ಕುಂಡದಲ್ಲಿ ಬೀಳುತ್ತದೆ.
3. ದಂಡಿ ಎಂದರೇನು?
   ಎರಡು ಕಡೆಗಳಲ್ಲಿ ದಂಡಿಗೆ ಇರುವ ಕುರ್ಚಿ ಆಕಾರದ ಒಂದು ವಸ್ತು ಇದನ್ನು ಸಾಗಾಟಕ್ಕೆ ಬಳಸುತ್ತಾರೆ.
4. 'ಗರುಡಚೆಟ್ಟಿ' ಹಳ್ಳಿಯಿಂದ ಕೇದಾರ ಶಿಖರ ಎಷ್ಟು ದೂರವಿದೆ?
   ಮೂರು ಕಿಲೋ ಮೀಟರ್ ದೂರವಿದೆ.
5. ಕೇದಾರನಾಥ ದೇವಾಲಯ ಯಾವ ಪರ್ವತದ ಮಡಿಲಿನಲ್ಲಿ ಇದೆ?
   ಸುಮೇರು ಪರ್ವತದ ಮಡಿಲಿನಲ್ಲಿದೆ.
6. ಕೇದಾರನಾಥ ಮಂದಿರದ ಹೊರವಲಯದಲ್ಲಿ ಯಾವ ಯಾವ ತೀರ್ಥಗಳಿವೆ?
   ಈಶಾನ್ಯ ಕುಂಡ, ಅಮೃತ ಕುಂಡ, ಹಂಸಕುಂಡ, ರೇತಸ ಕುಂಡ ಎಂಬ ತೀರ್ಥಗಳಿವೆ.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಗೌರೀಕುಂಡದಿಂದ ಕೇದಾರಶಿಖರಕ್ಕೆ ಯಾವ ಯಾವ ರೀತಿಯಲ್ಲಿ ಹೋಗಬಹುದು?
   ಗೌರೀಕುಂಡದಿಂದ ಕೇದಾರಕ್ಕೆ ನಡೆದು ಹೋಗಬಹುದು, ಇಲ್ಲವೆ ಕುದುರೆ ಮೇಲೆ ಅಥವಾ ಕಂಡಿ ಮತ್ತು ದಂಡಿ ಎಂಬುದರಲ್ಲಿ ಹೋಗಬಹುದು.
2. ಲೇಖಕಿಗೆ ಮರಿ ತೇನ್ ಸಿಂಗ್ ಆಗುವ ಆಸೆ ಏಕೆ ಆಯಿತು?
   ಕೇದಾರ ಪರ್ವತದ ನಡುವೆ ಏಳು ಸಾವಿರ ಅಡಿಗಳ ಎತ್ತರದ ಗೌರೀ ಕುಂಡದಲ್ಲಿ ನಿಂತು ಸುತ್ತಲಿನ ಹಿಮಾಲಯವನ್ನು ಕಂಡು ಬೆರಗಾಗಿದ್ದ ಲೇಖಕಿಗೆ ಕಾಲ್ನಡಿಗೆಯಲ್ಲೇ ಏರಿ ಮರಿ ತೇನ್ ಸಿಂಗ್ ಆಗುವ ಆಸೆಯಾಯಿತು.
3. ಕೇದಾರ ಏರುವಾಗ ಕುದರೆಯವನು ಲೇಖಕಿಗೆ ಏನೆಂದು ಸಲಹೆ ಕೊಟ್ಟನು?
   ಮೇಲಕ್ಕೆ ಹತ್ತುವಾಗ ಮುಂದೆ ಬಾಗಬೇಕೆಂದೂ, ಕೆಳಗೆ ಇಳಿಯುವಾಗ ಹಿಂದಕ್ಕೆ ಬಾಗಬೇಕೆಂದೂ, ದೇಹ ಸಡಿಲ ಬಿಟ್ಟು ಕೂರಬೇಕೆಂದೂ ಸಲಹೆ ಕೊಟ್ಟನು.
4. ಪಂಚಪರ್ವತಗಳು ಎಲ್ಲಿವೆ? ಅವು ಯಾವುವು?

ಪಂಚಪರ್ವತಗಳು ಸುಮೇರು ಪರ್ವತ ಶ್ರೇಣಿಯಲ್ಲಿವೆ. ಅವುಗಳೆಂದರೆ; ರುದ್ರ ಹಿಮಾಲಯ, ಬ್ರಹ್ಮಪುರಿ, ವಿಷ್ಣುಪುರಿ, ಉದ್ಗರಿಕಾಂತ, ಮತ್ತು ಸ್ವರ್ಗಾರೋಹಿಣಿ

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಕೇದಾರವ ಏರುವ ದಾರಿಯ ಪ್ರಕೃತಿ ವೈಭವವನ್ನು ಸಂಗ್ರಹಿಸಿ ಬರೆಯಿರಿ.

    ಕೇದಾರ ಏರುವ ದಾರಿಯು ಮಂದಾಕಿನೀ ನದಿಯ ಅಂಚಿನಲ್ಲೇ ಸಾಗುತ್ತದೆ. ದಾರಿಯ ಒಂದು ಕಡೆ ಎತ್ತರವಾದ ಪರ್ವತ, ಮತ್ತೊಂದು ಕಡೆ ಪ್ರಪಾತವಿದೆ. ಅದರ ಆಚೆಗೆ ಬೃಹದಾಕಾರದ ಹಿಮ ಆವರಿಸಿದ ಬಿಳಿಯ ಬೆಟ್ಟವಿದೆ. ಅಲ್ಲಲ್ಲಿ ಕಣ್ ತಣಿಸುವ ಹಸಿರು ಆವರಿಸಿದೆ. ಹಿಮಕರಗಿ ಹರಿದು ಬರುವ ಧಾರೆಗಳು ಅಲ್ಲಲ್ಲಿ ಕಂಡುಬರುತ್ತವೆ. ಅಲ್ಲದೆ ಬಿಸಿಲಿಗೆ ಬೆಟ್ಟ ಹೊಳೆಯುತ್ತದೆ.

2. ರಾಮಬಾಡ ಪ್ರದೇಶದ ಕಿರುದಾರಿಯನ್ನು 'ಮಿನಿ ವಿಶ್ವ' ವೆಂದು ಕರೆದುದು ಏಕೆ?

    ರಾಮಬಾಡ ಪ್ರದೇಶದ ಕಿರುದಾರಿಯಲ್ಲಿ ಮೇಲಿನಿಂದ ಬರುವವರು, ಕೆಳಗಿನಿಂದ ಏರುವವರು, ಕುದುರೆಗಳು, ದಂಡಿ, ಕಂಡಿಯವರು ಇವರಲ್ಲದೆ; ಸಾಧುಸಂತರು, ಹೆಂಗಸರು, ಗಂಡಸರು, ಮಕ್ಕಳು, ಮುದುಕರು, ಯುವಕರು, ವಿದೇಶಿಯರು – ಎಷ್ಟು ಭಾಷೆ!, ಎಷ್ಟು ವೇಷ! ಈ ಎಲ್ಲಾ ವೈವಿಧ್ಯತೆಗಳನ್ನು ಗಮನಿಸಿದ ಲೇಖಕಿಯು ರಾಮಬಾಡ ಪ್ರದೇಶದ ಕಿರುದಾರಿಯನ್ನು ಒಂದು 'ಮಿನಿ ವಿಶ್ವ' ಎಂದು ಕರೆದಿದ್ದಾರೆ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಆ ಎತ್ತರದಲ್ಲಾದರೂ ಮನುಷ್ಯ ಮೇಲು ಕೀಳು ಮರೆತಿದ್ದಾನೆ.

    ಈ ಪಸ್ತುತ ವಾಕ್ಯವನ್ನು 'ಲೀಲಾವತಿ ಎಸ್.ರಾವ್' ಅವರು ಬರೆದಿರುವ 'ಏರುವ ಬಾರ ಕೇದಾರ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

    ಈ ಮಾತನ್ನು ಲೇಖಕಿಯು ಓದುಗರಿಗೆ ಹೇಳುತ್ತಾರೆ. ಲೇಖಕಿಯು ಕೇದಾರ ದೇವಾಲಯದ ಸೌಂದರ್ಯವನ್ನು ವರ್ಣಿಸುತ್ತಾ; ಇಲ್ಲಿ ಜಾತಿ, ಮತ, ಲಿಂಗ ಯಾವ ಭೇದವೂ ಇಲ್ಲದೆ ಪ್ರತಿಯೊಬ್ಬರು ತಾವೇ ಮುಟ್ಟಿ ಪೂಜಿಸುವ ಅಪೂರ್ವ ಅವಕಾಶ ಇಲ್ಲಿದೆ. ಆ ಎತ್ತರದಲ್ಲಾದರೂ ಮನುಷ್ಯ ಮೇಲು ಕೀಳು ಮರೆತಿದ್ದಾನೆ ಎಂಬುದು ಸಂತೋಷದ ಸಂಗತಿ ಎಂದು ಹೇಳುತ್ತಾರೆ.

2. ಎಂತಹ ಅದ್ಭುತ ಕಲಾಕಾರನಪ್ಪ ಪ್ರಕೃತಿ

    ಈ ಪಸ್ತುತ ವಾಕ್ಯವನ್ನು 'ಲೀಲಾವತಿ ಎಸ್.ರಾವ್' ಅವರು ಬರೆದಿರುವ 'ಏರುವ ಬಾರ ಕೇದಾರ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

    ಈ ಮಾತನ್ನು ಲೇಖಕಿಯು ಓದುಗರಿಗೆ ಹೇಳುತ್ತಾರೆ. ಕೇದಾರಕ್ಕೆ ಹೋಗುವ ದಾರಿಯ ಒಂದು ಕಡೆ ಎತ್ತರವಾದ ಪರ್ವತ, ಮತ್ತೊಂದು ಕಡೆ ಪ್ರಪಾತವನ್ನು. ಅದರ ಆಚೆಗೆ ಬೃಹದಾಕಾರದ ಹಿಮ ಆವರಿಸಿದ ಬಿಳಿಯ ಬೆಟ್ಟವನ್ನು. ಅಲ್ಲಲ್ಲಿ ಕಣ್ ತಣಿಸುವ ಹಸಿರನ್ನು, ಅಲ್ಲಲ್ಲಿ ಕಂಡುಬರುವ ಹಿಮಕರಗಿ ಹರಿದು ಬರುವ ಧಾರೆಗಳನ್ನು ಹಾಗೂ ಬಿಸಿಲಿಗೆ ಹೊಳೆಯುವ ಬೆಟ್ಟವನ್ನು ಕಂಡು ಸೌಂದಾರ್ಯನುಭವಕ್ಕೆ ಒಳಗಾಗಿ ಲೇಖಕಿಯು 'ಎಂತಹ ಅದ್ಭುತ ಕಲಾಕಾರನಪ್ಪ ಪ್ರಕೃತಿ' ಎಂದು ಹೇಳುತ್ತಾಳೆ.

## ಭಾಷಾಭ್ಯಾಸ

ಅ) 'ಗಡ ಗಡ', 'ಥಳ ಥಳ' ಇಂತಹ ಐದು ಪದಗಳನ್ನು ಬರೆಯಿರಿ.

ಪಟ ಪಟ, ಚಟ ಚಟ, ಡಮ ಡಮ, ಜುಳು ಜುಳು, ಗರ ಗರ

ಆ) ಕ್ಷಣ ಕ್ಷಣ – ಇದನ್ನು ದ್ವಿರುಕ್ತಿ ಎನ್ನುತ್ತಾರೆ. ಇಂತಹ ಐದು ದ್ವಿರುಕ್ತಿಗಳನ್ನು ಬರೆಯಿರಿ.

ನೋಡು ನೋಡು, ಬೇಗ ಬೇಗ, ಅಲ್ಲಿ ಅಲ್ಲಿ, ನಡೆ ನಡೆ, ನಿಲ್ಲು ನಿಲ್ಲು

ಉ) ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಹೆಸರಿಸಿರಿ.

| ಪದ | ವಿಭಕ್ತಿ ಪ್ರತ್ಯಯ | ವಿಭಕ್ತಿಯ ಹೆಸರು |
|---|---|---|
| ಭಾರತದಲ್ಲಿ | ಅಲ್ಲಿ | ಸಪ್ತಮಿ ವಿಭಕ್ತಿ |
| ಹಿಮಾಲಯಕ್ಕೆ | ಕ್ಕೆ | ಚತುರ್ಥಿ ವಿಭಕ್ತಿ |
| ಹಿಮಾಲಯದ | ಅ | ಷಷ್ಠಿ ವಿಭಕ್ತಿ |
| ಹೃಷಿಕೇಶವನ್ನು | ಅನ್ನು | ದ್ವಿತೀಯ ವಿಭಕ್ತಿ |

ಊ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯ ಹೆಸರು ಬರೆಯಿರಿ.

| ಸಂಧಿ ಪದ | = | ಪೂರ್ವಪದ | + | ಉತ್ತರ ಪದ | - | ಸಂಧಿಯ ಹೆಸರು |
|---|---|---|---|---|---|---|
| ಹೋಗಬೇಕೆಂಬ | = | ಹೋಗಬೇಕು | + | ಎಂಬ | - | ಲೋಪ ಸಂಧಿ |
| ದೆಹಲಿಯಿಂದ | = | ದೆಹಲಿ | + | ಇಂದ | - | ಯಕರಾಗಮ ಸಂಧಿ ( ಆಗಮಸಂಧಿ) |
| ಪರ್ವತವನ್ನು | = | ಪರ್ವತ | + | ಅನ್ನು | - | ವಕರಾಗಮ ಸಂಧಿ ( ಆಗಮಸಂಧಿ) |
| ಸ್ವರ್ಗಾರೋಹಿಣಿ | = | ಸ್ವರ್ಗ | + | ಆರೋಹಿಣಿ | - | ಸವರ್ಣ ದೀರ್ಘ ಸಂಧಿ |
| ಕೇದಾರೇಶ್ವರ | = | ಕೇದಾರ | + | ಈಶ್ವರ | - | ಗುಣಸಂಧಿ |

ಋ) 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರ |
|---|---|---|
| 1. ಕೇದಾರೇಶ್ವರ | ಗೂಳಿಯ ಕಾಲುಗಳು | ಗೂಳಿಯ ಹಿಂಭಾಗ |
| 2. ತುಂಗನಾಥ | ಗೂಳಿಯ ಮುಖ | ಗೂಳಿಯ ಕಾಲುಗಳು |
| 3. ರುದ್ರನಾಥ | ಗೂಳಿಯ ಶಿರ | ಗೂಳಿಯ ಮುಖ |
| 4. ಮಹೇಶ್ವರ | ಗೂಳಿಯ ಹಿಂಭಾಗ | ಗೂಳಿಯ ಹೊಟ್ಟೆ |
| 5. ಕಪಾಲೇಶ್ವರ | ಗೂಳಿಯ ಹೊಟ್ಟೆ | ಗೂಳಿಯ ಶಿರ |
| | ಗೂಳಿಯ ಬಾಲ | |

# 5. ಬಹುಮುಖ ರಂಗ ಪ್ರತಿಭೆಯ ಬಿ.ವಿ. ಕಾರಂತ

– ಹಾ.ಸಾ.ಕೃ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. 'ಕೃಷ್ಣಲೀಲಾ' ನಾಟಕವನ್ನು ನೋಡಲು ಕಾರಂತರು ಹೋದ ಬಗೆ ಹೇಗೆ?

   ಮಂಗಳೂರಿನಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಕೃಷ್ಣಲೀಲಾ ನಾಟಕವನ್ನು ನೋಡಲು ಊರಿನಿಂದ ಪಾಣೆಮಂಗಳೂರಿಗೆ ನಡೆದು ಕೊಂಡು ಹೋಗಿ ಅಲ್ಲಿಂದ ಒಂದು ಬಾಡಿಗೆ ಸೈಕಲ್ ತೆಗೆದುಕೊಂಡು ಹೋಗಿದ್ದರು.
2. ಯಾರ ಬಳಿಯಲ್ಲಿ ಕಾರಂತರು ಶಿಷ್ಯವೃತ್ತಿ ಗಿಟ್ಟಿಸಿದರು?

   ಬೆಳ್ಳಾವೆ ನರಹರಿ ಶಾಸ್ತ್ರೀ, ಬಿ.ಪುಟ್ಟಸ್ವಾಮಯ್ಯ ಮುಂತಾದವರ ಬಳಿ ಶಿಷ್ಯವೃತ್ತಿ ಗಿಟ್ಟಿಸಿಕೊಂಡರು.
3. ಕಾರಂತರಿಗೆ ಗುಬ್ಬಿಕಂಪೆನಿಯಲ್ಲಿ ವಿಶೇಷವಾಗಿ ಯಾವ ಪಾತ್ರ ಸಿಗುತ್ತಿತ್ತು?

   ಕಾರಂತರಿಗೆ ಗುಬ್ಬಿ ಕಂಪೆನಿಯಲ್ಲಿ ವಿಶೇಷವಾಗಿ ಸ್ತ್ರೀ ಪಾತ್ರ ಸಿಗುತ್ತಿತ್ತು.
4. ಹಿಂದಿ ಉಪಭಾಷೆ ಬುಂದೇಲಿಯಲ್ಲಿ ಪ್ರಯೋಗವಾದ ನಾಟಕ ಯಾವುದು?

   ಮಾಲವಿಕಾಗ್ನಿ ಮಿತ್ರ ನಾಟಕ
5. ಎಷ್ಟು ನಾಟಕಗಳನ್ನು ಕಾರಂತರು ನಿರ್ದೇಶಿಸಿದ್ದಾರೆ?

   ದೇಶ – ವಿದೇಶಿ ಭಾಷೆಗಳಲ್ಲಿ ಒಟ್ಟು 104 ನಾಟಕಗಳನ್ನು ನಿರ್ದೇಶಿಸಿದ್ದಾರೆ.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಬಾಲ್ಯದಲ್ಲಿ ಕಾರಂತರಿಗೆ ಸಿಕ್ಕ ಕಲಾಶ್ರೀಮಂತಿಕೆ ಯಾವ ಯಾವ ಬಗೆಯವು?

   ತಾಯಿ ಲಕ್ಷಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತಮುತ್ತಲ ಊರುಗಳ ಜಾತ್ರೆ, ಭೂತಕೋಲ, ರಥೋತ್ಸವ, ಪಾಡ್ದನಗಳು, ಪಾತ್ರಿಯ ದರ್ಶನ, ವಾದ್ಯಗಳ ಧ್ವನಿ ಕಾರಂತರಿಗೆ ಬಾಲ್ಯದಲ್ಲಿ ಸಿಕ್ಕ ಶ್ರೀಮಂತಿಕೆಗಳು.
2. ಕಾರಂತರ ವಿದ್ಯಾಭ್ಯಾಸವನ್ನು ಕುರಿತು ಬರೆಯಿರಿ.

   ಬಡತನದ ಕಾರಣದಿಂದ ಕಾರಂತರು ಎಂಟನೆ ತರಗತಿಯ ಓದು ಮುಗಿಸುವ ಹೊತ್ತಿಗೆ ಅವರು ಶಾಲೆಯನ್ನು ಬಿಡಬೇಕಾಗಿ ಬಂತು. ಮುಂದೆ ಬನರಸ್ ವಿಶ್ವವಿದ್ಯಾಲಯದ ಮೂಲಕ ಹಿಂದಿ ಪದವಿಯನ್ನು ಪಡೆದರು. ಅಲ್ಲದೆ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಎರಡು ವರ್ಷದ ಪದವಿಯನ್ನು ಪಡೆದರು.
3. ಮಕ್ಕಳ ರಂಗಭೂಮಿಗೆ ಕಾರಂತರ ಕೊಡುಗೆ ಏನು?

   ಪಂಜರ ಶಾಲೆ, ಕಿಂದರಿ ಜೋಗಿ, ಮೂಕನ ಮಕ್ಕಳು ಮೊದಲಾದ ನಾಟಕಗಳನ್ನು ಮಕ್ಕಳಿಗಾಗಿ ಮಾಡಿಸಿದ್ದಾರೆ ಮತ್ತು ಮಕ್ಕಳ ರಂಗದ ಕಲ್ಪನೆಯ ಮೂಲಕ ಚಿಣ್ಣರಿಗಾಗಿ ಹೊಸ ರಂಗಲೋಕ ನಿರ್ಮಿಸಿದ್ದಾರೆ. ಇವು ಮಕ್ಕಳ ರಂಗಭೂಮಿಗೆ ಕಾರಂತರ ಕೊಡುಗೆಗಳಾಗಿವೆ.
4. ಆಧುನಿಕ ಹವ್ಯಾಸಿ ರಂಗಭೂಮಿಗೆ ಕಾರಂತರು ಭದ್ರ ಬುನಾದಿಯನ್ನು ಹೇಗೆ ನಿರ್ಮಾಣ ಮಾಡಿದರು?

ಬೆಂಗಳೂರಿನ ಸಂಸ ಬಯಲುರಂಗದಲ್ಲಿ ಮೂರು ನಾಟಕಗಳ ಉತ್ಸವವನ್ನು ಮಾಡಿದ ಕಾರಂತರು ಆಧುನಿಕ ಹವ್ಯಾಸಿ ರಂಗಭೂಮಿಗೆ ಭದ್ರ ಬುನಾದಿ ಹಾಕಿದರು.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಗುಬ್ಬಿ ಕಂಪೆನಿಯಲ್ಲಿ ಕಾರಂತರು ಹೇಗೆ ಅಭಿವೃದ್ಧಿ ಹೊಂದಿದರು?

    ಗುಬ್ಬಿ ಕಂಪೆನಿಯನ್ನು ಸೇರಿದ ಕಾರಂತರು ತಮ್ಮ ಓದು ಮತ್ತು ಸಂಗೀತದ ಆಸಕ್ತಿಯನ್ನು ಕಡಿಮೆ ಮಾಡಿಕೊಳ್ಳಲಿಲ್ಲ. ಬಿಡುವು ಸಿಕ್ಕಾಗಲೆಲ್ಲ ಓದುತ್ತಿದ್ದರು. ಹಾರ್ಮೋನಿಯಂ ಕಲಿತರು, ಹಾಗೂ ಬೆಳ್ಳಾವೆ ನರಹರಿ ಶಾಸ್ತ್ರೀ, ಬಿ.ಪುಟ್ಟಸ್ವಾಮಯ್ಯ ಮುಂತಾದವರ ಬಳಿ ಶಿಷ್ಯವೃತ್ತಿಗೆ ಸೇರಿ ಹಸ್ತಪ್ರತಿ ಮಾಡುವ ಕೆಲಸ ಕಲಿತರು.

2. ಮೈಸೂರಿನಲ್ಲಿ ರೆಪರ್ಟರಿ ಆರಂಭಗೊಂಡ ಸನ್ನಿವೇಶವನ್ನು ಕುರಿತು ಬರೆಯಿರಿ.

    ಮೈಸೂರಿನ ಕಲಾಮಂದಿರದ ಹಿಂಭಾಗದ ಪಾಳುಬಿದ್ದ ಜಾಗವನ್ನು ಕಾರಂತರು ಮತ್ತು ಇತರೆ ನಟರೆಲ್ಲಾ ಸೇರಿ ಶುದ್ಧಗೊಳಿಸಿದರು. ಸರ್ಕಾರದ ಮುಂದಾಗಲಿ, ಸಾರ್ವಜನಿಕರ ಮುಂದಾಗಲಿ ಬೇಡಿಕೆಗಳನ್ನು ಇಡಬೇಕಾದರೆ ಮೊದಲಿಗೆ ನಾವು ದುಡಿದು ಕೆಲಸ ಮಾಡಿ ತೋರಿಸಿ ಆ ಬೇಡಿಕೆಗಳಿಗೆ ಅರ್ಹರಾಗಬೇಕು ಎಂಬುದು ಅವರ ನಿಲುವಾಗಿತ್ತು. ಹಾಗೆಯೇ ಮಾಡಿದರು ಇದರ ಫಲವಾಗಿ ರೆಪರ್ಟರಿ ಆರಂಭವಾಯಿತು.

3. ಬಿ.ವಿ. ಕಾರಂತರು ನಿರ್ದೇಶಿಸಿದ ನಾಟಕ ಮತ್ತು ಚಲನಚಿತ್ರಗಳನ್ನು ಕುರಿತು ಬರೆಯಿರಿ.

    ಬಿ.ವಿ. ಕಾರಂತರು ಕಿಂದರಿಜೋಗಿ, ಚಂದ್ರಹಾಸ, ಮೂಕನ ಮಕ್ಕಳು ಸೇರಿದಂತೆ ದೇಶ- ವಿದೇಶಿ ಭಾಷೆಗಳಲ್ಲಿ 104 ನಾಟಕಗಳು ನಿರ್ದೇಶಿಸಿದ್ದಾರೆ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಚೋಮನ ದುಡಿ ಮುಂತಾದ ರಾಷ್ಟ್ರ ಪ್ರಶಸ್ತಿ ವಿಜೇತ ಚಿತ್ರಗಳು ಹಾಗೂ ಸಾಕ್ಷ್ಯ ಚಿತ್ರಗಳೂ ಸೇರಿದಂತೆ 8 ಚಿತ್ರಗಳಿಗೆ ನಿರ್ದೇಶನ ನೀಡಿದ್ದಾರೆ. 25 ಚಿತ್ರಗಳಿಗೆ ಹಿನ್ನೆಲೆ ಸಂಗೀತವನ್ನು ನೀಡಿದ್ದಾರಲ್ಲದೆ; ಸಂಸ್ಕೃತದಿಂದ ಹಿಂದಿಗೆ, ಕನ್ನಡದಿಂದ ಹಿಂದಿಗೆ 12 ನಾಟಕಗಳನ್ನು ಭಾಷಾಂತರಿಸಿದ್ದಾರೆ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಅವರು ಪಾಠ ಹೇಳುತ್ತಿದ್ದ ಮನೆಯಿಂದ ಹಣ ಕದಿಯುತ್ತಿದ್ದರು.

    ಈ ಪಸ್ತುತ ವಾಕ್ಯವನ್ನು 'ಹಾ.ಸಾ.ಕೃ.' ಅವರು ಬರೆದಿರುವ 'ಬಹುಮುಖ ರಂಗಪ್ರತಿಭೆಯ ಬಿ.ವಿ.ಕಾರಂತ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

    ಈ ಮಾತನ್ನು ಲೇಖಕರು ಹೇಳುತ್ತಾರೆ. ಕಾರಂತರು ಎಂಟನೇ ತರಗತಿಯನ್ನು ಓದುತ್ತಿದ್ದ ವೇಳೆಗೆ ಬಡತನದ ಕಾರಣದಿಂದ ಓದು ಬಿಡಬೇಕಾಯಿತು. ಅಲ್ಲದೆ ಓದಿನ ಆಸಕ್ತಿಯಿದ್ದ ಕಾರಂತರಿಗೆ ಪುಸ್ತಕ ಕೊಳ್ಳಲು ಹಣವಿಲ್ಲದಾದಾಗ 'ಅವರು ಪಾಠ ಹೇಳುತ್ತಿದ್ದ ಮನೆಯಿಂದ ಹಣ ಕದಿಯುತ್ತಿದ್ದರು'. ಎಂದು ಲೇಖಕರು ಕಾರಂತರನ್ನು ಕುರಿತು ಹೇಳುತ್ತಾರೆ.

2. ತಾನು ಏನು ಅಲ್ವೋ ಅದನ್ನೆ ಮಾಡೋದೇ ಅಭಿನಯ.

    ಈ ಪಸ್ತುತ ವಾಕ್ಯವನ್ನು 'ಹಾ.ಸಾ.ಕೃ.' ಅವರು ಬರೆದಿರುವ 'ಬಹುಮುಖ ರಂಗಪ್ರತಿಭೆಯ ಬಿ.ವಿ.ಕಾರಂತ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

    ಈ ಮಾತನ್ನು ಬೆಳ್ಳಾವೆ ನರಹರಿ ಶಾಸ್ತ್ರಿಗಳು ಕಾರಂತರಿಗೆ ಹೇಳುತ್ತಾರೆ. ಕಾರಂತರು ಗುಬ್ಬಿ ಕಂಪನಿಯಲ್ಲಿ ಬರೀ ಸ್ತ್ರೀ ಪಾತ್ರಗಳನ್ನೇ ಮಾಡುತ್ತಿದ್ದರಿಂದ ಮುಜುಗರಕ್ಕೆ ಒಳಗಾಗಿ ಕಾರಂತರು ಒಮ್ಮೆ ಬೆಳ್ಳಾವೆ ನರಹರಿ ಶಾಸ್ತ್ರಿಗಳನ್ನು ಹೇಗೆ ಸ್ವಾಮಿ ಇದು ಗಂಡಸರು ಹೆಣ್ಣು ಪಾತ್ರವನ್ನು ಮಾಡುವುದು ಸರಿನಾ ಎಂದು

ಕೇಳುತ್ತಾರೆ. ಅದಕ್ಕೆ ಉತ್ತರವಾಗಿ ಬೆಳ್ಳಾವೆ ನರಹರಿ ಶಾಸ್ತ್ರಿಗಳು 'ತಾನು ಏನು ಅಲ್ವೋ ಅದನ್ನೆ ಮಾಡೋದೇ ಅಭಿನಯ'. ಎಂದು ಹೇಳುತ್ತಾರೆ.

## ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

| | | | | | | |
|---|---|---|---|---|---|---|
| ಹಾಡುತ್ತಿದ್ದ | = | ಹಾಡುತ್ತ | + | ಇದ್ದ | - | ಲೋಪ ಸಂಧಿ |
| ಲೋಕವನ್ನು | = | ಲೋಕ | + | ಅನ್ನು | - | ವಕರಾಗಮ ಸಂಧಿ ( ಆಗಮಸಂಧಿ) |
| ತಂದೊಡ್ಡಿತು | = | ತಂದು | + | ಒಡ್ಡಿತು | - | ಲೋಪಸಂಧಿ |
| ರಥೋತ್ಸವ | = | ರಥ | + | ಉತ್ಸವ | - | ಗುಣಸಂಧಿ |
| ನವೋದಯ | = | ನವ | + | ಉದಯ | - | ಗುಣಸಂಧಿ |

ಆ) ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

| | | | | | | | | |
|---|---|---|---|---|---|---|---|---|
| ಅನುಭವ | x | ಅನನುಭವ | ದುರ್ದೈವ | x | ಸುದೈವ | ವಿಫಲತೆ | x | ಸಫಲತೆ |
| ಜ್ಞಾನ | x | ಅಜ್ಞಾನ | ವೇಳೆ | x | ಅಪವೇಳೆ | | | |
| ಶುದ್ಧ | x | ಅಶುದ್ಧ | ಆಸಕ್ತಿ | x | ಅನಾಸಕ್ತಿ | | | |

ಇ) ಇವುಗಳಿಗೆ ತದ್ಭವಗಳನ್ನು ಬರೆಯಿರಿ.

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ಜಾತ್ರೆ | ಜಾಳ್ತೆ | ಧ್ವನಿ | ದನಿ |
| ವರ್ಣ | ಬಣ್ಣ | ಅದ್ಭುತ | ಅದುಬುತ |
| ಪುಸ್ತಕ | ಹೊತ್ತಗೆ | ದೃಷ್ಟಿ | ದಿಟ್ಟಿ |
| ಸಂಸ್ಕೃತ | ಸಕ್ಕದ | ವಿಧಿ | ಬಿದಿ |

ಈ) ಈ ಕೆಳಗಿನ ಪದಗಳನ್ನು ನಾಮಪದ – ಕ್ರಿಯಾಪದಗಳ ಅರ್ಥ ಬರುವಂತೆ ವಾಕ್ಯ ರಚಿಸಿರಿ.

| | | | |
|---|---|---|---|
| ಕಲಿ | ನಾಮಪದದ ಅರ್ಥದಲ್ಲಿ | : | ಕಲಿಗಳು ಯುದ್ಧ ಭೂಮಿಯಲ್ಲಿ ಹೋರಾಡುತ್ತಾರೆ. |
| | ಕ್ರಿಯಾಪದದ ಅರ್ಥದಲ್ಲಿ | : | ನಾನು ಕನ್ನಡವನ್ನು ಕಲಿಯುತ್ತೇನೆ. |
| ತಿಳಿ | ನಾಮಪದದ ಅರ್ಥದಲ್ಲಿ | : | ತಿಳಿ ನೀರು ಕುಡಿಯಲು ಒಳ್ಳೆಯದು |
| | ಕ್ರಿಯಾಪದದ ಅರ್ಥದಲ್ಲಿ | : | ರಾಮನು ಪದದ ಅರ್ಥವನ್ನು ತಿಳಿದುಕೊಂಡನು. |
| ಕರೆ | ನಾಮಪದದ ಅರ್ಥದಲ್ಲಿ | : | ಕರೆಯು ಬಟ್ಟೆಯ ಅಂದವನ್ನು ಹಾಳು ಮಾಡಿತು. |
| | ಕ್ರಿಯಾಪದದ ಅರ್ಥದಲ್ಲಿ | : | ಗಾಂಧೀಜೀ ಅವರನ್ನು ಬಾಪೂ ಎಂದು ಕರೆಯುತ್ತಾರೆ. |
| ಆರು | ನಾಮಪದದ ಅರ್ಥದಲ್ಲಿ | : | ಆರು ರೂಪಾಯಿಯನ್ನು ಕೊಟ್ಟನು. |
| | ಕ್ರಿಯಾಪದದ ಅರ್ಥದಲ್ಲಿ | : | ಚಹಾ ಆರಿತು. |

ಉ) ಕೆಳಗಿನ ಕ್ರಿಯಾಪದಗಳಲ್ಲಿ ಇರುವ ಧಾತುವನ್ನು ಗುರುತಿಸಿ ಬರೆಯಿರಿ.

| ಕ್ರಿಯಾಪದ | ಧಾತು | ಕ್ರಿಯಾಪದ | ಧಾತು |
|---|---|---|---|

| | | | |
|---|---|---|---|
| ನೋಡಲು | ನೋಡು | ಮಾಡಿದರು | ಮಾಡು |
| ನುಡಿಸು | ನುಡಿ | ಕಳೆದುಕೊಳ್ಳು | ಕಳೆ |

ಊ) ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ತುಂಬಿರಿ.

1. ಬಿ.ವಿ. ಕಾರಂತರ ಹುಟ್ಟೂರು <u>ಬಾಬುಕೋಡಿ ಗ್ರಾಮ</u>
2. ಮಂಗಳೂರಿನಲ್ಲಿ ಗುಬ್ಬಿ ಕಂಪೆನಿಯವರು ಪ್ರದರ್ಶನ ನೀಡುತ್ತಿದ್ದ ನಾಟಕ <u>ಕೃಷ್ಣಲೀಲಾ</u>
3. ಅಭಿನಯದ ಬಗ್ಗೆ ಕಾರಂತರಿಗೆ ತಿಳಿಯ ಪಡಿಸಿದವರು <u>ಬೆಳ್ಳಾವೆ ನರಹರಿ ಶಾಸ್ತ್ರಿಗಳು</u>
4. ಕಾರಂತರು ಹಿಂದಿಯಲ್ಲಿ ಪದವಿ ಪಡೆದ ವಿಶ್ವವಿದ್ಯಾಲಯದ ಹೆಸರು <u>ಬನಾರಸ್</u>

ಋ) 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರ |
|---|---|---|
| 1. ನಾರಣಪ್ಪಯ್ಯ | ಕುವೆಂಪು | ಕಾರಂತರ ತಂದೆ |
| 2. ಪದ್ಮಶ್ರೀ | ಬೇಸಾಯ | ಒಂದು ರಾಷ್ಟ್ರೀಯ ಪ್ರಶಸ್ತಿ |
| 3. ಕಿಂದರಿಜೋಗಿ | ಬಿ.ಪುಟ್ಟಸ್ವಾಮಯ್ಯ | ಕುವೆಂಪು |
| 4. ವ್ಯವಸಾಯ | ಕಾರಂತರ ತಂದೆ | ಬೇಸಾಯ |
| | ಒಂದು ರಾಷ್ಟ್ರೀಯ ಪ್ರಶಸ್ತಿ | |

# 6. ಕರ್ಮಯೋಗಿ

- ಗೊರೂರು ರಾಮಸ್ವಾಮಿ ಅಯ್ಯಂಗಾರ್

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ತಗಡೂರು ರಾಮಚಂದ್ರರಾಯರ ಉಡುಪು ಯಾವುದನ್ನು ಪ್ರತಿನಿಧಿಸುತ್ತಿದ್ದಿತು?
   ರಾಷ್ಟ್ರಧ್ವಜವನ್ನು ಪ್ರತಿನಿಧಿಸುತ್ತಿದ್ದಿತು
2. ಮಾರಿಯಮ್ಮನ ಪೂಜಾರಿಯಂತೆ ರಾಯರು ಕಾಣುತ್ತಿದ್ದದ್ದು ಏಕೆ?
   ಕೇಸರಿ ಬಣ್ಣದ ಗಾಂಧಿ ಟೋಪಿ, ಹಸಿರು ಬಣ್ಣದ ಜುಬ್ಬ, ಬಿಳಿಯ ಪಂಚೆ ಇವುಗಳನ್ನು ಧರಿಸುತ್ತಿದ್ದರಿಂದ ಮಾರಿಯಮ್ಮನ ಪೂಜಾರಿಯಂತೆ ಕಾಣುತ್ತಿದ್ದರು.
3. ರಾಯರು ಕೈಗಾಡಿಯಲ್ಲಿ ಏನನ್ನು ಮಾರುತ್ತಿದ್ದರು?
   ಸ್ವದೇಶಿ ಸಾಮಾನುಗಳನ್ನು
4. ಕಣೆಯರ ಮೊದಲ ಸಮ್ಮೇಳನ ಎಲ್ಲಿ ನಡೆಯಿತು?
   ತಿರುಮಕೂಡಲು ನರಸೀಪುರದ ತೋಪಿನಲ್ಲಿ ನಡೆಯಿತು.
5. ಗಾಂಧಿಯುಗದಲ್ಲಿ ದೊರೆತ ದೊಡ್ಡ ನಿಧಿ ಯಾರು?
   ಗಾಂಧಿಯುಗದಲ್ಲಿ ದೊರೆತ ದೊಡ್ಡ ನಿಧಿ 'ರಾಮಚಂದ್ರರಾಯರು'

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಜನರ ಮನಸ್ಸನ್ನು ತಿರುಗಿಸಲು ರಾಯರು ಏನು ಮಾಡುತ್ತಿದ್ದರು?
   ದಾರಿಯಲ್ಲಿ ಸಿಕ್ಕಿದ ಜನರೊಂದಿಗೆ ಗಂಟೆಗಟ್ಟಲೆ ಸ್ವರಾಜ್ಯ, ಸ್ವದೇಶಿ, ಗ್ರಾಮಗಳ ಏಳಿಗೆಯ ವಿಚಾರಗಳನ್ನು ಚರ್ಚಿಸುತ್ತಿದ್ದರು. ಹೀಗೆ ಜನರ ರಾಯರು ಜನರ ಮನಸ್ಸನು ಸ್ವತಂತ್ರ ಚಳುವಳಿಯ ಕಡೆ ತಿರುಗಿಸುತ್ತಿದ್ದರು.
2. ರಾಯರು ಮಾಡಿದ ಎರಡು ಮುಖ್ಯ ಕಾರ್ಯಗಳು ಯಾವುವು?
   ಜನತೆಯನ್ನು ಸ್ವಾತಂತ್ರ, ಸ್ವರಾಜ್ಯಕ್ಕಾಗಿ ಪ್ರೇರೆಪಿಸುವುದು ಮತ್ತು ಸ್ವಾವಲಂಬನೆಗಾಗಿ ಹಳ್ಳಿಗರನ್ನು ಸಿದ್ಧಗೊಳಿಸುವುದು ಇವೆರಡೂ ರಾಯರ ಮುಖ್ಯ ಕಾರ್ಯಗಳಾಗಿದ್ದವು.
3. ರಾಯರನ್ನು 'ಭೋಟಾ ಗಾಂಧಿ' ಎಂದು ಏಕೆ ಕರೆದಿದ್ದಾರೆ?
   ಗಾಂಧಿಜೀ ಅವರು ಪ್ರಾರಂಭಿಸಿದ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ರಾಯರು ದೇಶದ ನಾನಾ ಭಾಗಗಳಲ್ಲಿ, ಕಾಲು ನಡಿಗೆಯಲ್ಲಿಯೇ ಸಂಚರಿಸಿ ಅಸಹಕಾರ ಪ್ರಚಾರ ಕಾರ್ಯವನ್ನು ಏಕಾಂಗಿಯಾಗಿ ನಡೆಸಿದ್ದರಿಂದ ಭೋಟಾ ಗಾಂಧಿ ಎಂದು ಕರೆದಿದ್ದಾರೆ.
4. ರಾಯರನ್ನು 'ಪರಿಪೂರ್ಣ ವಿದ್ಯಾವಂತರು' ಎಂದು ಏಕೆ ಕರೆಯುತ್ತಾರೆ.

ರಾಯರು ಇಂಗ್ಲಿಷ್, ಸಂಸ್ಕೃತ ಮತ್ತು ಕನ್ನಡದಲ್ಲಿ ಸಹ ವಿದ್ಯಾವಂತರಲ್ಲ. ಆದರೂ ಯಾವ ವಿಷಯವನ್ನಾದರೂ ತುಂಬ ಶ್ರದ್ದೆಯಿಂದ ಆಸಕ್ತಿಯಿಂದ ಚರ್ಚಿಸಿ ತಮ್ಮ ವಾದಕ್ಕೆ ಇತರರ ಮನಸ್ಸನ್ನು ಸೆಳೆಯುವ ಶಕ್ತಿಯುಳ್ಳವರಾಗಿದ್ದರು ಆದ್ದರಿಂದ ಅವರನ್ನು ಪರಿಪೂರ್ಣ ವಿದ್ಯಾವಂತರು ಎಂದು ಕರೆಯುತ್ತಾರೆ.

5. ತಗಡೂರರ ಸಾಂಸಾರಿಕ ಬದುಕನ್ನು ಕುರಿತು ತಿಳಿಸಿರಿ.

ಎಂತಹ ಹೆಣ್ಣು ಬೇಕು ಎಂಬುದನ್ನು ಪತ್ರಿಕೆಯಲ್ಲಿ ಜಾಹಿರಾತು ಕೊಟ್ಟು ಮದುವೆಯಾದರು ಕೂಡ ರಾಯರು ಸಂಸಾರದಲ್ಲಿ ಅನಾಸಕ್ತಿಯನ್ನು ಹೊಂದಿದರು. ಅಲ್ಲದೆ ಪತ್ನಿ ವಿಯೋಗವನ್ನು ಸಹಿಸಿಕೊಂಡಿದ್ದ ಇವರಿಗೆ ಸಂಸರಬಂಧನವಿದ್ದರೂ ಇಲ್ಲದಂತಿರುವುದು ಅಭ್ಯಾಸವಾಗಿ ಬಿಟ್ಟಿತ್ತು.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ತಗಡೂರರನ್ನು ಲೇಖಕರು 'ಸ್ವದೇಶಿ ರಥದ ಜಂಗಮ ಮೂರ್ತಿ ಎಂದು ಕರೆಯಲು ಕಾರಣವೇನು?

ತಗಡೂರರು ವೇಷ ಭೂಷಣಗಳಲ್ಲಿಯು ಸ್ವದೇಶಿಯ ಸಂಕೇತವನ್ನು ಆಚರಿಸುತ್ತಿದ್ದರು. ಉಡುಪಿನ ಮೇಲೆಲ್ಲ ಸ್ವದೇಶಿಯ ಘೋಷಣೆಗಳನ್ನು ಬರೆಸಿಕೊಂಡಿರುತ್ತಿದ್ದರು. ಅಲ್ಲದೆ ಇವರ ಉಡುಪು ರಾಷ್ಟ್ರಧ್ವಜವನ್ನು ಪ್ರತಿನಿಧಿಸುತ್ತಿತ್ತು. ಇದೆಲ್ಲವನ್ನು ಗಮನಿಸಿ ತಗಡೂರರನ್ನು ಲೇಖಕರು 'ಸ್ವದೇಶಿ ರಥದ ಜಂಗಮ ಮೂರ್ತಿ' ಎಂದು ಕರೆದಿದ್ದಾರೆ.

2. ತಗಡೂರರ ಖಾದಿ ಕೇಂದ್ರ ಹೇಗೆ ಯಶಸ್ವಿಯಾಯಿತು?

ರಾಯರು 1925ರ ವೇಳೆಗೆ 'ತಗಡೂರು ಆಶ್ರಮ ಖಾದಿ ಕೇಂದ್ರ'ವನ್ನು ಸ್ಥಾಪಿಸಿದರು ಇವರ ಖಾದಿ ಸಂಸ್ಥೆ ಬಹುಬೇಗ ಜನಪ್ರಿಯವಾಯಿತು. ಅಲ್ಲದೆ ಗ್ರಾಮಗಳ ನಿರುದ್ಯೋಗ ನಿವಾರಣೆಗೆ ಸಾಧಕವೂ ಆಯಿತು. ಇವರ ಪ್ರಾಮಾಣಿಕತೆಯ ಫಲದಿಂದಾಗಿ ಸಾರ್ವಜನಿಕರಿಂದ ಧನಸಹಾಯವೂ ಮತ್ತು ಕೆಸಲಗಾರರೂ ದೊರಕಿದರು. ಮಿತವ್ಯಯ ಮತ್ತು ದಕ್ಷತೆಯಿಂದ ಚರಕ ಸಂಘವನ್ನು ಉನ್ನತ ಹಂತಕ್ಕೆ ಕೊಂಡೊಯ್ದರು. ಇದರ ಫಲವಾಗಿ ತಗಡೂರು ಖಾದಿ ಉತ್ತಮವೂ, ಜನಪ್ರಿಯವೂ ಆಯಿತು.

3. ಸುದ್ದಿ ಪ್ರಕಟಣೆಗಾಗಿ ತಗಡೂರರು ಮಾಡಿದ ಏರ್ಪಾಡುಗಳನ್ನು ವಿವರಿಸಿರಿ.

ಬ್ರಿಟಿಷರ ಪತ್ರಿಕಾ ನೀತಿಯಿಂದ ತಗಡೂರರ ಬರಹಗಳನ್ನು ಯಾವ ಪತ್ರಿಕೆಯವರು ಪ್ರಕಟಿಸಲಿಲ್ಲ. ಆಗ ರಾಯರೆ ಒಂದು ಪ್ರೆಸ್ ಸ್ಥಾಪಿಸಿ ಅಲ್ಲಿ ತಮ್ಮ ಪತ್ರಿಕೆ ನಡೆಸತೊಡಗಿದರು. ಆದರೆ ಇದಕ್ಕೆ ಸುಮ್ಮನಿರದ ಸರ್ಕಾರ ನಿತ್ಯವು ಒಂದೊಂದು ಮುದ್ರಣಾಲಯವನ್ನುಮುಟ್ಟುಗೋಲು ಹಾಕಿಕೊಂಡರು ಕೂಡ ರಾಯರು ನಿತ್ಯವು ಹೊಸ ಹೊಸ ಹೆಸರಿನಲ್ಲಿ ಪತ್ರಕೆಗಳನ್ನು ಪ್ರಕಟಿಸುತ್ತಿದ್ದರು. ಹೀಗೆ 18 ಸಲ ಸರ್ಕಾರ ಮುದ್ರಣಾಲಯಗಳನ್ನು ಮುಟ್ಟುಗೋಲು ಹಾಕಿಕೊಂಡಿತೆ ವಿನಃ ಪತ್ರಿಕೆಯನ್ನು ನಿಲ್ಲಿಸಲಾಗಲಿಲ್ಲ.

## ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.

1. ಸಂಕೇತ : ಹಸಿರು ಸಮೃದ್ಧಿಯ ಸಂಕೇತವಾಗಿದೆ.

2. ಸ್ವದೇಶಿ: ಸ್ವದೇಶಿ ವಸ್ತುಗಳನ್ನೇ ಬಳಸಬೇಕು
3. ಪ್ರಾಮಾಣಿಕ: ಹುಡುಗು ತುಂಬಾ ಪ್ರಾಮಾಣಿಕನಾಗಿದ್ದಾನೆ.
4. ಪ್ರಚಾರ : ಸ್ವದೇಶಿ ನಿರ್ಮಿತ ವಸ್ತುಗಳನ್ನು ಬಳಸುವಂತೆ ಪ್ರಚಾರ ಮಾಡಲಾಯಿತು.
5. ಸೇವಕ : ಪರಿಸರ ಸಂರಕ್ಷಣೆಯಲ್ಲಿ ಸ್ವಯಂ ಸೇವಕರ ಪಾತ್ರ ಮಹತ್ವವಾದದು.

ಆ) ಇವುಗಳನ್ನು ಬಿಡಿಸಿ ಸಂಧಿ ಹೆಸರಿಸಿ

| | | | | | | |
|---|---|---|---|---|---|---|
| ಅತ್ಯುತ್ಸಾಹ | = | ಅತಿ | + | ಉತ್ಸಾಹ | - | ಯಣ್ ಸಂಧಿ |
| ಹಾಸ್ಯವನ್ನು | = | ಹಾಸ್ಯ | + | ಅನ್ನು | - | ವಕರಾಗಮ ಸಂಧಿ ( ಆಗಮಸಂಧಿ) |
| ತಡೆಯುಂಟಾಯಿತು | = | ತಡೆ | + | ಉಂಟಾಯಿತು | - | ಯಕರಾಗಮ ಸಂಧಿ ( ಆಗಮಸಂಧಿ) |
| ಮನಸ್ಸನ್ನು | = | ಮನಸ್ಸು | + | ಅನ್ನು | - | ಲೋಪಸಂಧಿ |
| ಏಕಾಂಗಿ | = | ಏಕ | + | ಆಂಗಿ | - | ಸವರ್ಣದೀರ್ಘ ಸಂಧಿ |

ಇ) ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

| | | | | | |
|---|---|---|---|---|---|
| ಮರ್ಯಾದೆ | x | ಅವಮರ್ಯಾದೆ | ಗೌರವ | x | ಅಗೌರವ |
| ಸ್ವಾವಲಂಬನೆ | x | ಅವಲಂಬನೆ | ಲಕ್ಷ್ಯ | x | ಅಲಕ್ಷ್ಯ/ನಿರ್ಲಕ್ಷ್ಯ |

ಈ) 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರ |
|---|---|---|
| 1. ರಾಮಚಂದ್ರರಾಯರು | ಕಟ್ಟಡದ ಹೆಸರು | ಸ್ವಾತಂತ್ರ್ಯ ಹೋರಾಟಗಾರ |
| 2. ಹ್ಯಾಮಿಲ್ಟನ್ | ಅಹಿಂಸಾ ಮಾರ್ಗ | ಕಟ್ಟಡದ ಹೆಸರು |
| 3. ತಗಡೂರು | ಭಾರತದಿಂದ ತೊಲಗಿರಿ | ಖಾದಿ ಗ್ರಾಮೋದ್ಯೋಗ ಕೇಂದ್ರ |
| 4. ಮಹಾರಾಜರು | ಸ್ವಾತಂತ್ರ್ಯ ಹೋರಾಟಗಾರ | ನಿರಂಕುಶ ಪ್ರಭುತ್ವ |
| 5. ಬ್ರಿಟಿಷರು | ಖಾದಿ ಗ್ರಾಮೋದ್ಯೋಗ ಕೇಂದ್ರ | ಭಾರತದಿಂದ ತೊಲಗಿರಿ |
| | ನಿರಂಕುಶ ಪ್ರಭುತ್ವ | |

# 7. ಉದ್ಯಾನರಾಣಿ - ಲಾಲ್ ಬಾಗ್

– ದೇ. ಜವರೇಗೌಡ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ನಿಸರ್ಗ ಆರಾಧಕರಿಗೆ ಲಾಲ್ ಬಾಗ್ ಹೆಸರು ಕೇಳಿದಾಗ ಆಗುವ ಅನುಭವವೇನು?
   ರಸ ಸಮಾಧಿಯಲ್ಲಿ ಮುಳುಗೇಳುತ್ತಾರೆ ಮತ್ತು ಪುಳುಕಿತರಾಗುತ್ತಾರೆ.
2. ಲಾಲ್ ಬಾಗ್ ಯಾವುದರ ಪುನರುತ್ಥಾನವಾಗಿದೆ?
   ಲಂಡನಿನ್ನ ಗಾಜಿನ ಅರಮನೆಯ ಪುನರುತ್ಥಾನವಾಗಿದೆ.
3. ಯಾವುದರ ಉತ್ಪಾದನೆಗೆ ಲಾಲ್ ಬಾಗ್ ಆಶ್ರಯತಾಣವಾಗಿದೆ?
   ಅನೇಕ ದೇಶ –ವಿದೇಶಿ ಸಸ್ಯತಳಿಗಳ ಉತ್ಪಾದನೆಗೆ ಆಶ್ರಯತಾಣವಾಗಿದೆ.
4. ಬೆಂಗಳೂರು ನಗರ ನಿರ್ಮಾಪಕ ಯಾರು?
   ಬೆಂಗಳೂರು ನಗರ ನಿರ್ಮಾಪಕರು 'ಕೆಂಪೆಗೌಡ'
5. ಗೋಪುರಗಳು ಯಾವುದರ ಸಂಕೇತವಾಗಿವೆ?
   ಬೆಂಗಳೂರು ನಗರದ ಭವಿಷ್ಯದ, ವಿಖ್ಯಾತಿಯ ಮತ್ತು ವಿಸ್ತಾರದ ಸಂಕೇತವಾಗಿವೆ.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಸೌಂದರ್ಯವಾರಾಶಿ ಮತ್ತು ಸೌಂದರ್ಯಾಮೃತ ಸವಿಯುವವರು ಯಾರು?
   ದೇವತೆಗಳು ಲಾಲ್ ಬಾಗ್ ನ ಸೌಂದರ್ಯವಾರಾಶಿಯಲ್ಲಿ ಮಿಂದು ಪುನೀತರಾಗುವರು. ಹಾಗೂ ಇಂಗ್ಲೆಂಡಿನ ರಾಣಿ ಮತ್ತು ರಷ್ಯಾದ ಅಧ್ಯಕ್ಷರು ಲಾಲ್ ಬಾಗ್ ನ ಸೌಂದರ್ಯಾಮೃತ ಸವಿಯುವರು
2. ಲಾಲ್ ಬಾಗಿನ ಹುಟ್ಟು ಶೈಶವದ ಬಗ್ಗೆ ಲೇಖಕರ ಅಭಿಪ್ರಾಯವೇನು?
   ಲಾಲ್ ಬಾಗಿನ ಹುಟ್ಟು –ಶೈಶವಾವಸ್ಥೆಗಳು ಇತಿಹಾಸಕಾರರ ಅವಜ್ಞೆಯಿಂದ ಭೂತಲೋಕದ ಗೋರಿಯಲ್ಲಿ ಹೂತುಹೋಗಿದೆ. ಆದರೂ ಇದರ ನಿರ್ಮಾತೃ ಕೆಂಪೆಗೌಡನೆಂದು ಊಹಿಸಬಹುದು ಎಂಬುದು ಲೇಖಕರ ಅಭಿಪ್ರಾಯ.
3. ಮರಿಗೌಡರ ಕಳಕಳಿ ಮತ್ತು ಹೇರಾಸೆ ಏನು?
   ಆರ್ಥಿಕ ಪ್ರಗತಿಗೆ ವಾಣಿಜ್ಯಾಭಿವೃದ್ಧಿಗೆ, ಅಂತಾರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ಹೊಸ ದಾಖಲೆಯನ್ನು ನಿರ್ಮಿಸಬೇಕೆಂಬುದು ಮರಿಗೌಡರ ಕಳಕಳಿ ಮತ್ತು ಹೇರಾಸೆಯಾಗಿದ್ದವು.
4. ಲೇಖಕರು 'ವೃಕ್ಷ ಪ್ರೇಮಿ'ಯ ಆಗಮನವನ್ನು ಕುರಿತು ಹೇಳಿರುವ ಮಾತುಗಳೇನು?
   ಲಾಲ್ ಬಾಗಿನ ಮೇಲೆ ತನ್ನ ಪ್ರೀತಿಯನ್ನು ವರ್ಷಿಸುವ(ಮಳೆಗರೆಯುವ), ತನ್ನ ಆತ್ಮವನ್ನೆ ನಿವೇದಿಸಿಕೊಳ್ಳುವ ವೃಕ್ಷಪ್ರೇಮಿಯ ಆಗಮನದಿಂದ ಇಡೀ ಲಾಲ್ ಬಾಗ್ ಚೇತರಿಸಿಕೊಂಡಿದೆ. ಕನ್ನಡನಾಡಿನ ಮಣ್ಣು ಪುಳಕಗೊಂಡಿದೆ.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಲೇಖಕರು ವರ್ಣಿಸಿರುವಂತೆ ಲಾಲ್ ಬಾಗಿನ ಚೆಲುವನ್ನು ತಿಳಿಸಿರಿ.
   ಲೇಖಕರು ಲಾಲ್ ಬಾಗ್ ನ ಚೆಲುವನ್ನು ನೋಡಿ ಉದಯಾಸ್ತ ಸಮಯದ ಸೂರ್ಯಕಾಂತಿಗೆ ಇರುಳಿನ ನಕ್ಷತ್ರಪುಂಜದ ತೇಜಸ್ಸಿಗೆ ಇಲ್ಲಿಯ ಪುಷ್ಪರಾಗವೇ ಕಾರಣವಾಗಿರಬೇಕು. ದೇಶ-ವಿದೇಶಗಳ ತರುಲತ

ಪುಷ್ಪಗಳು ವರ್ಣ, ಜಾತಿ, ಜನಾಂಗ, ವಾಯು ಗುಣಗಳನ್ನು ಲೆಕ್ಕಿಸದೆ ಪರಸ್ಪರ ಸ್ನೇಹದಿಂದ ಒಮ್ಮೆ ಹರಿದ್ವರ್ಣ ರಂಜಿತವಾಗಿ ಮತ್ತೊಮ್ಮೆ ನಗ್ನ ಸೌಂದರ್ಯ ಸಂಪನ್ನವಾಗಿ ಜಗತ್ತಿನ ಕ್ಷೇಮಕ್ಕೆ ತಾವೇ ಕಾರಣವೆಂಬ ಹೆಮ್ಮೆಯಿಂದ ರಾರಾಜಿಸುತ್ತಿವೆ. ಉದ್ಯಾನ ಸೌಂದರ್ಯಕ್ಕೆ ಪಕ್ಷಿ ಕುಲಗಳ ಧ್ವನಿ ಸೌಂದರ್ಯ ಮೆರಗು ನೀಡಿದೆ. ಅಲ್ಲದೆ; ಕೆಂಪು ತೋಟ ಕವಿಗಳಿಗೆ ಹುಚ್ಚು, ರಸಿಕರಿಗೆ ಮೆಚ್ಚು, ಜ್ಞಾನಿ ವಿಜ್ಞಾನಿಗಳಿಗೆ ನೆಚ್ಚು ಎಂದು ಹೇಳುವ ಮೂಲಕ ಲೇಖಕರು ಲಾಲ್ ಬಾಗ್ ನ ಸೌಂದರ್ಯವನ್ನು ವರ್ಣಿಸಿದ್ದಾರೆ.

2. ಲಾಲ್ ಬಾಗ್ ನಲ್ಲಿರುವ ಸ್ಮಾರಕಗಳು ಯಾವುವು?

ಉದ್ಯಾನ ವಿಕಾಸದ ಸಂಕೇತವೆಂಬಂತೆ ಅದಕ್ಕೊಂದು ಸಾಕ್ಷಿಯೆಂಬಂತೆ ಕೆಂಪುತೋಟದ ರತ್ನಕಿರೀಟವೆಂಬಂತೆ ಕಂಗೊಳಿಸುತ್ತಿರುವ ಗಾಜಿನ ಅರಮನೆ ಹಾಗೂ ಇನ್ನೂ ಕೆಲವು ಸುಂದರವಾದ ಕಟ್ಟಡಗಳು ವಿಗ್ರಹಗಳೂ ಇಲ್ಲಿವೆ. ಅವುಗಳಲ್ಲಿ ಕೆಂಪೇಗೌಡ ಗೋಪುರವು ಅತ್ಯಂತ ಪ್ರಾಚೀನವಾದದ್ದು ಇದು ಬೆಂಗಳೂರು ನಗರದ ಭವಿಷ್ಯಕ್ಕೆ, ವಿಖ್ಯಾತಿ, ವಿಸ್ತಾರಗಳಿಗೆ ಸಂಕೇತವೆಂಬಂತೆ ಗೋಚರಿಸುತ್ತದೆ.

3. ಮರಿಗೌಡರ ಸಾಧನೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿರಿ.

ಲಾಲ್ ಬಾಗಿನಂತಹ ಉದ್ಯಾನವನದ ಅಭಿವೃದ್ಧಿಗೆ ಕಾರಣರಾದವರು ಸಸ್ಯವಿಜ್ಞಾನಿ ಮರಿಗೌಡರು. ಇವರು ರಾಷ್ಟ್ರದ ಬಂಜರು ಭೂಮಿಯ ಸಾಗುವಳಿ ಅತ್ಯಗತ್ಯವೆಂಬುದನ್ನು ಮೊತ್ತಮೊದಲಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟರು, ರೈತರ ಕ್ಷೇಮದ ಬಗ್ಗೆ ಅಪಾರ ಕಳಕಳಿಯನ್ನು ಹೊಂದಿದ್ದರು. ಆರ್ಥಿಕ ಪ್ರಗತಿಗೆ ವಾಣಿಜ್ಯಾಭಿವೃದ್ಧಿಗೆ, ಅಂತಾರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ಹೊಸ ದಾಖಲೆಯನ್ನು ನಿರ್ಮಿಸಬೇಕೆಂಬುದು ಮರಿಗೌಡರ ಕಳಕಳಿ ಮತ್ತು ಹೇರಾಸೆಯಾಗಿದ್ದವು. ಇವರು ಕರ್ನಾಟಕದ ಹಾಗೂ ಭರತ ಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ. ಅಲ್ಲದೆ ಕರ್ನಾಟಕದ ಕೀರ್ತಿ ಧ್ವಜವನ್ನು ನಭದೆತ್ತರಕ್ಕೆ ಎತ್ತಿಹಿಡಿದಿದ್ದಾರೆ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ.

1. ಸೌಂದರ್ಯಾಮೃತ ಪಾನದಿಂದ ಸಂತೃಪ್ತರಾಗಿ ಮರಳುತ್ತಾರೆ.

ಈ ಪಸ್ತುತ ವಾಕ್ಯವನ್ನು 'ದೇ. ಜವರೆಗೌಡ' ಅವರು ಬರೆದಿರುವ 'ಉದ್ಯಾನರಾಣಿ – ಲಾಲ್ ಬಾಗ್' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಓದುಗರಿಗೆ ಹೇಳುತ್ತಾರೆ. ಲಾಲ್ ಬಾಗ್ ನ ಸೌಂದರ್ಯವನ್ನು ವರ್ಣಿಸುವ ಸಂದರ್ಭದಲ್ಲಿ ಇಂಗ್ಲೆಂಡಿನ ರಾಣಿ ಮತ್ತು ರಷ್ಯಾದ ಅಧ್ಯಕ್ಷರು ಲಾಲ್ ಬಾಗ್ ನ ಸೌಂದರ್ಯಾಮೃತ ಪಾನದಿಂದ ಸಂತೃಪ್ತರಾಗುತ್ತಾರೆ. ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಳಕೆಯಾಗಿದೆ.

2. ಈಗ ನಗರಗಳ ರಾಣಿ ಎಂದು ಹೆಸರಾಗಿದೆ

ಈ ಪಸ್ತುತ ವಾಕ್ಯವನ್ನು 'ದೇ. ಜವರೆಗೌಡ' ಅವರು ಬರೆದಿರುವ 'ಉದ್ಯಾನರಾಣಿ – ಲಾಲ್ ಬಾಗ್' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಓದುಗರಿಗೆ ಹೇಳುತ್ತಾರೆ. ಲಾಲ್ ಬಾಗ್ ನ ಕೆಂಪೇಗೌಡರು ನಿರ್ಮಿಸಿರುವ ಗೋಪುರಗನ್ನು ಪರಿಚಯಿಸುವ ಸಂದರ್ಭದಲ್ಲಿ ಈ ಮಾತು ಬಳಕೆಯಾಗಿದೆ. ಕೆಂಪೇಗೌಡರು ಹದಿನಾರನೆ ಶತಮಾನದಲ್ಲಿ ನಾಲ್ಕು ಗೋಪುರಗಳನ್ನು ಪ್ರತಿಷ್ಠಾಪಿಸಿದರು ಅವರ ಮುಂಗಾಣ್ಕೆಯ ಫಲವೋ ಎಂಬಂತೆ ಬೆಂಗಳೂರು 'ಈಗ ನಗರಗಳ ರಾಣಿ' ಎಂದು ಹೆಸರಾಗಿದೆ ಎಂದು ಹೇಳುತ್ತಾರೆ.

3. ಕರ್ನಾಟಕದ ಕೀರ್ತಿ ಧ್ವಜವನ್ನು ನಭದೆತ್ತರಕ್ಕೆ ಎತ್ತಿಹಿಡಿದಿದ್ದಾರೆ.

ಈ ಪಸ್ತುತ ವಾಕ್ಯವನ್ನು 'ದೇ. ಜವರೆಗೌಡ' ಅವರು ಬರೆದಿರುವ 'ಉದ್ಯಾನರಾಣಿ – ಲಾಲ್ ಬಾಗ್' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಮರಿಗೌಡರನ್ನು ಕುರಿತು ಹೇಳುವ ಸಂದರ್ಭದಲ್ಲಿ ಬಳಕೆಯಾಗಿದೆ. ಮರಿಗೌಡರ ಸಾಧನೆಗಳನ್ನು ವಿವರಿಸಿದ ಲೇಖಕರು ಇವರು ಕರ್ನಾಟಕದ ಹಾಗೂ ಭರತ ಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ. ಅಲ್ಲದೆ ಕರ್ನಾಟಕದ ಕೀರ್ತಿ ಧ್ವಜವನ್ನು ನಭದೆತ್ತರಕ್ಕೆ ಎತ್ತಿಹಿಡಿದಿದ್ದಾರೆ ಎಂದು ಹೇಳುತ್ತಾರೆ.

ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

| | | | | | | | |
|---|---|---|---|---|---|---|---|
| 1 | ಇಂಗ್ಲೆಂಡ್ | : | ರಾಣಿ | :: | ರಷ್ಯಾ | : | ಅಧ್ಯಕ್ಷ |
| 2 | ರಸಿಕರಿಗೆ | : | ಮೆಚ್ಚು | :: | ವಿಜ್ಞಾನಿಗಳಿಗೆ | : | ನೆಚ್ಚು |
| 3 | ಗಾಜಿನ ಮನೆ | : | ಬೆಂಗಳೂರು | :: | ಗಾಜಿನರಮನೆ | : | ಲಂಡನ್ |
| 4 | ಉದ್ಯಾನರಾಣಿ | : | ಲಾಲ್ ಬಾಗ್ | :: | ಉದ್ಯಾನರಾಜ್ಯ | : | ಕರ್ನಾಟಕ |
| 5 | ಅನುಭಾವಿ | : | ಕುವೆಂಪು | :: | ಸಸ್ಯವಿಜ್ಞಾನಿ | : | ಮರಿಗೌಡ |

ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.

1. ಗೋಪುರ, ಗಾಜಿನಮನೆ, ಶಾಲೆ, ವಿಗ್ರಹ - (ಶಾಲೆ)
2. ರನ್ನ, ಲೋಗ, ನಿತ್ಯ, ತಾಣ – (ನಿತ್ಯ)
3. ಪುಷ್ಪ, ಹೂ, ಕಂಪು, ಕುಸುಮ – (ಕಂಪು)
4. ನೀರು, ತೋಟ, ಗೊಬ್ಬರ, ಗಾಜು – (ಗಾಜು)

## ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

| | | | | | | | |
|---|---|---|---|---|---|---|---|
| ಭೂಮಿಗಿಳಿದು | = | ಭೂಮಿಗೆ | + | ಇಳಿದು | - | ಲೋಪ ಸಂಧಿ |
| ಸೌಂದರ್ಯಾಮೃತ | = | ಸೌಂದರ್ಯ | + | ಅಮೃತ | - | ಸವರ್ಣ ದೀರ್ಘ ಸಂಧಿ |
| ಸೌಂದರ್ಯೋಪಾಸಕ | = | ಸೌಂದರ್ಯ | + | ಉಪಾಸಕ | - | ಗುಣಸಂಧಿ |
| ಅತ್ಯಂತ | = | ಅತಿ | + | ಅಂತ | - | ಯಣ್ ಸಂಧಿ |
| ಜಗದೀಶ್ವರ | = | ಜಗತ್ | + | ಈಶ್ವರ | - | ಜಸ್ತ್ವ ಸಂಧಿ |

ಆ) ಇವುಗಳಿಗೆ ತದ್ಭವಗಳನ್ನು ಬರೆಯಿರಿ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ಪ್ರತಿ | ಪಡಿ | ವರ್ಣ | ಬಣ್ಣ |
| ವಿಸ್ತಾರ | ಬಿತ್ತಾರ | ಆಶ್ರಯ | ಆಸರೆ |
| ಕೀರ್ತಿ | ಕಿರುತಿ | ಶ್ರೀ | ಸಿರಿ |
| ಅಗ್ನಿ | ಅಗ್ಗಿ / ಅಗುನಿ | | |

ಇ) ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

| | | | | | |
|---|---|---|---|---|---|
| ಅಕ್ಷಯ | x | ಕ್ಷಯ | ಸಂದೇಹ | x | ನಿಸಂದೇಹ |
| ಕೀರ್ತಿ | x | ಅಪಕೀರ್ತಿ | ಆಕರ್ಷಣೆ | x | ಅಪಕರ್ಷಣೆ |

ಈ) ಈ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.

1. ಹಾಸುಹೊಕ್ಕು : ಲಾಲ್ ಬಾಗ್ ಗಿಡ ಮರ ಬಳ್ಳಿಗಳಿಂದ ಹಾಸುಹೊಕ್ಕಾಗಿದೆ.
2. ಭದ್ರಬುನಾದಿ: ಕಟ್ಟಡ ನಿರ್ಮಿಸುವಾಗ ಭದ್ರಬುನಾದಿಯನ್ನು ಹಾಕಬೇಕು.
3. ಪುನರುತ್ಥಾನ: ಕಾಶಿಯನ್ನು ಪುನರುತ್ಥಾನಗೊಳಿಸಲಾಗಿದೆ.
4. ಮುಂಗಾಣ್ಕೆ : ಶಿಕ್ಷಣವೇ ಭವಿಷ್ಯದ ಮುಂಗಾಣ್ಕೆ.

ಉ) ಇವುಗಳಿಗೆ ಅನ್ಯಲಿಂಗ ರೂಪ ಬರೆಯಿರಿ.

| | | | | | | | | |
|---|---|---|---|---|---|---|---|---|
| ರಾಣಿ | - | ರಾಜ | ಕವಿ | - | ಕವಯತ್ರಿ | ಇತಿಹಾಸಕಾರ | - | ಇತಿಹಾಸಕಾರ್ತಿ |
| ಪ್ರಜ್ಞಾವಂತ | - | ಪ್ರಜ್ಞಾವಂತೆ | ನಾಯಕ | - | ನಾಯಕಿ | | | |

ಊ) ಇವುಗಳ ಬಹುವಚನರೂಪ ಬರೆಯಿರಿ.

| | | | | | | | | |
|---|---|---|---|---|---|---|---|---|
| ಅಧ್ಯಕ್ಷ | - | ಅಧ್ಯಕ್ಷರು | ರಾಣಿ | - | ರಾಣಿಯರು | ನಿರ್ಮಾಪಕ | - | ನಿರ್ಮಾಪಕರು |
| ನಾಗರಿಕ | - | ನಾಗರಿಕರು | ರೈತ | - | ರೈತರು | | | |

# 8. ಮಳೆಕೊಯ್ಲು

- ಶ್ರೀಪಡ್ರೆ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ರಾಘಣ್ಣ ತಲೆಗೆ ಕೈ ಹೊತ್ತು ಕುಳಿತು ಕೊಳ್ಳಲು ಕಾರಣವೇನು?
   ರಾಘಣ್ಣನ ತೆರೆದ ಬಾವಿ ಬತ್ತಿತ್ತು ಆದ್ದರಿಂದ ಚಿಂತಾಕ್ರಾಂತನಾಗಿ ತಲೆಗೆ ಕೈ ಹೊತ್ತು ಕುಳಿತಿದ್ದ
2. ಟೂರ್ ಹೋದಾಗ ಏನು ಕಲಿತು ಬಂದಿದ್ದೇನೆ ಎಂದು ಹೇಳಿದ?
   ಮಳೆ ಕೊಯ್ಲು ಎಂಬ ವಿದ್ಯೆ ಕಲಿತುಕೊಂಡು ಬಂದಿದ್ದೇನೆ ಎಂದು ಹೇಳಿದ.
3. ಬಾವಿ ಬತ್ತಿದರೆ ಏನು ಮಾಡಬೇಕೆಂದು ಸುತ್ತಮುತ್ತಲಿನವರು ಹೇಳುತ್ತಾರೆ?
   ಬಾವಿ ಬತ್ತಿದರೆ ಕೊಳವೆಬಾವಿ ತೊಡುವುದು ಒಂದೇ ದಾರಿ ಎಂದು ಹೇಳುತ್ತಾರೆ.
4. ನೀರಿಂಗಿಸುವ ಪ್ರಯೋಗ ಸಫಲವಾದರೆ ಏನು ಮಾಡುತ್ತೇನೆಂದು ರಾಘಣ್ಣ ಹೇಳಿದ?
   ನೀರಿಂಗಿಸುವ ಪ್ರಯೋಗ ಸಫಲವಾದರೆ ನಾನೇ ಮುಂದೆ ನಿಂತು ಊರೆಲ್ಲಾ ಪ್ರಚಾರ ಮಾಡುತ್ತೇನೆ ಎಂದು ಹೇಳಿದ
5. ಬಯಲುಸೀಮೆಯಲ್ಲಿ ಯಾವುದು ಹಾಳಾಗಿದೆ ಎಂದು ಶೇಖರ ಹೇಳಿದ?
   ಬಯಲುಸೀಮೆಯಲ್ಲಿ ಕಲ್ಲೊಡ್ಡು ಬದು ಗೋಕುಂಟೆಗಳು ಹಾಳಾಗಿವೆ.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಮಳೆಕೊಯ್ಲಿನ ಉಪಯೋಗ ಯಾರ್ಯಾರು ಹೇಗೆ ಪಡೆದಿದ್ದಾರೆ ಎಂದು ಶೇಖರ ಹೇಳಿದ?
   ರಾಳೆಗಾಮ್ಸ್ ಸಿದ್ದಿ, ರಾಜಸ್ಥಾನ ಮೊದಲಾದೆಡೆ ಈ ವಿದ್ಯೆಯ ಪ್ರಯೋಜನ ಪಡೆದಿದ್ದಾರೆಂದು ಶೇಖರ ಹೇಳಿದ.
2. ಮಳೆ ನೀರು ಭೂಮಿಯೊಳಕ್ಕೆ ಇಳಿಯುವುದು ಕಡಿಮೆಯಾಗುತ್ತಿದೆ ಏಕೆ?
   ಅರಣ್ಯ ನಾಶ ನೀರಿನ ಪೋಲು ಅತಿಯಾದ ಕೊಳವೆ ಬಾವಿ ಕೊರೆತ ನಗರಗಳಲ್ಲಿ ಕಾಂಕ್ರೀಟಿಕರಣ ಇವೆಲ್ಲದರಿಂದಾಗಿ ಮಳೆ ನೀರು ಭೂಮಿಯೊಳಗೆ ಇಳಿಯುವುದು ಕಡಿಮೆಯಾಗುತ್ತಿದೆ.
3. ಮಳೆಕೊಯ್ಲಿನ ಕ್ರಮಗಳಾವುವು?
   ಇಂಗು ಗುಂಡಿ, ಸಮತಳ ಬದು, ಸಮತಳ ಅಗಳು, ತುಂಡು ಅಗಳು, ಇಂಗು ಕೊಳ ಮೊದಲಾದವು ಮಳೆಕೊಯ್ಲಿನ ವಿಧಾನಗಳಾಗಿವೆ.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಜಲಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯಲು ಕಾರಣವೇನು?
   ಪ್ರಾಕೃತಿಕ ಮತ್ತು ಪೂರ್ವಜರು ಮಾಡಿಟ್ಟ ಕೆರೆ, ಮದಕ, ಒಡ್ಡುಗಳಂತಹ ತಡೆಗಳನ್ನು ನಾವಿಂದು ನಾಶಗೊಳಿಸಿದ ಕಾರಣ. ಮಳೆಗಾಲದಲ್ಲಿ ಭೂಮಿಯ ಒಡಲು ತುಂಬುವುದಿಲ್ಲ. ಬಿದ್ದ ಮಳೆನೀರು ಮಣ್ಣನ್ನು ಕೊಚ್ಚಿಕೊಂಡು ಹೋಗಿ ನಮ್ಮ ಜಲಮೂಲಗಳಿಗೆ ತುಂಬುತ್ತಿದೆ. ಈ ಮಣ್ಣು ಅಲ್ಲಿ ಉಳಿದಾಗ ಬಿದ್ದ ಮಳೆ ನೀರಿನ ಶೇಖರಣೆ ಇಂಗಿಸುವ ಕಾರ್ಯಕ್ಕೆ ಕುಂದು ಬರುತ್ತದೆ. ಇದರಿಂದ ಜಲಮಟ್ಟ ಪ್ರತಿವರ್ಷ ಕುಸಿಯುತ್ತಿದೆ.
2. ನೀರಿಂಗಿಸಲು ಹಣದ ಖರ್ಚೇ ಇಲ್ಲ ಏಕೆ?

ನೀರಿಂಗಿಸಲು ಹಣದ ಖರ್ಚೆ ಇಲ್ಲ ಏಕೆಂದರೆ. ಇಂಗು ಗುಂಡಿ, ಇಂಗು ಕೊಳ, ಸಮತಳ ಬದು, ಸಮತಳ ಅಗಳು, ತುಂಡು ಅಗಳು ಮುಂತಾದ ವಿಧಾನಗಳನ್ನು ಅನುಸರಿಸಿ ನೀರಿಂಗಿಸಬಹುದು. ಇದಕ್ಕೆ ಯಾವುದೇ ಪೈಪ್ ಆಗಲಿ ಇತರೆ ಸಾಮಗ್ರಿಗಳಾಗಲಿ ಅಗತ್ಯವಿಲ್ಲ. ಆದ್ದರಿಂದ ನೀರಿಂಗಿಸುವುದು ವೆಚ್ಚದಾಯಕವಲ್ಲ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಕೊಳವೆ ಬಾವಿ ಕೊರೆಯುವುದರಲ್ಲಿ ಸಾಮಾಜಿಕ ನ್ಯಾಯವಿಲ್ಲ

   ಈ ಪಸ್ತುತ ವಾಕ್ಯವನ್ನು 'ಶ್ರೀಪಡ್ರೆ' ಅವರು ಬರೆದಿರುವ 'ಮಳೆಕೊಯ್ಲು' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ಶೇಖರನು ತನ್ನ ತಂದೆ ರಾಘಣ್ಣನಿಗೆ ಹೇಳಿದನು. ಮಳೆನೀರನ್ನು ಇಂಗಿಸುವುದರಿಂದ ಆಗುವ ಪ್ರಯೋನಗಳನ್ನು ಕುರಿತು ಮಾತನಾಡುತ್ತಾ ನಮ್ಮ ಸುತ್ತ ಮುತ್ತಲಿನ ಜನರು ಕೊಳವೆ ಬಾವಿ ತೆಗೆಸುವುದರ ಕಡೆ ಮಾರುಹೋಗುತ್ತಿದ್ದಾರೆ ಇದು ಸರಿಯಲ್ಲ ಎಂದು ಹೇಳುವ ಸಂದರ್ಭದಲ್ಲಿ 'ಕೊಳವೆ ಬಾವಿ ಕೊರೆಯುವುದರಲ್ಲಿ ಸಾಮಾಜಿಕ ನ್ಯಾಯವಿಲ್ಲ' ಎಂದು ಹೇಳುತ್ತಾನೆ.

2. ಮಳೆ ಒಂದು ಖಾಲಿ ಚೆಕ್ಕಿನ ಹಾಗೆ

   ಈ ಪಸ್ತುತ ವಾಕ್ಯವನ್ನು 'ಶ್ರೀಪಡ್ರೆ' ಅವರು ಬರೆದಿರುವ 'ಮಳೆಕೊಯ್ಲು' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ಶೇಖರನು ತನ್ನ ತಂದೆ ರಾಘಣ್ಣನಿಗೆ ಹೇಳಿದನು. ಮಳೆನೀರನ್ನು ಇಂಗಿಸುವುದರಿಂದ ಆಗುವ ಪ್ರಯೋನಗಳನ್ನು ಕುರಿತು ಮಾತನಾಡುತ್ತಾ ಚೆನ್ನೈನಲ್ಲಿ ಅವರು ಹೇಳಿದ ಮಾತು ಈಗಲೂ ಮನಸ್ಸಿನಲ್ಲಿದೆ. ಮಳೆ ಒಂದು ಖಾಲಿ ಚೆಕ್ಕಿನ ಹಾಳೆ. ಅವರವರ ಭೂಮಿಯ ಮಣ್ಣಿನೊಳಕ್ಕೆ ಅದನ್ನು ಹಾಕಿಬಿಟ್ಟರೆ ಬೇಸಿಗೆಯಲ್ಲಿ ತನ್ನಿಂದ ತಾನೇ ನಗದಾಗುತ್ತದೆ. ಎಂದು ಹೇಳುತ್ತಾನೆ.

3. ದಾರಿಕಾಣದವರು ತುಂಬಾ ಮಂದಿ ಇದ್ದಾರೆ.

   ಈ ಪಸ್ತುತ ವಾಕ್ಯವನ್ನು 'ಶ್ರೀಪಡ್ರೆ' ಅವರು ಬರೆದಿರುವ 'ಮಳೆಕೊಯ್ಲು' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ರಾಘಣ್ಣ ತನ್ನ ಮಗ ಶೇಖರನಿಗೆ ಹೇಳಿದನು. ನಮ್ಮೂರಿನ ಕೆಲವೊಂದಿಷ್ಟು ಜನರನ್ನು ಸೇರಿಸಿ ನೀರಿಂಗಿಸಿ ಗೆದ್ದವರ ಜಾಗಗಳಿಗೆ ಒಂದು 'ಜಲಯಾತ್ರೆ' ಏರ್ಪಡಿಸುವಂತೆ ಪಂಚಾಯತ್ ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ; ಆಗದು ಅನ್ನಲಿಕ್ಕಿಲ್ಲ. ಊರಿಡೀ ನೀರಿನ ಕೊರತೆ ಇದೆ; ದಾರಿ ಕಾಣದವರು ತುಂಬಾ ಮಂದಿ ಇದ್ದಾರೆ ಎನ್ನುತ್ತಾನೆ.

## ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

| | | | | |
|---|---|---|---|---|
| ಅತ್ಯುತ್ತಮ | = | ಅತಿ | + | ಉತ್ತಮ |
| ಸ್ವಲ್ಪಾಂಶ | = | ಸ್ವಲ್ಪ | + | ಅಂಶ |
| ದೇಶದುದ್ದಗಲ | = | ದೇಶದ | + | ಉದ್ದಗಲ |

**ಮಳೆಗಾಲ = ಮಳೆ + ಕಾಲ**

**ಕೆಳಗಿನ ಪದಗಳ ನಾನಾರ್ಥ ಬರೆಯಿರಿ.**

1. **ಬಳಿ : ದಾರಿ, ಬಾಚು, ಸಮೀಪ**
2. **ಮರಳು : ಹಿಂದಿರುಗು, ಮರಳು ( ಸ್ಯಾಂಡ್)**
3. **ಸರಿ : ನಿಜ, ಪಕ್ಕಕ್ಕೆ ಹೋಗು**
4. **ಕಾಡು : ಅರಣ್ಯ, ಪೀಡಿಸು**
5. **ಪಡೆ : ಸೈನ್ಯ, ಗಳಿಸಿಕೊಳ್ಳುವುದು.**

**ಪಟಪಟನೆ ಇಂತಹ 5 ಅನುಕರಣಾವ್ಯಯ ಪದಗಳನ್ನು ಬರೆಯಿರಿ.**

**ಚಟಚಟನೆ, ಗುಳು ಗುಳು, ಕಟ ಕಟ, ಜುಳು ಜುಳು, ಥಣ ಥಣ, ಸರಸರ ಇತ್ಯಾದಿ**

**ಕೆಳಗಿನ ನುಡಿಗಟ್ಟುಗಳ ಅರ್ಥ ಬರೆದು ಸ್ವಂತ ವಾಕ್ಯ ಮಾಡಿರಿ**

| ನುಡಿಗಟ್ಟು | ಅರ್ಥ | : | ಸ್ವಂತ ವಾಕ್ಯ |
|---|---|---|---|
| **ತಲೆಗೆ ಕೈಹೊತ್ತು ಕುಳಿತುಕೊ** | ಚಿಂತಾಕ್ರಾಂತನಾಗಿರುವುದು | : | ರಾಜು ತಲೆಗೆ ಕೈಹೊತ್ತು ಕುಳಿತು ಕೊಂಡನು. |
| **ಹೊರಹಾಕು** | ದೂರ ಮಾಡು | : | ಅಪ್ಪನು ಮಗನನ್ನು ಮನೆಯಿಂದ ಹೊರಹಾಕಿದನು. |
| **ದಾರಿಕಾಣದವರು** | ಅಸಹಾಯಕರು | : | ನೀರಿಲ್ಲದೆ ಜನರು ಭವಿಷ್ಯದ ದಾರಿ ಕಾಣದವರಾದರು. |
| **ಕಟ್ಟಕಡೆ** | ಅಂತಿಮ | : | ಕಟ್ಟಕಡೆಯದಾಗಿ ಜನರು ನ್ಯಾಯಾಲಯದ ಹಾದಿ ಹಿಡಿದರು. |

# 9. ಮಗುವಿನ ಕರೆ

- ದತ್ತಾತ್ರೇಯ ರಾಮಚಂದ್ರ ಬೇಂದ್ರೆ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ಶಾಸ್ತ್ರಿಗಳ ಸೊಸೆ ಮಧ್ಯಾಹ್ನ ಎಲ್ಲಿಗೆ ಹೊರಟಳು?

   ಕುಡಿಯುವ ನೀರು ತರಲು ಊರಹೊರಗಿನ ಬಾವಿಗೆ ಹೊರಟಳು.
2. ಬಾವಿಯ ಸಮೀಪವಿದ್ದ ಎರಡು ಮರಗಳಾವುವು?

   ಆಲದ ಮರ ಮತ್ತು ಹುಣಸೆ ಮರಗಳು.
3. ಕಾಡು ಮಿಕಗಳು ಹಳ್ಳದ ಬಳಿ ಏಕೆ ಬಂದವು?

   ನೀರು ಕುಡಿಯಲು ಬಂದವು.
4. ಬಾವಿಯ ಭಯಾನಕತೆಯನ್ನು ಯಾವುದು ಹೆಚ್ಚಿಸಿತ್ತು?

   ಮರಗಳ ನೆರೆ ಆ ಬಾವಿಯ ಭಯಾನಕತೆಯನ್ನು ಹೆಚ್ಚಿಸಿತ್ತು.
5. ಪಡಸಾಲೆ ಯಾವುದಕ್ಕೆ ಆಶ್ರಯವಾಗಿತ್ತು?

   ಶಾಸ್ತ್ರಿಗಳ ಅಧ್ಯಯನ, ಅಧ್ಯಾಪನ, ಶಯನ, ವಿಶ್ರಾಂತಿ ಇವೆಲ್ಲಕ್ಕೂ ಆಶ್ರಯವಾಗಿತ್ತು.
6. ಸೊಸೆಯನ್ನು ಮನೆಯತ್ತ ಸೆಳೆದ ಭಾವಗಳು ಯಾವುವು?

   ವಾತ್ಸಲ್ಯ, ಪತಿ ಭಕ್ತಿ, ಕೃತಜ್ಞತೆ, ಆದರ, ಇವೆಲ್ಲಾ ಭಾವಗಳು ಸೊಸೆಯನ್ನು ಮನೆಯತ್ತ ಸೆಳೆದವು.
7. ಮನೆ ಯಾವಾಗ ನಲಿಯುತ್ತಿತ್ತು?

   ಅತ್ತೆ ಅತ್ತಿಗೆ ನಾದಿನಿಯರು ಊಟಕ್ಕೆ ಕುಳಿತಾಗ ಮನೆಯು ನಲಿಯುತ್ತಿತ್ತು.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಶಾಸ್ತ್ರಿಗಳ ಸೊಸೆ ಏಕೆ ನೀರಿಗೆ ಹೊರಡಬೇಕಾಯಿತು?

   ಪ್ರಾತಃಕಾಲಕ್ಕೆ ತಂದಿದ್ದ ಒಂದೇ ಒಂದು ಕೊಡ ನೀರು ಮನೆಯ ಸಂಧಿ ಸಮಾರಾಧನೆಯಲ್ಲಿ ಉರುಳಿ ಚೆಲ್ಲಿ ಹೋಯಿತು. ನೀರನ್ನು ತರುವಂತೆ ಅತ್ತೆ ಹೇಳಿದ್ದರಿಂದ ಶಾಸ್ತ್ರಿಗಳ ಸೊಸೆ ನೀರು ತರಲು ಹೊರಡಬೇಕಾಯಿತು.
2. ಅಡಿಗೆಮನೆ ಮತ್ತು ದೇವರ ಸಾನ್ನಿಧ್ಯ ಹೇಗಿತ್ತು?

   ಅಡಿಗೆಯ ಒಲೆಯ ಉರಿಯನ್ನೆ ಧೂಪ-ದೀಪವೆಂದೂ ಅದೇ ಅಡುಗೆಯನ್ನೇ ನೈವೇದ್ಯವೆಂದೂ ತೋರಿಸುವಷ್ಟು ಸಮೀಪ ದೇವರ ಸಾನ್ನಿಧ್ಯವಿತ್ತು.
3. ಶಾಸ್ತ್ರಿಗಳ ಮುಖದಲ್ಲಿ ಹೊಗೆ ಮುಸುಕಲು ಕಾರಣವೇನು?

   ಶಾಸ್ತ್ರಿಗಳು ಊಟಕ್ಕೆ ಕೂತ ಕಾಲಕ್ಕೆ ನೀರು ಚೆಲ್ಲಿದ್ದರಿಂದ ಶಾಸ್ತ್ರಿಗಳಿಗೆ ಸಿಟ್ಟು ಬಂದು ಮುಖದಲ್ಲಿ ಬೆಂಕಿ ಕಾಣದಿದ್ದರೂ ಹೊಗೆ ಮುಸುಕಿತು.
4. ಶಾಸ್ತ್ರಿಗಳ ಹೆಂಡತಿ ಏನು ರಂಬಾಟ ಮಾಡಿದರು?

   ಮಹಾರಾಯಿತೀ ಏನು ಮಾಡ್ಬಿಟ್ಟೆ! ಎಲ್ಲಿಯಾದರೂ ನೀರು ತಂದು ನಮ್ಮ ಇಲ್ಲಿಯ ಸೆರೆ ಬಿಡಿಸು. ಮುಂಜಾವಿನಿಂದ ಒಲೆ ಹಿಡಿದು ಕೂತಿದ್ದೇನೆ. ಹೊಗೆ ಯಾಗದೆ ಉರಿಯಾಗಬೇಕು. ಬಿಸಿ ಹತ್ತದೆ ಬೆಂಕಿ ಇರಬೇಕು. ಇಷ್ಟಾಗಿ ಎಲ್ಲರಿಗೂ ಬೇಗನೆ ಪ್ರಸಾದ ಸಿಗಬೇಕು. ನಾನಾದರೂ ಏನು ಸಾಯಲಿ!. ಎಂದು ರಂಬಾಟ ಮಾಡಿದರು.

5. ಶಾಸ್ತ್ರಿಗಳ ಹೆಂಡತಿಗೆ ಮಗನ ಸುಖ ಮಸುಕಾಗಿ ಕಾಣಲು ಕಾರಣವೇನು?

ಅವರ ಮಗನಿಗೆ ಭ್ರಮೆ ಹಿಡಿದಂತಾಗಿತ್ತು. ಇದರಿಂದ ಎರಡು ತಿಂಗಳುಗಳಿಂದ ಶಾಸ್ತ್ರಿಗಳ ಹೆಂಡತಿಗೆ ತಮ್ಮ ಮಗನ ಕಷ್ಟದಿದಿರು ಮೊಮ್ಮಗನ ಸುಖ ಮಸುಕಾಗಿತ್ತು.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಬಾವಿಯ ಪರಿಸರ ಏಕೆ ಭಯಾನಕವಾಗಿತ್ತು?

ಕಾಡುಮಿಕಗಳು ನೀರು ಕುಡಿಯಲು ಬರುವ ಸದ್ದು ಎಂಥವರನ್ನು ಹೆದರಿಸುವ ಸದ್ದಾಗಿತ್ತು. ಇದರೊಂದಿಗೆ ದೆವ್ವದಂತಹ ಆಲದ ಹಾಗೂ ಹುಣಸೆಯ ಮರಗಳ ನೆರೆಯೂ ಬಾವಿಯ ಭಯಾನಕತೆಯನ್ನು ಹೆಚ್ಚಿಸುತ್ತಿದ್ದವು. ಇದರಿಂದಾಗಿ ಬಾವಿಯ ಪರಿಸರ ಭಯಾನಕವಾಗಿತ್ತು.

2. ಸೊಸೆಯ ಬಗ್ಗೆ ಊರವರು ಆಡಿದ ಮಾತುಗಳೇನು?

ನೆರಮನೆಯ ಗುಬ್ಬೆ ಒಬ್ಬಳು ಅವಳಿಗೆ ಹುಚ್ಚ ಗಂಡ ಬೇಕಾಗಿದ್ದನೆಲ್ಲಿ? ಎಂದು ಇವಳ ಕಿವಿಗೆ ಬೀಳುವಂತೆ ಆಡಿದ್ದಳು. ಊರ ಅತ್ತೆ ಒಬ್ಬಳು; ಹುಡುಗನ ಮುಖ ಅತ್ತೆಯ ಮನೆಯವರಂತೆಯೂ ಇಲ್ಲ. ಅಜ್ಜನಂತೆ ಇಲ್ಲ ಎಂದು ಪ್ರಕಟಣೆ ಹೊರಡುತ್ತಿದ್ದಳು. ಹಾಳು ಗುಡಿಯ ಒಕ್ಕಣ್ಣ ಪೂಜಾರಿಯೊಬ್ಬ ಈಕೆಯನ್ನು ಕಂಡಾಗಲೆಲ್ಲ ಪಿಸಿಪಿಸಿ ನಕ್ಕಿದ್ದನ್ನು. ಹೀಗೆ ಊರವರು ಸೊಸೆಯನ್ನು ಕುರಿತು ಮಾತನಾಡಿಕೊಳ್ಳುತ್ತಿದ್ದರು.

3. ಬಾವಿಯ ಬಳಿ ಸೊಸೆ ಸಾವಿಗೆ ಸಿದ್ಧಳಾದ ಬಗೆ ಹೇಗೆ?

ನಾನು ಯಾರಿಗೂ ಬೇಡವಾದವಳೆಂದು ಬಗೆದ ಸೊಸೆ ಬಾವಿಗೆ ಹಾರಿ ಪ್ರಾಣ ಕಳೆದುಕೊಳ್ಳುವ ಯೋಚನೆ ಮಾಡಿದಳು. ಅದರಂತೆ ಕೊಡಕ್ಕೆ ಕಟ್ಟಬೇಕಾಗಿದ್ದ ಉಕ್ಕಡವನ್ನು ಅವಳು ತನ್ನ ಕೊರಳಿಗೆ ಕಟ್ಟಿಕೊಂಡಳು. ಕೊರಳಿನ ಕುಣಿಕೆಯನ್ನು ನಡುವಿಗೆ ಬಿಗಿದು ಸರಿ ಮಾಡಿದಳು ಹಗ್ಗದ ಒಂದು ತುದಿಯನ್ನು ಅವಳು ಮೇಲಿನ ತೊಲೆಯ ಅಡ್ಡ ಕಂಬಕ್ಕೆ ಬಿಗಿದಳು ಬಾವಿಗೆ ನಮಸ್ಕಾರ ಮಾಡಿದಳು ಸೂರ್ಯನಿಗೆ ನಮಸ್ಕಾರ ಮಾಡಿದಳು ತನ್ನ ಸೆರಗು ಕೂದಲು ಸಾವರಿಸಿಕೊಂಡು ಬಾವಿಯ ತುದಿಗೆ ತನ್ನ ಪಾದ ಇಟ್ಟಳು.

4. ಸೊಸೆ ಹಿಂದಿರುಗಿದಾಗ ಮನೆಯವರು ಏನು ಮಾಡುತ್ತಿದ್ದರು?

ಮನೆಗೆ ಬಂದಾಗ ಮಾವನವರು ತಾಂಬೂಲ ಮೆಲ್ಲುತ್ತಿದ್ದರು. ಕೂಸು ಯಜಮಾನರ ತೊಡೆಯ ಮೇಲಿತ್ತು. ಅತ್ತೆ "ಬಾ ತಾಯಿ ಬಿಸಿಲಲ್ಲಿ ಹೋಗಿದ್ದಿ, ಬಾವಿಯ ಮೇಲೆ ಯಾರಿರುತಾರ? ನಾನೇ ಕಳುಹಿಸಬಾರದಿತ್ತು" ಎಂದು ಮರುಗಿದಳು.

5. ಮಗುವಿನ ಕರೆ ತಾಯಿಯಲ್ಲಿ ಜೀವನ ಪ್ರೀತಿಯನ್ನು ಹೇಗೆ ಮೂಡಿಸಿತು?

ನಾದಿನಿ ಮಗುವನ್ನು ತಂದು ಮಡಿಲಲ್ಲಿ ಇಟ್ಟಳು ಆಗ ಅದು ಅಳಹತ್ತಿತು. ತನಗಾಗಿ ಒಂದು ಜೀವಂತ ಜಗತ್ತು ಅಳುತ್ತಿರುವಾಗ ಯಾರದೋ, ಮಾತಿಗಾಗಿ ಮಧ್ಯಾಹ್ನದ ಬೇಸರಕ್ಕೆ ತಾನು ಜೀವಕ್ಕೆರವಾಗುತ್ತಿದ್ದೆನಲ್ಲ. ಎಂದು ಸೊಸೆಗೆ ಅನಿಸಿತ್ತು. ಹೀಗೆ ಮಗುವಿನ ಕರೆ ತಾಯಿಯಲ್ಲಿ ಜೀವನ ಪ್ರೀತಿಯನ್ನು ಮೂಡಿಸಿತು.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಹೊಗೆಯಾಗದೆ ಉರಿಯಾಗಬೇಕು. ಬಿಸಿ ಹತ್ತದೆ ಬೆಂಕಿ ಇರಬೇಕು.

ಈ ಪಸ್ತುತ ವಾಕ್ಯವನ್ನು 'ಬೇಂದ್ರೆ' ಅವರು ಬರೆದಿರುವ 'ಮಗುವಿನ ಕರೆ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಶಾಸ್ತ್ರಿಗಳ ಹೆಂಡತಿ ಸೊಸೆಗೆ ಹೇಳಿದಳು. ಊಟಕ್ಕೆ ಕುಳಿತಾಗ ನೀರು ಚೆಲ್ಲಿಹೋಗಿರುತ್ತದೆ. ಆಗ ಶಾಸ್ತ್ರಿಗಳ ಹೆಂಡತಿ ಮಹಾರಾಯಿತೀ ಏನು ಮಾಡ್ಬಿಟ್ಟೆ! ಎಲ್ಲಿಯಾದರೂ ನೀರು ತಂದು

ನಮ್ಮ ಇಲ್ಲಿಯ ಸೆರೆ ಬಿಡಿಸು. ಮುಂಜಾವಿನಿಂದ ಒಲೆ ಹಿಡಿದು ಕೂತಿದ್ದೇನೆ. ಹೊಗೆ ಯಾಗದೆ ಉರಿಯಾಗಬೇಕು. ಬಿಸಿ ಹತ್ತದೆ ಬೆಂಕಿ ಇರಬೇಕು. ಇಷ್ಟಾಗಿ ಎಲ್ಲರಿಗೂ ಬೇಗನೆ ಪ್ರಸಾದ ಸಿಗಬೇಕು. ನಾನಾದರೂ ಏನು ಸಾಯಲಿ!. ಎಂದು ರಂಬಾಟ ಮಾಡುತ್ತಾರೆ.

2. ಅವಳಿಗೆ ಹುಚ್ಚ ಗಂಡ ಬೇಕಾಗಿದ್ದನೆಲ್ಲಿ?

    ಈ ಪಸ್ತುತ ವಾಕ್ಯವನ್ನು 'ಬೇಂದ್ರೆ' ಅವರು ಬರೆದಿರುವ 'ಮಗುವಿನ ಕರೆ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

    ಈ ಮಾತನ್ನು ನೆರೆಮನೆಯ ಗುಬ್ಬೆಯೊಬ್ಬಳು ಸೊಸೆಯನ್ನು ಕುರಿತು ಹೇಳಿದಳು. ಬಡವರ ಸೊಸೆಗೆ ನಾಲಿಗೆ ಸಡಿಲು ಬಿಡ ಬಲ್ಲವರೆಲ್ಲ ಅತ್ತೆಗಳೇ! ಎಂಬ ಮಾತಿನಂತೆ ಪಕ್ಕದ ಮನೆಯ ಗುಬ್ಬೆಯೊಬ್ಬಳು 'ಅವಳಿಗೆ ಹುಚ್ಚ ಗಂಡ ಬೇಕಾಗಿದ್ದನೆಲ್ಲಿ?' ಎಂದು ಹೇಳುವ ಮೂಲಕ ಸೊಸೆಯನ್ನು ಕುರಿತು ಇಲ್ಲ ಸಲ್ಲದ ಮಾತುಗಳನ್ನು ಆಡುತ್ತಾಳೆ.

3. ತಾನು ಅವಳೆದೆಗೆ ಹುಣ್ಣು.

    ಈ ಪಸ್ತುತ ವಾಕ್ಯವನ್ನು 'ಬೇಂದ್ರೆ' ಅವರು ಬರೆದಿರುವ 'ಮಗುವಿನ ಕರೆ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

    ಈ ಮಾತನ್ನು ಸೊಸೆಯು ತನ್ನಷ್ಟಕ್ಕೆ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾಳೆ. ಸೊಸೆಯು ಬಾವಿ ಕಟ್ಟೆಯ ಬಳಿ ಕುಳಿತು ತನ್ನ ತಾಯಿಯನ್ನು ನೆನೆದು ಅವಳಿಗೆ ನಾನಲ್ಲದೆ ಬೇರೆ ಯಾರಿದ್ದಾರೆ. ನನ್ನ ಸಂಸಾರ ಸುಖವಾಗಿದ್ದರೆ. ನಾನು ಅವಳನ್ನು ನೋಡಿಕೊಳ್ಳಬಹುದಿತ್ತು. ಎಂದು ಹೇಳಿಕೊಳ್ಳುವ ಸಂದರ್ಭದಲ್ಲಿ ಈಗ 'ತಾನು ಅವಳೆದೆಗೆ ಹುಣ್ಣು' ಎಂಬ ಮಾತು ಬರುತ್ತದೆ.

4. ನೀರಿನ ತಳವೇ ನಿನ್ನ ತವರು, ಬಾ.

    ಈ ಪಸ್ತುತ ವಾಕ್ಯವನ್ನು 'ಬೇಂದ್ರೆ' ಅವರು ಬರೆದಿರುವ 'ಮಗುವಿನ ಕರೆ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

    ಸೊಸೆಯು ತನ್ನೆಲ್ಲ ದುಃಖಗಳನ್ನು ನೆನೆದು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿ ಬಾವಿ ಕಟ್ಟೆಯ ಬಳಿ ನಿಂತು ಬಾವಿಯ ಒಳಗಿನ ನೀರನ್ನು ನೋಡುತ್ತಾಳೆ. ಆಗ 'ನೀರಿನ ತಳವೇ ನಿನ್ನ ತವರು, ಬಾ' ಎಂದು ತಣ್ಣನೆಯ ನೀರು ಕಣ್ಣ ಸೆಳೆಯಿತು.

5. ಬಾ ತಾಯಿ, ಬಿಸಿಲಲ್ಲಿ ಹೋಗಿದ್ದಿ.

    ಈ ಪಸ್ತುತ ವಾಕ್ಯವನ್ನು 'ಬೇಂದ್ರೆ' ಅವರು ಬರೆದಿರುವ 'ಮಗುವಿನ ಕರೆ' ಎಂಬ ಗದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

    ಈ ಮಾತನ್ನು ಶಾಸ್ತ್ರಿಗಳ ಹೆಂಡತಿ ಸೊಸೆಗೆ ಹೇಳಿದಳು. ಬಿಸಿಲಿನಲ್ಲಿ ನೀರುತರಲು ಹೋಗಿದ್ದ ಸೊಸೆ ಮನೆಗೆ ಹಿಂದಿರುಗಿದಾಗ. ಬಾ ತಾಯಿ, ಬಿಸಿಲಲ್ಲಿ ಹೋಗಿದ್ದಿ, ಬಾವಿಯ ಮೇಲೆ ಯಾರಿರತಾರ? ನಾನೇ ಕಳಿಸಬಾರದಿತ್ತು ಎಂದು ಕನಿಕರದಿಂದ ಹೇಳುತ್ತಾಳೆ.

ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ತುಂಬಿರಿ.

1. ಬಾವಿಯಿಂದ ಹಳ್ಳಿಯ ಕೊನೆಯ ಮನೆ <u>ಅರ್ಧ ಮೈಲು</u> ದೂರ ವಿತ್ತು.
2. ಊಟಕ್ಕೆ ಕೂತ ಕಾಲಕ್ಕೆ <u>ಕಳ್ಳ</u> ಬಂದಂತಾಯಿತು.
3. ಬಡವರ ಸೊಸೆಗೆ ನಾಲಿಗೆ ಸಡಿಲು ಬಿಡ ಬಲ್ಲವರೆಲ್ಲ <u>ಅತ್ತೆಗಳೇ!</u>
4. ಮಡಿಯ ನುಸುಳು ಆಟದಲ್ಲಿ ಸೊಸೆಯು <u>ಇಣಚಿ</u>ಗಿಂತ ಹೆಚ್ಚಿನ ಚಪಲತೆ ತೋರುತ್ತಿದ್ದಳು.

## ಭಾಷಾಭ್ಯಾಸ

ಅ) ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.

1. ದೆವ್ವ, ಭೂತ, ಆತ್ಮ, ಪ್ರೇತ - (ಆತ್ಮ)
2. ಕೊಡ, ಹಗ್ಗ, ಹಂಡೆ, ಬಾವಿ – (ಹಂಡೆ)
3. ಹುಣಸೆಮರ, ಬೇವಿನಮರ, ಹಾಳುಗೋಡೆ, ಬೀಳುಹೊಲ – (ಬೇವಿನಮರ)
4. ಮಟಮಟ, ಪಿಸಿಪಿಸಿ, ಸುತ್ತುಮುತ್ತು, ಬಿರಬಿರ – (ಸುತ್ತುಮುತ್ತು)

ಆ) ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

| | | | | | | | |
|---|---|---|---|---|---|---|---|
| 1 | ಚಪಲ | : | ಚಪಲತೆ | :: | ಚಂಚಲ | : | ಚಂಚಲತೆ |
| 2 | ಅತ್ತೆ | : | ಮಾವ | :: | ಸೊಸೆ | : | ಅಳಿಯ |
| 3 | ಕೂಸಿನ ದನಿ | : | ಕಿವಿದುಂಬಿತ್ತು | :: | ವಾತ್ಸಲ್ಯವು | : | ಎದೆತುಂಬಿತು |
| 4 | ಯಕ್ಷಿಣಿ | : | ಜಕ್ಕಿಣಿ | :: | ಅಗ್ನಿ | : | ಅಗ್ಗಿ (ಅಗುನಿ) |

ಇ) 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರ |
|---|---|---|
| 1. ನೀರುನಿಡಿ | ಅನುಕರಣಾವ್ಯಯ | ಜೋಡಿಪದ |
| 2. ಮೊನ್ನೆಮೊನ್ನೆ | ಪರಿಮಾಣವಾಚಕ | ದ್ವಿರುಕ್ತಿ |
| 3. ತಟತಟ | ಜೋಡಿಪದ | ಅನುಕರಣಾವ್ಯಯ |
| 4. ಅಯ್ಯೋ | ಕ್ರಿಯಾಪದ | ಉದ್ಗಾರವಾಚಕ |
| 5. ಎಷ್ಟೋತ್ತು | ದ್ವಿರುಕ್ತಿ | ಪರಿಮಾಣವಾಚಕ |
| | ಉದ್ಗಾರವಾಚಕ | |

ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

| | | | | | | | | | |
|---|---|---|---|---|---|---|---|---|---|
| ಮನೆಯಿಂದ | = | ಮನೆ | + | ಇಂದ | ತುಂಡೊಂದು | = | ತುಂಡು | + | ಒಂದು |
| ಮಡಿಯೊಳಗೆ | = | ಮಡಿ | + | ಒಳಗೆ | ಮೈದುಂಬು | = | ಮೈ | + | ತುಂಬು |
| ನೂರಾರು | = | ನೂರು | + | ಆರು | ಅಡ್ಡಗಂಬ | = | ಅಡ್ಡ | + | ಗಂಬ |

ಉ) ಇವುಗಳಿಗೆ ತದ್ಭವಗಳನ್ನು ಬರೆಯಿರಿ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ಸ್ನುಷೆ / ಸ್ನೊಷಾ | ಸೊಸೆ | ಆಶ್ರಯ | ಆಸರೆ |
| ಪ್ರಸಾದ | ಹಸಾದ | ಭ್ರಮೆ | ಬೆಮೆ |
| ಶ್ಮಶಾನ | ಮಸಣ | ಸ್ತಂಭ | ಕಂಬ |
| ಸುಖ | ಸೊಗ | ಪ್ರತಿ | ಪಡಿ |

| | | | |
|---|---|---|---|
| ದಿವ್ಯ | ದಿಬ್ಯ | | |

ಊ) ಇವುಗಳಿಗೆ ಅನ್ಯಲಿಂಗ ರೂಪ ಬರೆಯಿರಿ.

ಅಣ್ಣ - ಅಕ್ಕ ವಿಧವೆ - ವಿಧುರ ತರುಣ - ತರುಣಿ

ಪತ್ನಿ - ಪತಿ ಮೊಮ್ಮಗ - ಮೊಮ್ಮಗಳು

ಋ) ಈ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.

1. ಜಲಸಮಾಧಿ : ಹಡಗು ಸಮುದ್ರದಲ್ಲಿ ಮುಳುಗಿ ಜಲಸಮಾಧಿಯಾಯಿತು.
2. ಅನಾಹುತ : ಚಾಲಕನ ಸಮಯ ಪ್ರಜ್ಞೆಯಿಂದ ದೊಡ್ಡ ಅನಾಹುತ ತಪ್ಪಿತು.
3. ರಂಬಾಟ : ನಮ್ಮ ಮಗು ರಂಬಾಟ ಮಾಡುತ್ತದೆ.
4. ಮುಸುಗುಟ್ಟು : ದನಗಳು ಮುಸುಗುಟ್ಟುತ್ತಿದ್ದವು.
5. ಕಾಲಗುಣ : ಸೊಸೆಯ ಕಾಲಗುಣದಿಂದ ಮನೆಗೆ ಒಳ್ಳೆಯದಾಯಿತು.

# 10. ಕನ್ನಡ ಎನುವುದು ಜೀವನದಿ

- ಎಚ್.ಎಸ್. ವೆಂಕಟೇಶಮೂರ್ತಿ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ಜೀವನದಿಯ ಎರಡು ಬದಿಗೆ ಏನಿದೆ?
   ಗಿರಿವನ ಸಂಪದವಿದೆ.
2. ಪಂಪ ಮಹಾಚಲದ ಜೋಡಿ ಶಿಖರಗಳಾವುವು?
   ಆದಿಪುರಣ ಮತ್ತು ವಿಕ್ರಮಾರ್ಜುನ ವಿಜಯ
3. ಕುಮಾರವ್ಯಾಸನ ಕಾವ್ಯಧಾರೆ ಹೇಗಿದೆ?
   ಸುಳಿಮಿಂಚಿನ ಸೆಳೆ ಮುಂಗಾರಿನ ಮಳೆಯಂತಿದೆ.
4. ರತ್ನಾಕರನ ಕಾವ್ಯವನ್ನು ಯಾವುದಕ್ಕೆ ಹೋಲಿಸಲಾಗಿದೆ?
   ಕೆಂದಾವರೆ ಅರಳಿದ ಸರೋವರಕ್ಕೆ ಹೋಲಿಸಲಾಗಿದೆ.
5. ಸಹ್ಯಾದ್ರಿ ಹಾಗೂ ಧಾರಾಪುರಿಗಳ ಮಹಾಕವಿಗಳು ಯಾರು?
   ಕುವೆಂಪು ಹಾಗೂ ಬೇಂದ್ರೆ ಸಹ್ಯಾದ್ರಿ ಹಾಗೂ ಧಾರಾಪುರಿಗಳ ಮಹಾಕವಿಗಳು

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಪ್ರಾಚೀನ ಕವಿಗಳನ್ನು ಜೀವನದಿ ಪದ್ಯದಲ್ಲಿ ಯಾವ ಹೋಲಿಕೆಯೊಂದಿಗೆ ಪರಿಚಯಿಸಲಾಗಿದೆ?
   ಮಹಾಚಲ ಜೋಡಿ ಶಿಖರ, ಉನ್ನತ ಧವಳಗಿರಿ, ವಿಸ್ತಾರದ ಬಯಲು, ಧುಮ್ಮಿಕ್ಕುವ ಝರಿ, ಮುಂಗಾರಿನ ಮಳೆ ಮತ್ತು ಕೆಂದಾವರೆ ಅರಳಿದ ಸರೋವರಗಳೊಂದಿಗೆ ಪ್ರಾಚೀನ ಕವಿಗಳನ್ನು ಹೋಲಿಕೆ ಮಾಡಲಾಗಿದೆ.
2. ಆಧುನಿಕ ಕವಿಗಳನ್ನು ಪ್ರಕೃತಿಯೊಂದಿಗೆ ಹೇಗೆ ಸಮ್ಮಿಲನಗೊಳಿಸಲಾಗಿದೆ?
   ಸಹ್ಯಾದ್ರಿಯ ಮಲೆ, ಧಾರಾವಾಡದ ಹೊಳಪು, ಕಡಲ ತಡಿಯ ವಿಸ್ತಾರ, ಮಲೆಘಟ್ಟ, ಮೈಸೂರು ಮಲ್ಲಿಗೆ, ಯದುಗಿರಿಯ ಕಣಿವೆಯ ಮೌನ, ನವರಾತ್ರಿ, ಬಿರುಗಾಳಿಗು ಆರದ ಕಿರುಹಣತೆ ಇವುಗಳೊಂದಿಗೆ ಆಧುನಿಕ ಕವಿಗಳನ್ನು ಸಮ್ಮಿಲನಗೊಳಿಸಲಾಗಿದೆ.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಕವಿ-ಕಾವ್ಯ ಸ್ವಭಾವಗಳು ಜೀವನದಿ ಪದ್ಯದಲ್ಲಿ ಹೇಗೆ ಮೂಡಿಬಂದಿದೆ? ವಿವರಿಸಿ.
   ಕನ್ನಡ ಕಾವ್ಯ ಪರಂಪರೆಯನ್ನು ಪ್ರಕೃತಿಗೆ ಹೋಲಿಸಲಾಗಿದೆ. ಪಂಪನ ಕಾವ್ಯಗಳೆರಡು ಮಹಾಚಲದ ಶಿಖರಗಳಂತೆ ಕಂಗೊಳಿಸಿದರೆ, ರನ್ನನ ಕೃತಿಯು ಧವಳಗಿರಿಯಂತೆ ಹೊಳೆಯುತ್ತದೆ. ಇನ್ನೂ ಶಿವಶರಣ ವಚನಕಾರರ ವಚನಗಳು ಭೂಮಿಯಗಲಕ್ಕೂ ಹಬ್ಬಿಕೊಂಡಿವೆ. ಕುಮಾರವ್ಯಾಸ ಭಾರತ ಕಾವ್ಯವು ಮುಂಗಾರಿನ ಮಳೆಯಂತೆ ಎಲ್ಲರನ್ನು ಆಕರ್ಷಿಸಿದೆ. ರತ್ನಾಕರ ವರ್ಣಿಯ ಭರತೇಶ ವೈಭವವು ಕೆಂದಾವರೆಯ ಕೊಳದಂತೆ ಶೋಭಿಸುತ್ತದೆ ಎಂದು ಹೇಳುವದಲ್ಲದೆ ಆಧುನಿಕ ಕವಿಗಳ ಪ್ರಾದೇಶಿಕ ಹಿನ್ನೆಲೆಯನ್ನು ಕವಿ ಸಂಕೇತಿಕರಿಸಿ ಹೇಳಿದ್ದಾರೆ. ಸಹ್ಯಾದ್ರಿ ಮಲೆ – ಕುವೆಂಪು, ಧಾರಾಪುರಿ ಹೊಳೆ – ಬೇಂದ್ರೆ, ಕಡಲತಡಿ – ಕಾರಂತ, ಮಲೆಘಟ್ಟ –

ಅಡಿಗ, ಮೈಸೂರು ಮಲ್ಲಿಗೆ ಹಾರ – ಕೆ.ಎಸ್. ನರಸಿಂಹ ಸ್ವಾಮಿ, ಯದುಗಿರಿ – ಪು.ತಿ.ನರಸಿಂಹಚಾರ್, ನವರಾತ್ರಿ – ಮಾಸ್ತಿ ಹಾಗೂ ಕಿರುಹಣತೆ – ಜಿ.ಎಸ್.ಶಿವರುದ್ರಪ್ಪ ಹೀಗೆ ಕವಿ-ಕಾವ್ಯ ಸ್ವಭಾವವನ್ನು ಈ ಪದ್ಯ ಭಾಗದಲ್ಲಿ ಚಿತ್ರಿಸಲಾಗಿದೆ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಪಂಪ ಮಹಾಚಲ ಜೋಡಿ ಶಿಖರಗಳು.

ಈ ಪಸ್ತುತ ವಾಕ್ಯವನ್ನು 'ಎಚ್.ಎಸ್. ವೆಂಕಟೇಶಮೂರ್ತಿ' ಅವರು ಬರೆದಿರುವ 'ಕನ್ನಡ ಎನುವುದು ಜೀವನದಿ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಕನ್ನಡ ಸಾಹಿತ್ಯ ಪರಂಪರೆಯನ್ನು ವಿವರಿಸುತ್ತಾ ಪಂಪನ ಕೃತಿಗಳಾದ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಗಳು ಪಂಪನೆಂಬ ಮಹಾಚಲದ ಜೋಡಿ ಶಿಖರಗಳು ಎಂದು ಹೇಳುತ್ತಾರೆ. ಅಂದರೆ ಪಂಪನ ಕೃತಿಗಳು ಕನ್ನಡ ಸಾಹಿತ್ಯ ಪರಂಪರೆಗೆ ಶಿಖರಗಳಂತೆ ಎಂದಿದ್ದಾರೆ.

2. ಮೈಸೂರಿನ ಮಲ್ಲಿಗೆ ಹಾರ!

ಈ ಪಸ್ತುತ ವಾಕ್ಯವನ್ನು 'ಎಚ್.ಎಸ್. ವೆಂಕಟೇಶಮೂರ್ತಿ' ಅವರು ಬರೆದಿರುವ 'ಕನ್ನಡ ಎನುವುದು ಜೀವನದಿ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಕನ್ನಡ ಸಾಹಿತ್ಯ ಪರಂಪರೆಯನ್ನು ವಿವರಿಸುತ್ತಾ ಆಧುನಿಕ ಕವಿಗಳನ್ನು ಪರಿಚಯಿಸುವ ಸಂದರ್ಭದಲ್ಲಿ ಕೆ.ಎಸ್. ನರಸಿಂಹ ಸ್ವಾಮಿಯವರನ್ನುಕುರಿತು ಮೈಸೂರಿನ ಮಲ್ಲಿಗೆ ಹಾರ ಎಂದು ಸಂಕೇತಿಕರಿಸಿದ್ದಾರೆ.

3. ಯದುಗಿರಿ ಕಣಿವೆಯ ನಿಶ್ಚಲ ಮೌನ

ಈ ಪಸ್ತುತ ವಾಕ್ಯವನ್ನು 'ಎಚ್.ಎಸ್. ವೆಂಕಟೇಶಮೂರ್ತಿ' ಅವರು ಬರೆದಿರುವ 'ಕನ್ನಡ ಎನುವುದು ಜೀವನದಿ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಕನ್ನಡ ಸಾಹಿತ್ಯ ಪರಂಪರೆಯನ್ನು ವಿವರಿಸುತ್ತಾ ಆಧುನಿಕ ಕವಿಗಳನ್ನು ಪರಿಚಯಿಸುವ ಸಂದರ್ಭದಲ್ಲಿ ಪು.ತಿ. ನರಸಿಂಹಚಾರ್ ಅವರನ್ನು ಕುರಿತು 'ಯದುಗಿರಿಯ ಕಣಿವೆಯ ನಿಶ್ಚಲ ಮೌನ' ಎಂದು ಸಂಕೇತಿಕರಿಸಿದ್ದಾರೆ.

## ಭಾಷಾಭ್ಯಾಸ

ಅ) ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

| | | | | | | | |
|---|---|---|---|---|---|---|---|
| 1 | ಸುಳಿಮಿಂಚಿನ | : | ಸೆಳೆ | :: | ಮುಂಗಾರಿನ | : | ಮಳೆ |
| 2 | ಸಹ್ಯಾದ್ರಿಯ | : | ಮಲೆ | :: | ಧಾರಾಪುರಿ | : | ಹೊಳೆ |
| 3 | ಮೈಸೂರು ಮಲ್ಲಿಗೆ | : | ಕೆ.ಎಸ್.ನ | :: | ನವರಾತ್ರಿ | : | ಮಾಸ್ತಿ |
| 4 | ಕಾರ+ಮುಂದು | : | ಮುಂಗಾರು | :: | ಕೆಂಪಾದ+ತಾವರೆ | : | ಕೆಂದಾವರೆ |

ಆ) ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.

1. ಪಂಪ, ರನ್ನ, ಬೇಂದ್ರೆ, ಹರಿಹರ - (ಬೇಂದ್ರೆ)
2. ಕೆಂದಾವರೆ, ಬಿರುಗಾಳಿ, ಮಹಾಚಲ, ಮುಂಗಾರು – (ಮಹಾಚಲ)
3. ಪು.ತಿ.ನ., ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಸವಣ್ಣ, ಜಿ.ಎಸ್. ಶಿವರುದ್ರಪ್ಪ – (ಬಸವಣ್ಣ)
4. ಘಟ್ಟ, ಶಿಖರ, ಗಿರಿ, ಅಚಲ – (ಶಿಖರ)

5. ಹೊಳೆ, ನದಿ, ಕೆರೆ, ತೊರೆ - (ಕೆರೆ)

ಇ) ನಾನಾರ್ಥ ಬರೆಯಿರಿ

1. ಮಲೆ : ಬೆಟ್ಟ, ಮಂದಗತಿಯಲ್ಲಿ ಸಾಗು
2. ಹೊಳೆ : ನದಿ, ಹೊಳಪು, ಮಿಂಚು
3. ಅರಳು : ವಿಕಸನವಾಗು, ಹೂವು
4. ಕವಿ : ಕಾವ್ಯ ಬರೆಯುವವನು, ಆವರಿಸು

ಇ) 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರ |
|---|---|---|
| 1. ಪಂಪ | ಸಾಹಸಭೀಮ ವಿಜಯಂ | ಆದಿಕವಿ |
| 2. ಕುಮಾರವ್ಯಾಸ | ಕಿರಾತಾರ್ಜುನೀಯ | ನಾರಣಪ್ಪ |
| 3. ರತ್ನಾಕರ | ರಗಳೆ ಕವಿ | ಭರತೇಶ ವೈಭವ |
| 4. ಹರಿಹರ | ಭರತೇಶ ವೈಭವ | ರಗಳೆ ಕವಿ |
| 5. ರನ್ನ | ಆದಿಕವಿ | ಪರಿಮಾಣವಾಚಕ |
| | ನಾರಾಣಪ್ಪ | |

ಉ) ಇವುಗಳಿಗೆ ತದ್ಭವಗಳನ್ನು ಬರೆಯಿರಿ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ವನ | ಬನ | ರತ್ನ | ರನ್ನ |
| ಕವಿ | ಕಬ್ಬಿಗ | ಕುಮಾರ | ಕುವರ |

ಇ) ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಜೀವ x ನಿರ್ಜೀವ     ಮುಂಗಾರು x ಹಿಂಗಾರು

ಚಲ x ಅಚಲ     ವಿಸ್ತಾರ x ಅವಿಸ್ತಾರ

# 11. ಗಾಂಧಿ

- ತೀ.ನಂ.ಶ್ರೀಕಂಠಯ್ಯ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ಗಾಂಧಿಯವರು ಇಳೆಗೆ ಯಾವ ತತ್ವವನ್ನು ಬೋಧಿಸಿದರು?
   ಅಹಿಂಸಾ ತತ್ವವನ್ನು ಬೋಧಿಸಿದರು
2. ಗಾಂಧಿಯವರು ದರ್ಪವನ್ನು ಯಾವುದರಿಂದ ಜಯಿಸಿದರು?
   ಧೈರ್ಯದಲಿ ದರ್ಪವನ್ನು ಜಯಿಸಿದರು.
3. ಗಾಂಧೀಜಿ ಯಾರಿಗೆ ಭಾಗ್ಯರವಿಯಾಗಿದ್ದರು?
   ಭಾರತದ ಭಾಗ್ಯರವಿಯಾಗಿದ್ದರು.
4. ಗಾಂಧೀಜಿ ಯಾವುದರ ಸೂತ್ರಧಾರ?
   ಸರ್ವೋದಯದ ಸೂತ್ರಧಾರ

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಕವಿ ಗಾಂಧಿಯವರನ್ನು ಪವಾಡ ಪುರುಷನೆಂದು ಕರೆಯಲು ಕಾರಣವೇನು?
   ಗಾಂಧೀಜಿ ಈ ನೆಲದ ನಡವಳಿಕೆಯಲಿ ಸ್ವರ್ಗದ ಉನ್ನತ ಹಂತವನ್ನು ಒಂದುಗೂಡಿಸಿದಂತವರು. ಆದ್ದರಿಂದ ಇವರನ್ನು ಕವಿ ಪವಾಡ ಪುರುಷನೆಂದು ಕರೆದಿದ್ದಾರೆ.
2. ಗಾಂಧೀಜಿಯನ್ನು ಹಿರಿಯ ತಂದೆ ಎಂದು ಏಕೆ ಕರೆಯಲಾಗಿದೆ?
   ಹುಡಿಯ ಹುಳುಗಳನ್ನು ಎತ್ತಿ ( ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಸಮಾಜದಲ್ಲಿ ನಿಕೃಷ್ಟರಾಗಿದ್ದವರನ್ನು) ವಜ್ರ ಹೃದಯವ ಬಿತ್ತಿ ಅವರಿಗೆ ವೀರ ಜನ್ಮವನಿತ್ತಿದ್ದರಿಂದ ಅವರನ್ನು ಹಿರಿಯ ತಂದೆ ಎಂದು ಕರೆಯಲಾಗಿದೆ.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಗಾಂಧೀಜಿ ಸರ್ವೋದಯದ ಸೂತ್ರಧಾರ – ಈ ಮಾತಿನ ಹಿನ್ನೆಲೆ ತಿಳಿಸಿರಿ.
   ಗಾಂಧೀಜಿಯವರನ್ನು ಕುರಿತ ಈ ಪದ್ಯದಲ್ಲಿ ತೀ.ನಂ.ಶ್ರೀ ಯವರು ಜಗತ್ತಿಗೆ ಅಹಿಂಸೆಯೇ ಪರಮ ತತ್ವವೆಂದು ಸಾರಿದ ಗಾಂಧಿಯವರು ಭಾರತದ ಪಾಲಿಗೆ ಭಾಗ್ಯ ರವಿಯಾಗಿದ್ದಾರೆ. ಇಲ್ಲಿನ ದೀನ ದಲಿತರ ರಕ್ಷಣೆ ಮಾಡುತ್ತ ಹರಿಜರ ಉದ್ದಾರವೇ ದೇಶದ ಉದ್ದಾರ ಎಂದು ಸಾರಿ ಅವರಿಗೆ ರಕ್ಷೆಯಾಗಿದ್ದಾರೆ. ಅಲ್ಲದೆ ಮೇಲು ಕೀಳಿಲ್ಲದ ನಿರ್ಮಲವಾದ ಧರ್ಮದ ಪ್ರತಿಪಾದಕರಾಗಿದ್ದಾರೆ. ಜನಪರರಾಗಿದ್ದು ಜನತೆಯ ಅಂತಸಾಕ್ಷಿಯಾಗಿದ್ದಾರೆ. ಒಟ್ಟಾರೆಯಾಗಿ ಗಾಂಧೀಜಿ ಸರ್ವರ ಸರ್ವೋದಯದ ಸೂತ್ರಧಾರರಾಗಿದ್ದಾರೆ.
2. ಗಾಂಧಿ ಕವನದ ಸಾರಾಂಶವನ್ನು ಸಂಗ್ರಹವಾಗಿ ಬರೆಯಿರಿ.
   ಗಾಂಧಿಯವರು ತಮ್ಮ ಬದುಕಿನುದ್ದಕ್ಕೂ ಜಗತ್ತಿಗೆ ಅಂಹಿಸೆಯೇ ಪರಮ ಧರ್ಮ ಎಂದು ಸಾರಿದವರು. ಇವರು ಬ್ರಿಟಿಷರ ದರ್ಪವನ್ನು ಧೈರ್ಯದಲ್ಲಿ, ಶಸ್ತ್ರ ಹೋರಾಟವನ್ನು ಸಹನೆಯಲಿ, ಮೂರ್ಖತನವನ್ನು ಸತ್ಯದಲಿ ಜಯಿಸಿದಂತ ವೀರರಾಗಿದ್ದಾರೆ. ಅಲ್ಲದೆ ಆಂಗ್ಲರ ಆಡಳಿತದಲ್ಲಿ ನಿಕೃಷ್ಟರಾಗಿದ್ದ ಭಾರತೀಯರಿಗೆ ಧೈರ್ಯವನ್ನು

ತುಂಬಿ ವೀರತನವನ್ನು ಕಲಿಸಿದರು. ಈ ಭಾರತದ ಮಣ್ಣಿನಲ್ಲಿಯೇ ಸ್ವತಂತ್ರ ಎಂಬ ಸ್ವರ್ಗವನ್ನು ತಂದ ಮಹಾ ಪವಾಡಪುರಷ. ಪ್ರೇಮದ ಮೂಲಕವೇ ವಿಶ್ವದ ಜನರ ಮನಸ್ಸನ್ನು ಗೆದ್ದಂತಹ ವ್ಯಕ್ತಿ. ದೀನದಲಿತರ ಪಾಲಿಗೆ ರಕ್ಷೆಯಾಗಿ ಭಾರತದ ಪಾಲಿಗೆ ಭಾಗ್ಯ ರವಿಯಾಗಿ ಬಂದಂತಹ ಮಹಾನ್ ಚೇತನ ಗಾಂಧಿ. ಇವರು ಸಮಾನತೆಯ ಶುದ್ಧ ಧರ್ಮದ ಪ್ರತೀಕರಾಗಿ ಜನತೆಯಂತಃಸಾಕ್ಷಿಯಾದವರು. ಹಾಗೂ ಸರ್ವರ; ಸರ್ವೋದಯದ ಸೂತ್ರಧಾರರು ಈ ನಮ್ಮ ಗಾಂಧಿ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಶಕಠತೆಯನು ಸತ್ಯದಲಿ ಜಯಿಸಿದ ಕಲಿ

ಈ ಪಸ್ತುತ ವಾಕ್ಯವನ್ನು 'ತೀ.ನ.ಶ್ರೀ' ಅವರು ಬರೆದಿರುವ 'ಗಾಂಧಿ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಗಾಂಧಿಯವರನ್ನು ಕುರಿತು ಹೇಳಿರುವುದಾಗಿದೆ. ಗಾಂಧಿಯವರ ವ್ಯಕ್ತಿತ್ವವನ್ನು ಕುರಿತು ಹೇಳುತ್ತಾ ಕವಿಯು ಗಾಂಧಿಯವರು ಜಗತ್ತಿಗೆ ಅಹಿಂಸಾ ಧರ್ಮವನ್ನು ಸಾರಿದ ಮಹಾನ್ ವ್ಯಕ್ತಿ. ಅವರು ಬ್ರಿಟಿಷರ ದರ್ಪವನ್ನು ಧೈರ್ಯದಿಂದ, ಅವರ ಸಶಸ್ತ್ರ ಹೋರಾಟವನ್ನು ಸಹನೆಯಿಂದ ಮತ್ತು ಅವರ ಮೂರ್ಖತನವನು ಸತ್ಯದಲಿ ಜಯಿಸಿದವರು ಎಂದು ಹೇಳುವ ಸಂದರ್ಭದಲ್ಲಿ 'ಶಕಠತೆಯನು ಸತ್ಯದಲಿ ಜಯಿಸಿದ ಕಲಿ' ಎಂದು ಹೇಳುತ್ತಾರೆ.

2. ವಿಮಲ ಧರ್ಮದ ವಾಣಿ ಜನತೆಯಂತಃಸಾಕ್ಷಿ

ಈ ಪಸ್ತುತ ವಾಕ್ಯವನ್ನು 'ತೀ.ನ.ಶ್ರೀ' ಅವರು ಬರೆದಿರುವ 'ಗಾಂಧಿ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಗಾಂಧಿಯವರನ್ನು ಕುರಿತು ಹೇಳಿರುವುದಾಗಿದೆ. ಗಾಂಧಿಯವರ ವ್ಯಕ್ತಿತ್ವವನ್ನು ಕುರಿತು ಹೇಳುತ್ತಾ ಕವಿಯು ಗಾಂಧೀಜಿ ದೀನದಲಿತರ ಪಾಲಿಗೆ ರಕ್ಷೆಯಾಗಿ ಭಾರತದ ಪಾಲಿಗೆ ಭಾಗ್ಯ ರವಿಯಾಗಿ ಬಂದಂತಹ ಮಹಾನ್ ಚೇತನ. ಇವರು ಸಮಾನತೆಯ ಶುದ್ಧ ಧರ್ಮದ ಪ್ರತೀಕರಾಗಿದ್ದರು. ಎಂದು ಹೇಳುವಾಗ 'ವಿಮಲ ಧರ್ಮದ ವಾಣಿ ಜನತೆಯಂತಃಸಾಕ್ಷಿ' ಎಂದು ಹೇಳುತ್ತಾರೆ.

## ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.

| | | | | | | |
|---|---|---|---|---|---|---|
| ಹುಳಗಳನೆತ್ತಿ | = | ಹುಳುಗಳನು | + | ಎತ್ತಿ | = | ಲೋಪಸಂಧಿ |
| ಪೂರ್ಣಾಹುತಿ | = | ಪೂರ್ಣ | + | ಆಹುತಿ | = | ಸವರ್ಣ ದೀರ್ಘ ಸಂಧಿ |
| ಸರ್ವೋದಯ | = | ಸರ್ವ | + | ಉದಯ | = | ಗುಣಸಂಧಿ |

ಆ) ಇವುಗಳಿಗೆ ತದ್ಭವಗಳನ್ನು ಬರೆಯಿರಿ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ವಜ್ರ | ಬಜ್ಜರ | ವೀರ | ಬೀರ |
| ಜನ್ಮ | ಜನುಮ | ಪ್ರಾಣ | ಹರಣ |

| | | | |
|---|---|---|---|
| ಯಜ್ಞ | ಜನ್ನ | ಧರ್ಮ | ದಮ್ಮ |
| ಸಂಸ್ಥಾ | ಸಂಸ್ಥೆ / ಸಂತೆ | | |

**ಇ) ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

**ಬಲ x ಅಬಲ ಸತ್ಯ x ಅಸತ್ಯ ಅಹಿಂಸೆ x ಹಿಂಸೆ**

**ಸಹನೆ x ಅಸಹನೆ ಧೈರ್ಯ x ಅಧೈರ್ಯ**

**ಈ) ದೀನದಲಿತ – ಇಂಥ 5 ಜೋಡಿನುಡಿಗಳನ್ನು ಬರೆಯಿರಿ.**

**ಸುಖ-ದುಃಖ, ಹಗಲು ಇರುಳು, ದೀನ ದಲಿತ, ಶಕ್ತ ಅಶಕ್ತ, ಯೋಗಾಯೋಗ, ಮಠ ಮಂದಿರ ಇತ್ಯಾದಿ**

# 12. ಭಾಗ್ಯದ ಬಳೆಗಾರ

\- ಜನಪದ ಗೀತೆ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ತವರಿಗೆ ಹೋಗಿ ಬಾ ಎಂದು ಬಾಲೆ ಯಾರಿಗೆ ಹೇಳಿದಳು?

   ಬಳೆಗಾರನಿಗೆ ಹೇಳಿದಳು
2. ತವರಿಗೆ ಬಳೆ ತೆಗೆದುಕೊಂಡು ಹೋಗು ಎಂದು ಹೇಳಲು ಕಾರಣವೇನು?

   ಅವಳ ತವರೂರಲ್ಲಿ ಬಳೆಯಿಲ್ಲ ಆದ್ದರಿಂದ ತವರಿಗೆ ಬಳೆ ತೆಗೆದುಕೊಂಡು ಹೋಗು ಎಂದು ಹೇಳುತ್ತಾಳೆ.
3. ಹಂಚಿನ ಮನೆಯ ಕದವನ್ನು ಯಾವುದರಿಂದ ಮಾಡಲಾಗಿದೆ?

   ಕಂಚಿನಿಂದ ಮಾಡಲಾಗಿದೆ.
4. ಹಡೆದವ್ವನ ಆಸೆ ಏನು?

   ಅಚ್ಚ ಕೆಂಪಿನ ಬಳೆ ಹಸಿರು ಗೀರಿನ ಬಳೆ ಎಂದರೆ ಹಡೆದವ್ವನಿಗೆ ಆಸೆ.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ತೋರಿಸು ಬಾರೆ ತವರೂರ ಎಂದು ಬಳೆಗಾರ ಕೇಳಿದುದು ಏಕೆ?

   ಬಳೆಗಾರನಿಗೆ ಬಾಲೆಯ ತವರೂರು ಎಲ್ಲಿದೆ ಎಂಬುದರ ಗೊತ್ತು ಗುರಿ ಇಲ್ಲದಿದ್ದರಿಂದ ನಾನೇನು ಬಲ್ಲೆನು ನಿನ್ನ ತವರೂರ ತೋರಿಸು ಬಾರೆ ಎಂದು ಕೇಳುತ್ತಾನೆ.
2. ಯಾವ ದಾರಿಯಲ್ಲಿ ಹೋಗುವಂತೆ ಬಾಲೆ ಬಳೆಗಾರನಿಗೆ ತಿಳಿಸಿದಳು?

   ಬಲ ಭಾಗದಲ್ಲಿ ಬಾಳೆಗಿಡಗಳು ಮತ್ತು ಎಡಭಾಗದಲ್ಲಿ ಸೀಬೆಯ ಗಿಡಗಳು ಇದ್ದಾವೆ ಅವುಗಳ ನಡುವೆ ಇರುವ ದಾರಿಯಲ್ಲಿ ಹೋಗುವಂತೆ ಬಾಲೆ ಬಳೆಗಾರನಿಗೆ ತಿಳಿಸಿದಳು.
3. ಬಳೆಗಾರನಿಗೆ ಹಡದವ್ವನ ಗುರುತನ್ನು ಬಾಲೆ ಹೇಳಿದುದು ಹೇಗೆ?

   ಮುತ್ತೈದೆ ಹಟ್ಟಿಯಲ್ಲಿ ಮುತ್ತಿನ ಚಪ್ಪರ ಹಾಕಿದ್ದಾರೆ. ಅದರ ನಟ್ಟನಡುವೆ ಪಗಡೆಯಾಡುತ್ತಾ ಕುಳಿತಿರುತ್ತಾಳೆ ಅವಳೆ ನನ್ನ ಹಡೆದವ್ವ ಎಂದು ಬಾಲೆ ಬಳೆಗಾರನಿಗೆ ಹಡದವ್ವನ ಗುರುತನ್ನು ಹೇಳಿದಳು.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಬಾಲೆ ತನ್ನ ತವರೂರು ಎಲ್ಲಿಹುದೆಂದು ಬಳೆಗಾರನಿಗೆ ಹೇಳಿದಳು?

   ಬಲ ಭಾಗದಲ್ಲಿ ಬಾಳೆಗಿಡಗಳು ಮತ್ತು ಎಡಭಾಗದಲ್ಲಿ ಸೀಬೆಯ ಗಿಡಗಳು ಇದ್ದಾವೆ ಅವುಗಳ ನಡುವೆ ಇರುವ ದಾರಿಯಲ್ಲಿ ಹೋಗಬೇಕು. ಹಂಚಿನ ಮನೆ ಆ ಮನೆಗೆ ಕಂಚಿನ ಕದವಿದೆ. ಹಾಗೂ ಆ ಮನೆಯ ಬಳಿ ಎರಡು ಗಿಳಿಗಳು ಇರುತ್ತವೆ. ಅಲ್ಲಿ ನನ್ನ ತವರು ಇದೆ ಎಂದು ಬಾಲೆ ಬಳೆಗಾರನಿಗೆ ಹೇಳಿದಳು.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ನಿನ್ನ ತವರೂರ ನಾನೇನು ಬಲ್ಲೆನು

ಈ ಪಸ್ತುತ ವಾಕ್ಯವನ್ನು ಜನಪದ ಗೀತೆಯಾದ 'ಭಾಗ್ಯದ ಬಳೆಗಾರ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಬಳೆಗಾರ ಬಾಲೆಗೆ ಹೇಳುತ್ತಾನೆ. ಬಳೆ ಮಾರಲು ಬಂದ ಬಳೆಗಾರನಿಗೆ ಬಾಲೆಯು ನನ್ನ ತವರೂರಿನಲ್ಲಿ ಬಳೆಗಳಿಲ್ಲ ಅಲ್ಲಿಗೆ ಹೋಗಿ ಬಾ ಎಂದು ಹೇಳುತ್ತಾಳೆ. ಆಗ ಬಳೆಗಾರನು 'ನಿನ್ನ ತವರೂರ ನಾನೇನು ಬಲ್ಲೆನು' ಎಂದು ಹೇಳುತ್ತಾನೆ.

2. ಅವ್ವೆ ಕಣೋ ನನ್ನ ಹಡೆದವ್ವ

ಈ ಪಸ್ತುತ ವಾಕ್ಯವನ್ನು ಜನಪದ ಗೀತೆಯಾದ 'ಭಾಗ್ಯದ ಬಳೆಗಾರ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಬಾಲೆ ಬಳೆಗಾರನಿಗೆ ಹೇಳುತ್ತಾಳೆ. ಬಳೆ ಮಾರಲು ಬಂದ ಬಳೆಗಾರನಿಗೆ ಬಾಲೆಯು ನನ್ನ ತವರೂರಿನಲ್ಲಿ ಬಳೆಗಳಿಲ್ಲ ಅಲ್ಲಿಗೆ ಹೋಗಿ ಬಾ ಎಂದು ಹೇಳುವಾಗ ಊರಿನ ದಾರಿಯನ್ನು, ಮನೆಯ ಗರುತುಗಳನ್ನು ಹೇಳುತ್ತಾಳೆ ಹಾಗೂ ತನ್ನ ತಾಯಿಯ ಗುರುತುಗಳನ್ನು ಹೇಳುವಾಗ ಮುತ್ತೈದೆ ಹಟ್ಟಿಯಲ್ಲಿ ಮುತ್ತಿನ ಚಪ್ಪರ ಹಾಕಿದ್ದಾರೆ. ಅದರ ನಟ್ಟನಡುವೆ ಪಗಡೆಯಾಡುತ್ತಾ ಕುಳಿತಿರುತ್ತಾಳೆ 'ಅವ್ವೆ ಕಣೋ ನನ್ನ ಹಡೆದವ್ವ'ಎಂದು ಹೇಳುತ್ತಾಳೆ.

3. ಕೊಂಡ್ಹೋಗೊ ಎನ್ನ ತವರೀಗೆ.

ಈ ಪಸ್ತುತ ವಾಕ್ಯವನ್ನು ಜನಪದ ಗೀತೆಯಾದ 'ಭಾಗ್ಯದ ಬಳೆಗಾರ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಬಾಲೆ ಬಳೆಗಾರನಿಗೆ ಹೇಳುತ್ತಾಳೆ. ಬಳೆ ಮಾರಲು ಬಂದ ಬಳೆಗಾರನಿಗೆ ಬಾಲೆಯು ನನ್ನ ತವರೂರಿನಲ್ಲಿ ಬಳೆಗಳಿಲ್ಲ ಅಲ್ಲಿಗೆ ಹೋಗಿ ಬಾ ಎಂದು ಹೇಳುವಾಗ ಊರಿನ ದಾರಿಯನ್ನು, ಮನೆಯ ಗರುತುಗಳನ್ನು ಹೇಳುತ್ತಾಳೆ ಹಾಗೂ ತನ್ನ ತಾಯಿಯ ಗುರುತುಗಳನ್ನು ಹೇಳಿ ನನ್ನ ಹಡೆದವ್ವಗೆ ಅಚ್ಚ ಕೆಂಪಿನ ಬಳೆ ಹಸಿರು ಗೀರಿನ ಬಳೆ ಎಂದರೆ ಬಲು ಆಸೆ 'ಕೊಂಡ್ಹೋಗೊ ಎನ್ನ ತವರೀಗೆ' ಎಂದು ಹೇಳುತ್ತಾಳೆ.

## ಭಾಷಾಭ್ಯಾಸ

ಅ) ಬಿಟ್ಟ ಸ್ಥಳ ತುಂಬಿರಿ.

1. ಬಾಳೆ ಬಲಕ್ಕೆ ಬಿಡು <u>ಸೀಬೆ</u> ಎಡಕ್ಕೆ ಬಿಡು
2. <u>ಹಂಚಿನ ಮನೆ</u> ಕಾಣೋ ಕಂಚಿನ ಕದ ಕಾಣೋ
3. ಅಚ್ಚ ಕೆಂಪಿನ ಬಳೆ <u>ಹಸಿರು</u> ಗೀರಿನ ಬಳೆ

ಆ) ಕೆಳಗಿನ ಪದಗಳನ್ನು ಬಳಸಿ ವಾಕ್ಯ ರಚಿಸಿರಿ

1. ಗೊತ್ತುಗುರಿ : ಅಲೆಮಾರಿಗಳಿಗೆ ಗೊತ್ತುಗುರಿ ಇರುವುದಿಲ್ಲ.
2. ಎಡಬಲ : ರಸ್ತೆಯ ಎಡಬಲಗಳಲ್ಲಿ ಎತ್ತರದ ಮರಗಳಿವೆ.
3. ನಟ್ಟನಡುವೆ : ಬಾನಿನ ನಟ್ಟನಡುವೆ ಚಂದ್ರ ಬಂದಿದ್ದಾನೆ.

ಇ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

| | | | | |
|---|---|---|---|---|
| ಇನ್ನೆಲ್ಲಿ | = | ಇನ್ನ | + | ಎಲ್ಲಿ |
| ಅಲ್ಲಿಹುದು | = | ಅಲ್ಲಿ | + | ಇಹುದು |

ಕೊಂಡ್ಹೋಗೊ = ಕೊಂಡು + ಹೋಗೊ

ಗೊತ್ತಾಯ್ತು = ಗೊತ್ತು + ಆಯ್ತು

ಈ) ಕೆಳಗಿನ ಪದಗಳ ಗ್ರಾಂಥಿಕ ರೂಪ ಬರೆಯಿರಿ

| ಗ್ರಾಮ್ಯ ರೂಪ | ಗ್ರಾಂಥಿಕ ರೂಪ |
|---|---|
| ನಿಂತಾವು | ನಿಂತಿದ್ದಾವೆ |
| ಅವ್ಳೆ | ಅವಳೆ |
| ಕೊಂಡ್ಹೋಗೊ | ಕೊಂಡುಹೋಗೊ |
| ಹಡೆದವ್ಗೆ | ಹಡೆದವ್ವನಿಗೆ |

ಈ) ಕೆಳಗಿನ ಪದಗಳ ಶುದ್ಧ ರೂಪಗಳನ್ನು ಬರೆಯಿರಿ

| ಅಶುದ್ಧ ರೂಪ | ಶುದ್ಧ ರೂಪ |
|---|---|
| ಬಾಗ್ಯ | ಭಾಗ್ಯ |
| ಥವರುಮನೆ | ತವರುಮನೆ |
| ಭಳೆಗಾರ | ಬಳೆಗಾರ |
| ಮೂತ್ತೈದೆ | ಮುತ್ತೈದೆ |

# 13. ಯುಗಾದಿ ಬರುವುದು ನಮಗೆಂದೆ

- ಹೊರೆಯಾಲ ದೊರೆಸ್ವಾಮಿ

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ಹರ್ಷವು ಏನಾಯಿತು?

   ವರ್ಷ ವರ್ಷಕ್ಕೂ ಯಾತಕೊ ಏನೊ ಹರ್ಷವು ಉಡುಗಿತು.
2. ಹರ್ಷವು ಎಲ್ಲಿ ಅಡಗಿತು?

   ಹರ್ಷವು ಎದೆಯಲೆ ಅಡಗಿತು.
3. ಬಡವರ ಜೀವನ ಯಾರ ಸ್ವತ್ತು?

   ಬಡವರ ಜೀವನ ಸಾವಿನ ಸ್ವತ್ತು.
4. ಯುಗಾದಿ ಬಂದರು ಯುಗಾದಿ ಹೋದರು ಯಾರ ಬಸಿರು ತುಂಬಲಿಲ್ಲ?

   ಬಡವರ ಬಸಿರು ತುಂಬಲಿಲ್ಲ.
5. ಮೂಡಣದಲ್ಲಿ ಏನು ಮೂಡಲಿಲ್ಲ?

   ಜೀವದ ಉಸಿರು ಮೂಡಲಿಲ್ಲ.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಎಂಥ ಯುಗಾದಿ ಬರಲೆಂದು ಕವಿ ಆಶಿಸುತ್ತಾನೆ?

   ಬಡವರ ಬಸಿರು ತುಂಬಿಸುವಂತಹ ಹಾಗೂ ಬಡವರ ಜೀವನವನ್ನು ಉತ್ತಮ ಪಡಿಸುವ ಜೀವದ ಕನಸು ನನಸಾಗಿಸಿ ಬೆಳಗಿಸುವ ಯುಗಾದಿ ಬರಲೆಂದು ಕವಿ ಆಶಿಸುತ್ತಾನೆ.
2. ಯುಗಾದಿ ನಿರೀಕ್ಷೆಯಲ್ಲಿರುವವರ ಸ್ಥಿತಿ ಹೇಗಿದೆ?

   ಯುಗಾದಿ ನಿರೀಕ್ಷೆಯಲ್ಲಿರುವವರ ಸ್ಥಿತಿ ಅನ್ನದ ಅಗುಳನ್ನು ಹುಡುಕುವಂತಾಗಿದೆ ಮತ್ತು ಚಿನ್ನದ ಕಾಳನು ತಡಕುವಂತಾಗಿದೆ.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಬೇವಿನ ಹಳ್ಳ ತುಳುಕಾಡುತ್ತಿದೆ ಎಂದು ಕವಿ ಏಕೆ ಹೇಳುತ್ತಾನೆ?

   ಯುಗಾದಿಯ ಸಾಂಕೇತಿಕ ಆಚರಣೆಯು ಬೆಲ್ಲ ಮತ್ತು ಬೇವಿನ ಮಿಶ್ರಣವಾಗಿದೆ. ಬೆಲ್ಲ ನಲಿವಿನ ಸಂಕೇತವಾದರೆ; ಬೇವು ನೋವಿನ ಸಂಕೇತವಾಗುತ್ತದೆ. ಇಲ್ಲಿ ವರ್ಷದಿಂದ ವರ್ಷಕ್ಕೆ ಬಡವರ ಬದುಕಿನಲ್ಲಿ ಹರ್ಷವು ಕುಂದುತ್ತಾ ಹೋಗುತ್ತಿದೆ. ಅವರ ಸಂತೋಷವೆಲ್ಲವು ಹೊರಗೆ ಬರಲಾಗದೆ ಅವರ ಎದೆಯಲ್ಲೆ ಅಡಗಿ ಕುಳಿತಿದೆ. ಇನ್ನು ಬಡವರು ನಗುವಿನ ಪರದೆಯ ಹಿಂದೆ ಬದುಕುತ್ತಿದ್ದರು ಅವರ ನಿಜ ಬದುಕಿನಲ್ಲಿ ಬೇವಿನ ಹಳ್ಳ ತುಳುಕಾಡುತ್ತಿದೆ ಎಂದು ಕವಿ ಹೇಳುತ್ತಾನೆ.
2. ಕವಿ ಎಂತಹ ಯುಗಾದಿಯ ನಿರೀಕ್ಷೆಯಲ್ಲಿದ್ದಾನೆ?

ಬಡವರ ಬಸಿರು ತುಂಬಿಸುವಂತಹ ಹಾಗೂ ಬಡವರ ಜೀವನವನ್ನು ಉತ್ತಮ ಪಡಿಸುವ ಜೀವದ ಕನಸು ನನಸಾಗಿಸಿ ಬೆಳಗಿಸುವ, ಅನ್ನಕ್ಕಾಗಿ ಹುಡುಕಾಡುವ ಜನರಿಗೆ ನೆಮ್ಮದಿಯ ತರುವ ದಿನವೇ ಬಡವರ ಪಾಲಿಗೆ ಯುಗಾದಿ. ಅವರ ಬದುಕಿನಲ್ಲಿಯು ಕೆಂಪು ಹಳದಿ ನೀಲಿ ಬಣ್ಣಗಳ ಹೂಗಳನ್ನು ನೋಡಿ ನೆಗೆದಾಡುವಂತಹ ಅಂದರೆ ಸಮೃದ್ಧಿಯನ್ನು ತರುವ ಯುಗಾದಿಯ ನಿರೀಕ್ಷೆಯಲ್ಲಿ ಕವಿ ಇದ್ದಾನೆ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಬಡವರ ಜೀವನ ಸಾವಿನ ಸ್ವತ್ತು.

   ಈ ಪಸ್ತುತ ವಾಕ್ಯವನ್ನು 'ಹೊರೆಯಾಲ ದೊರೆಸ್ವಾಮಿ' ಅವರು ಬರೆದಿರುವ 'ಯುಗಾದಿ ಬರುವುದು ನಮಗೆಂದೆ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ಕವಿಯು ಓದುಗರಿಗೆ ಹೇಳುತ್ತಾನೆ. ಯುಗಾದಿ ಸಂಭ್ರಮ ತರುವ ಹೊಸ ವರ್ಷದ ಸಂಕೇತವಾಗಿದ್ದರು ಕೂಡ ಬಡವರ ಬದುಕಿನಲ್ಲಿ ಯಾವ ಬದಲಾವಣೆಯು ಆಗಲಿಲ್ಲ; ಬಡವರ ಬದುಕಿನ ಕೊರಗುಗಳು ಒಂದೇ ಎರಡೆ ಇವರ ಬದುಕು ಸಮಸ್ಯೆಗಳಲ್ಲಿಯೇ ಮುಗಿದು ಹೋಗುವುದರಿಂದ 'ಬಡವರ ಜೀವನ ಸಾವಿನ ಸ್ವತ್ತು'. ಎಂದು ಹೇಳುತ್ತಾನೆ.

2. ತುಂಬಲಿಲ್ಲವೆ ಬಡವರ ಬಸಿರು

   ಈ ಪಸ್ತುತ ವಾಕ್ಯವನ್ನು 'ಹೊರೆಯಾಲ ದೊರೆಸ್ವಾಮಿ' ಅವರು ಬರೆದಿರುವ 'ಯುಗಾದಿ ಬರುವುದು ನಮಗೆಂದೆ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ಕವಿಯು ಗೆಳತಿಗೆ ಹೇಳುತ್ತಾನೆ. ಯುಗಾದಿ ಬಂದರು ಕೂಡ ಬಡವರ ಬದುಕಿನಲ್ಲಿ ಯಾವ ಬದಲಾವಣೆಯು ಆಗಲಿಲ್ಲ; ಬಡವರ ಬಸಿರು ತುಂಬಲಿಲ್ಲ ಅಂದರೆ ಅವರ ಕಷ್ಟ ಕಾರ್ಪಣ್ಯಗಳು ನಿವಾರಣೆಯಾಗಲಿಲ್ಲ ಎಂದು ಹೇಳುವಾಗ 'ತುಂಬಲಿಲ್ಲವೆ ಬಡವರ ಬಸಿರು' ಎಂಬ ಮಾತು ಬಂದಿದೆ.

3. ನನಸಾಗಿಸಿ ಬೆಳಗುವ ದಿನವೆಂದು?

   ಈ ಪಸ್ತುತ ವಾಕ್ಯವನ್ನು 'ಹೊರೆಯಾಲ ದೊರೆಸ್ವಾಮಿ' ಅವರು ಬರೆದಿರುವ 'ಯುಗಾದಿ ಬರುವುದು ನಮಗೆಂದೆ' ಎಂಬ ಪದ್ಯ ಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ಕವಿಯು ಗೆಳತಿಗೆ ಹೇಳುತ್ತಾನೆ. ಯುಗಾದಿ ಬಂದರು ಕೂಡ ಬಡವರ ಬದುಕಿನಲ್ಲಿ ಯಾವ ಬದಲಾವಣೆಯು ಆಗಲಿಲ್ಲ; ಬಡವರ ಬಸಿರು ತುಂಬಲಿಲ್ಲವೆ ಗೆಳತಿ. ಎಂದೇ ಗೆಳತಿ, ಹೇಳೆ ಗೆಳತಿ ಯುಗಾದಿ ಬರುವುದು ನಮಗೆಂದು ತುಳುಕಿಸುವಂಥ ಜೀವದ ಕನಸ 'ನನಸಾಗಿಸಿ ಬೆಳಗುವ ದಿನವೆಂದೆ' ಎಂದು ಕೇಳುತ್ತಾನೆ.

## ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

| | | | | |
|---|---|---|---|---|
| ಒಳಗೊಳಗೆಲ್ಲ | = | ಒಳಗೆ | + | ಒಳಗೆಲ್ಲ |
| ತುಳುಕಾಡಿತು | = | ತುಳುಕಿ | + | ಆಡಿತು |
| ತುಂಬಲಿಲ್ಲವೆ | = | ತುಂಬಲು | + | ಇಲ್ಲವೆ |

| | | | | |
|---|---|---|---|---|
| ಮೂಡಣದಲ್ಲಿ | = | ಮೂಡಣದ | + | ಅಲ್ಲಿ |
| ನೆಗೆದಾಡುವ | = | ನೆಗೆದು | + | ಆಡುವ |

ಆ) ಇವುಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ

| | |
|---|---|
| ಅಡಗು | ಅವಿತುಕೋ, ಮರೆಯಾಗಿರು |
| ಅಲಗು | ಖಡ್ಗ, ಕತ್ತಿ |
| ಮೂಡಣ | ಪೂರ್ವದಿಕ್ಕು, ಸೂರ್ಯೋದಯದ ದಿಕ್ಕು |
| ನಿಜ | ಸತ್ಯ, ನೈಜ, ಸ್ವಾಭಾವಿಕ |

ಇ) ತತ್ಸಮ – ತದ್ಭವ ಬರೆಯಿರಿ

| ತತ್ಸಮ | ತದ್ಭವ |
|---|---|
| ವರ್ಷ | ವರುಷ |
| ಹರ್ಷ | ಹರುಷ |
| ವರ್ಣ | ಬಣ್ಣ |

# 14. ಆಧುನಿಕ ವಚನಗಳು

- ಈರಣ್ಣ ಇಟಗಿ
- ಶಾಂತಾದೇವಿ ಕೆ. ಸಾಬಾದಿ

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ಭೂಮಿಯು ಯಾವುದರಿಂದ ಸಿಡಿದು ಬಂತು?
   ಸೂರ್ಯನಿಂದ ಸಿಡಿದು ಬಂತು.
2. ಭೂಮಿಯಿಂದ ಸಿಡಿದು ಬಂದ ಚಂದ್ರ ಯಾರ ಸುತ್ತು ಸುತ್ತುತ್ತಿರುವನು?
   ಭೂಮಿಯ ಸುತ್ತ ಸುತ್ತುತ್ತಿರುವನು.
3. ಚೇಳನ್ನು ಕಂಡು ಹೆದರುವುದೇಕೆ?
   ಚೇಳಿನಲ್ಲಿ ವಿಷವಿರುವುದರಿಂದ.
4. ಧ್ಯಾನವೆಂಬ ಊರುಗೋಲು ಏಕೆ ಬೇಕು?
   ಅಧ್ಯಾತ್ಮ ಪಥದಲಿ ಮುಂದೆ ಸಾಗಲು.
5. ಅಂತರವಾಣಿಯ ಆಲಿಸುವುದಕ್ಕೆ ಏನು ಬೇಕು?
   ಧ್ಯಾನವೆಂಬ ಕಿವಿಗಳಿರಬೇಕು.
6. ಲೋಕದ ಬಂಡಿಯ ನಡೆಸುವವ ಯಾರೆಂದು ಕವಿ ಹೇಳುತ್ತಾರೆ?
   ಲೋಕದ ಬಂಡಿಯ ನಡೆಸುವವನು ಪರಮ ಶ್ರೀಗುರು.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ವಚನಕಾರರ ಪ್ರಕಾರ ದನದ ಸ್ವರೂಪ ಹೇಗಿತ್ತು? ತಿಳಿಸಿರಿ.

   ವಚನಕಾರರ ಪ್ರಕಾರ ಘನವಾದ ಕೋಡು, ಘನವಾದ ಆಕಾರ, ಘನವಾದ ಶಕ್ತಿಯನ್ನು ದನವು ಹೊಂದಿದೆ.
2. ಧ್ಯಾನವೆಂಬ ಅಗ್ನಿಯು ಏನನ್ನು ದಹಿಸಿ ನಿವಾರಿಸುವುದು?

   ಧ್ಯಾನವೆಂಬ ಅಗ್ನಿಯು ದುರ್ಗುಣ, ದೋಷಗಳನ್ನು ದಹಿಸಿ ನಿವಾರಿಸುವುದು. ಎಂದು ವಚನಕಾರರು ಹೇಳುತ್ತಾರೆ.
3. ಚೇಳಿನ ಆಕಾರಕ್ಕಂಜುವರು – ಈ ಮಾತಿನ ಹಿನ್ನೆಲೆಯನ್ನು ತಿಳಿಸಿ.

   ದನವು ಘನವಾದ ಕೋಡು, ಘನವಾದ ಆಕಾರ, ಘನವಾದ ಶಕ್ತಿಯನ್ನು ಹೊಂದಿದರು ಕೂಡ ಅದರದ್ದು ಸಾಧು ಸ್ವಭಾವವಾದ್ದರಿಂದ ಅದಕ್ಕೆ ಜನ ಅಂಜುವುದಿಲ್ಲ. ಆದರೆ ಚೇಳು ಚಿಕ್ಕ ಗಾತ್ರದಾಗಿದ್ದರು ಅದರ ಬಳಿ ಇರುವ ಸ್ವಲ್ಪ ವಿಷಕ್ಕೆ ಜನ ಅಂಜುತ್ತಾರೆ. ಅಂದರೆ ಅಧಿಕಾರಕ್ಕೆ / ಸಾಮರ್ಥ್ಯಕ್ಕೆ ಹೆದರುತ್ತಾರೆಯೇ ವಿನಃ ಆಕಾರಕ್ಕಲ್ಲ ಎಂಬುದು ಇದರ ತಾತ್ಪರ್ಯವಾಗಿದೆ.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಧ್ಯಾನದ ಮಹತ್ವವನ್ನು ವಚನಕಾರರು ಹೇಗೆ ನಿರೂಪಿಸಿದ್ದಾರೆ?

   ಅಧ್ಯಾತ್ಮ ಪಥದಲ್ಲಿ ನಡೆಯಲು ಧ್ಯಾನವೆಂಬ ಊರುಗೋಲು ಬೇಕು, ಧ್ಯಾನವು ಸತ್ ಚಿಂತನೆಗಳನ್ನು ಭದ್ರಗೊಳಿಸುವುದು. ಅಂತರವಾಣಿಯನ್ನು ಆಲಿಸಲು ಧ್ಯಾನವೆಂಬ ಕಿವಿಗಳು ಬೇಕು. ಅಲ್ಲದೆ ಧ್ಯಾನವೆಂಬ

ಅಗ್ನಿಯು ದುರ್ಗುಣ, ದೋಷಗಳನ್ನು ದಹಿಸಿ ನಿವಾರಿಸುತ್ತದೆ ಎಂದು ಹೇಳುವ ಮೂಲಕ ಧಾನ್ಯದ ಮಹತ್ವವನ್ನು ವಚನಕಾರರು ನಿರೂಪಿಸಿದ್ದಾರೆ.

2. ದೇಹವನ್ನು 'ಅಚ್ಚು ಮುರಿದ ಹಾಳು ಬಂಡಿ' ಎಂದು ಕರೆಯಲು ಕಾರಣವೇನು?

   ಈ ದೇಹವೆಂಬ ಬಂಡಿಗೆ ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಇವುಗಳು ನಾನು ಪ್ರಮುಖ ನೀನು ಪ್ರಮುಖ ಎಂದು ಅಂದು ಕೊಳ್ಳುತ್ತಿವೆ. ನಿಜವಾಗಿಯು ಈ ದೇಹವೆಂಬ ಬಂಡಿಯ ಒಡೆಯ ಪರಮ ಶ್ರೀಗುರು ನೀನಾಗಿರುವುದರಿಂದ ಈ ಪಂಚೇಂದ್ರಿಯಗಳ ಇಚ್ಛೆಯನ್ನು ಅರಿತು ಸರಿಯಾಗಿ ನಡೆಸಬೇಕು. ಇಲ್ಲದಿದ್ದರೆ ಈ ದೇಹವು ಅಚ್ಚು ಮುರಿದ ಹಾಳು ಬಂಡಿಯಾಗುತ್ತದೆ ಎಂದಿದ್ದಾರೆ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಮಾರುದ್ದ ನುಡಿವುದ ಕಂಡು ನಾ ಬೆರಗಾದೆನಯ್ಯ.

   ಈ ಪಸ್ತುತ ವಾಕ್ಯವನ್ನು 'ಈರಣ್ಣ ಇಟಗಿ' ಅವರ 'ಆಧುನಿಕ ವಚನದಿಂದ' ಆಯ್ಕೆಮಾಡಿಕೊಳ್ಳಲಾಗಿದೆ. ಈ ಮಾತನ್ನು ವಚನಕಾರರು ಹೇಳುತ್ತಾರೆ.

   ಸೂರ್ಯನಿಂದ ಸಿಡಿದ ಭೂಮಿ ಸೂರ್ಯನನ್ನು ಸುತ್ತುತ್ತದೆ. ಭೂಮಿಯಿಂದ ಸಿಡಿದ ಚಂದ್ರ ಭೂಮಿಯ ಸುತ್ತ ಸುತ್ತುತ್ತದೆ. ಆದರೆ ದೈವವೇ; ನಿನ್ನಿಂದ ಸಿಡಿದ ನಿನ್ನೀ ಅಂಶಗಳು ನಿನ್ನ ಸುತ್ತಲು ತಿರುಗದೆ, ತಮ್ಮ ಸುತ್ತಲೂ ತಿರುಗದೆ, ನಿನ್ನನು ತಿಳಿಯದೆ, ತಮ್ಮನೂ ತಿಳಿಯದೆ ಊರುರು ತಿರುಗುತ್ತಾ ಮಾರುದ್ದ ನುಡಿಯುತ್ತಿದ್ದಾರೆ ಇದನ್ನು ಕಂಡು ನಾ ಬೆರಗಾದೆ ಎಂದು ಹೇಳುತ್ತಾರೆ.

2. ಸಾಮರ್ಥ್ಯಕ್ಕಂಜುವರು ಆಕಾರಕ್ಕಂಜುವರೆ

   ಈ ಪಸ್ತುತ ವಾಕ್ಯವನ್ನು 'ಈರಣ್ಣ ಇಟಗಿ' ಅವರ 'ಆಧುನಿಕ ವಚನದಿಂದ' ಆಯ್ಕೆಮಾಡಿಕೊಳ್ಳಲಾಗಿದೆ. ಈ ಮಾತನ್ನು ವಚನಕಾರರು ಹೇಳುತ್ತಾರೆ.

   ದನವು ಘನವಾದ ಕೋಡು, ಘನವಾದ ಆಕಾರ, ಘನವಾದ ಶಕ್ತಿಯನ್ನು ಹೊಂದಿದರು ಕೂಡ ಅದರದ್ದು ಸಾಧು ಸ್ವಭಾವವಾದ್ದರಿಂದ ಅದಕ್ಕೆ ಜನ ಅಂಜುವುದಿಲ್ಲ. ಆದರೆ ಚೇಳು ಚಿಕ್ಕ ಗಾತ್ರದಾಗಿದ್ದರು ಅದರ ಬಳಿ ಇರುವ ಸ್ವಲ್ಪ ವಿಷಕ್ಕೆ ಜನ ಅಂಜುತ್ತಾರೆ. ಅಂದರೆ ಅಧಿಕಾರಕ್ಕೆ, ಸಾಮರ್ಥ್ಯಕ್ಕೆ ಹೆದರುತ್ತಾರೆಯೇ ವಿನಃ ಆಕಾರಕ್ಕಲ್ಲ ಎಂದು ಹೇಳುತ್ತಾರೆ.

3. ನಾ ಮೇಲು – ನೀ ಮೇಲು ಅನ್ನುವರಯ್ಯ?

   ಈ ಪಸ್ತುತ ವಾಕ್ಯವನ್ನು 'ಶಾಂತದೇವಿ ಕೆ. ಸಾಬಾದಿ' ಅವರ 'ಆಧುನಿಕ ವಚನದಿಂದ' ಆಯ್ಕೆಮಾಡಿಕೊಳ್ಳಲಾಗಿದೆ. ಈ ಮಾತನ್ನು ವಚನಕಾರರು ಹೇಳುತ್ತಾರೆ.

   ಲೋಕದ ಬಂಡಿಯನ್ನು ನಡೆಸುವವನು ನೀನೊಬ್ಬನೆ ಅಯ್ಯ, ಈ ದೇಹವೆಂಬ ಬಂಡಿಗೆ ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಇದ್ದು ಇವುಗಳು ನಾನು ಪ್ರಮುಖ ನೀನು ಪ್ರಮುಖ ಎಂದು ಅಂದು ಕೊಳ್ಳುತ್ತಿವೆ. ಎಂದು ಹೇಳುವಾಗ ಈ ಮಾತು ಬಳಕೆಯಾಗಿದೆ.

ಖಾಲಿ ಬಿಟ್ಟ ಸಾಲುಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.

1. ಅಧ್ಯಾತ್ಮ ಪಥದಲಿ ಮುಂದೆ ಹೆಜ್ಜೆಯನಿಡಲು
   ಧ್ಯಾನವೆಂಬ ಊರುಗೋಲು ಬೇಕಯ್ಯ
2. ಲೋಕದ ಬಂಡಿಯ ನಡೆಸುವವ ನೀನೊಬ್ಬನೇ ಅಯ್ಯ

ಈ ದೇಹವೆಂಬ ಬಂಡಿಗೆ ಐವರು

## ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

| | | | | |
|---|---|---|---|---|
| ಕಿವಿಗಳಿರಬೇಕು | = | ಕಿವಿಗಳು | + | ಇರಬೇಕು |
| ನೀನೊಬ್ಬನೇ | = | ನೀನು | + | ಒಬ್ಬನೇ |
| ನಿನ್ನಿಂದ | = | ನಿನ್ನ | + | ಇಂದ |
| ಊರೂರು | = | ಊರು | + | ಊರು |
| ಅಧಿಕಾರಕ್ಕಂಜು | = | ಅಧಿಕಾರಕ್ಕೆ | + | ಅಂಜು |

ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.

1. ಪಥ : ಮತಗಳೆಲ್ಲವು ಪಥಗಳು ಎಂದು ಬದುಕಬೇಕು
2. ಧ್ಯಾನ : ಧ್ಯಾನ ಮಾಡುವುದರಿಂದ ಏಕಾಗ್ರತೆ ಸಾಧ್ಯವಾಗುತ್ತದೆ.
3. ದೋಷ : ನಾವು ಮಾಡುವ ಕೆಲಸದಲ್ಲಿ ದೋಷಗಳಿರಬಾರದು.
4. ಘನ : ರಾಜು ಘನಕಾರ್ಯ ಮಾಡಿದನೆಂದು ಎಲ್ಲರೂ ಹೇಳುತ್ತಿದ್ದಾರೆ.

ಇ) ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

| | | | | | |
|---|---|---|---|---|---|
| ಅಂತರವಾಣಿ | x | ಬಹಿರ್ವಾಣಿ | ದುರ್ಗುಣ | x | ಸದ್ಗುಣ |
| ದೋಷ | x | ನಿರ್ದೋಷ | ಆಕಾರ | x | ನಿರಾಕಾರ |

ಈ) ವರ್ತಮಾನ, ಭೂತ, ಭವಿಷ್ಯತ್ ಕಾಲಗಳಲ್ಲಿ ಈ ಕೆಳಗಿನ ಪದಗಳನ್ನು ಬರೆಯಿರಿ.

| ಮಾದರಿ | ಭೂತಕಾಲ | ವರ್ತಮಾನ ಕಾಲ | ಭವಿಷ್ಯತ್ ಕಾಲ |
|---|---|---|---|
| ಓದು | ಓದಿದನು | ಓದುತ್ತಾನೆ | ಓದುವನು |
| ಆಡು | ಆಡಿದನು | ಆಡುತ್ತಾನೆ | ಆಡುವನು |
| ಕುಣಿ | ಕುಣಿದನು | ಕುಣಿಯುತ್ತಾನೆ | ಕುಣಿಯುವನು |
| ತಿನ್ನು | ತಿಂದನು | ತಿನ್ನುತ್ತಾನೆ | ತಿನ್ನುವನು |

# 15. ಹಡಗದ ಚಂದ

- ವಿ.ಕೃ. ಗೋಕಾಕ

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ಹಡಗವು ಎಷ್ಟು ಭಾಷೆಗಳ ನವಖಂಡ?
   ನೂರು ಭಾಷೆಗಳ ನವಖಂಡ
2. ಈ ಹಡಗವನ್ನು ಯಾವುದರ ಮೇಲೆ ತೇಲಿಬಿಟ್ಟರು?
   ಸಪ್ತ ಸಾಗರದ ಮೇಲೆ ತೇಲಿಬಿಟ್ಟರು
3. ಹಡಗು ಹೇಗೆ ತಿರುಗುತ್ತಿದೆ?
   ತಿಮಿಂಗಿಲದಂತೆ ತಿರುಗುತ್ತಿದೆ.
4. ಹಡಗದ ಗತಿ ಯಾವುದು?
   ಹಡಗದ ಗತಿ ಕಾಲಗತಿ.
5. ಹಡಗವು ಯಾವ ವೇಗದಲ್ಲಿ ಚಲಿಸುತ್ತದೆ?
   ಹಡಗದ ವೇಗ ವಾಯುವೇಗ.
6. ಹಡಗು ಯಾರ ಕೌಶಲ್ಯಕ್ಕೆ ಕಳಸವಿಟ್ಟಿದೆ?
   ಮಾನವನ ಕೌಶಲ್ಯಕ್ಕೆ ಕಳಸವಿಟ್ಟಿದೆ.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಕವಿ ಹಡಗನ್ನು ನವಖಂಡ ಎಂದು ಕರೆಯಲು ಕಾರಣವೇನು?
   ಹಡಗು ನೂರು ಭಾಷೆಗಳನ್ನು ಮಾತನಾಡುವ ಜನರನ್ನು ಒಳಗೊಂಡಿದೆ. ಆದ್ದರಿಂದ ಕವಿ ಹಡಗನ್ನು ನವಖಂಡ ಎಂದು ಕರೆದಿದ್ದಾರೆ.
2. ಹಡಗು ಯಾವ ಯಾವ ದೇಶಗಳಲ್ಲಿ ಸಂಚರಿಸುತ್ತದೆ?
   ಹಡಗು ಭಾರತ, ಅರಬ್ಬ್, ಈಜಿಪ್ಟ್ ಮತ್ತು ಯುರೋಪ್ ದೇಶಗಳಲ್ಲಿ ಸಂಚರಿಸುತ್ತದೆ. ಎಂದು ಕವಿ ಹೇಳುತ್ತಾರೆ.
3. ಹಡಗನ್ನು ಸಂಕ್ಷಿಪ್ತ ಬ್ರಹ್ಮಾಂಡವೆಂದು ಏಕೆ ಕರೆಯಲಾಗಿದೆ?
   ಹಡಗಿನಲ್ಲಿ ಊಟ ಉಪಚಾರ, ಆಟ-ನೋಟ ಎಲ್ಲವೂ ಇದ್ದು ಮನದ ಮಹಲನು ಕಟ್ಟಲು; ಮನಬಂದಂತೆ ಕುಣಿಯಲು ಅವಕಾಶವಿದೆ. ಆದ್ದರಿಂದ ಇದು ಕೇವಲ ಹಡಗಲ್ಲ ಸಂಕ್ಷೀಪ್ತ ಬ್ರಹ್ಮಾಂಡ ಎಂದಿದ್ದಾರೆ.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಹಡಗಿನಅಂದ ಚಂದದ ಬಗೆಗೆ ಕವಿ ನೀಡಿದ ವಿವರಣೆಯನ್ನು ಸಂಗ್ರಹಿಸಿರಿ.
   ಯಂತ್ರಯುಗದ ಭ್ರಮಯೆಲ್ಲಿರುವ ನಮಗೆ ಈ ಹಡಗು ಆಸಕ್ತಿ ಸೆಳೆಯುವಂತಹದ್ದಾಗಿದೆ. ಒಂದು ಮೋಟು ಮರದಂತೆ ಕಾಣುವ ಈ ಹಡಗಿನಲ್ಲಿ ಒಂದು ಮಾಟವಿದೆ. ಒಂದು ಕ್ರಮವಿದೆ, ಅಂದ ಚಂದವಿದೆ. ಅದನ್ನು ಗಮನಿಸುವುದಾದರೆ; ಇದು ಕೇವಲ ದೋಣಿಯಲ್ಲ, ತೇಲುತ್ತಿರುವ ದೊಡ್ಡ ದೋಣಿಯಾಗಿದೆ. ಇದು ಕೇವಲ ಕಬ್ಬಿಣದ ಕಟ್ಟಡವಲ್ಲ; ಗುರಿ ತಲುಪಿಸುವ ಪಟ್ಟಣವಾಗಿದ್ದು ನೂರಾರು ಭಾಷೆಯನ್ನಾಡುವ ಜನರನ್ನು ಒಳಗೊಂಡಿರುವುದರಿಂದ ಇದೊಂದು ಬ್ರಹ್ಮಾಂಡ ನವಖಂಡ ಎಂದು ಹೇಳುತ್ತಾ ಕವಿ ಹಡಗಿನ ಚಂದವನ್ನು ವಿವರಿಸಿದ್ದಾರೆ.

2. ಕವಿಗೆ ಹಡಗಿನ ಪ್ರಯಾಣ ನೀಡಿದ ಅನುಭವವೇನು? ವಿವರಿಸಿರಿ.

ಹಡಗು ಸಪ್ತಸಾಗರ ಮೇಲೆ ವಿಶ್ವಕರ್ಮನು ರಚಿಸಿದ ಸೃಷ್ಟಿಯನ್ನು ತೇಲಿಬಿಟ್ಟಂತೆ ಇದೆ. ಇದು ತಿಮ್ಮಿಂಗಿಲದಂತೆ ತಿರುಗುತ್ತದೆ ಎಂದನಿಸಿದೆ. ಅಲ್ಲದೆ ಭಾರತ, ಅರಬ್ಬ್, ಈಜಿಪ್ಟ್ ಮತ್ತು ಯುರೋಪ್ ದೇಶಗಳಲ್ಲಿ ಸಂಚರಿಸುವ ಇದರ ಗತಿ ಕಾಲಗತಿ ಮತ್ತು ವೇಗ ವಾಯುವೇಗವಾಗಿ ಕವಿಗೆ ಗೋಚರಿಸಿದೆ. ಹಡಗಿನಲ್ಲಿ ಊಟ ಉಪಚಾರ, ಆಟ-ನೋಟ ಎಲ್ಲವೂ ಇದ್ದು ಮನದ ಮಹಲನು ಕಟ್ಟಲು; ಮನಬಂದಂತೆ ಕುಣಿಯಲು ಅವಕಾಶವಿದೆ. ಆದ್ದರಿಂದ ಇದು ಕೇವಲ ಹಡಗಲ್ಲ ಸಂಕ್ಷಿಪ್ತ ಬ್ರಹ್ಮಾಂಡ ಎಂಬಂತೆ ಕವಿ ಗ್ರಹಿಸಿದ್ದಾರೆ. ಹಡಗಿನ ಪ್ರಯಾಣ ಸಂತೋಷದಾಯಕವಾಗಿರುವುದು ಕವಿಯ ಕವಿತೆಯಲ್ಲಿ ಹೀಗೆ ಮೂಡಿಬಂದಿದೆ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಯಂತ್ರಯುಗದ ಈ ಭ್ರಮೆಯಲ್ಲಿ! ಅಂದವಿದೆ,- ಚಂದವಿದೆ ಸಹ!

ಈ ಪಸ್ತುತ ವಾಕ್ಯವನ್ನು 'ವಿ.ಕೃ.ಗೋಕಾಕ್'ಅವರ 'ಹಡಗದ ಚಂದ' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕವಿಯು ಓದುಗರಿಗೆ ಹೇಳುತ್ತಾರೆ. ಯಂತ್ರಯುಗದ ಭ್ರಮಯೆಲ್ಲಿರುವ ನಮಗೆ ಈ ಹಡಗು ಆಸಕ್ತಿ ಸೆಳೆಯುವಂತಹದ್ದಾಗಿದೆ. ಒಂದು ಮೋಟು ಮರದಂತೆ ಕಾಣುವ ಈ ಹಡಗಿನಲ್ಲಿ ಒಂದು ಮಾಟವಿದೆ. ಒಂದು ಕ್ರಮವಿದೆ, ಅಂದ ಚಂದವಿದೆ ಎಂದು ಹೇಳುವಾಗ 'ಯಂತ್ರಯುಗದ ಈ ಭ್ರಮೆಯಲ್ಲಿ! ಅಂದವಿದೆ,- ಚಂದವಿದೆ ಸಹ!' ಎಂಬ ಮಾತು ಬಳಕೆಯಾಗಿದೆ.

2. ಇದು ಬ್ರಹ್ಮಾಂಡ ನೂರು ಭಾಷೆಗಳ ನವಖಂಡ

ಈ ಪಸ್ತುತ ವಾಕ್ಯವನ್ನು 'ವಿ.ಕೃ.ಗೋಕಾಕ್' ಅವರ 'ಹಡಗದ ಚಂದ' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕವಿಯು ಓದುಗರಿಗೆ ಹೇಳುತ್ತಾರೆ. ಇದು ಕೇವಲ ದೋಣಿಯಲ್ಲ, ತೇಲುತ್ತಿರುವ ದೊಡ್ಡ ದೋಣಿಯಾಗಿದೆ. ಇದು ಕೇವಲ ಕಬ್ಬಿಣದ ಕಟ್ಟಡವಲ್ಲ; ಗುರಿ ತಲುಪಿಸುವ ಪಟ್ಟಣವಾಗಿದ್ದು ನೂರಾರು ಭಾಷೆಯನ್ನಾಡುವ ಜನರನ್ನು ಒಳಗೊಂಡಿರುವುದರಿಂದ ಇದೊಂದು ಬ್ರಹ್ಮಾಂಡ ನವಖಂಡ ಎಂದು ಹೇಳುವಾಗ 'ಇದು ಬ್ರಹ್ಮಾಂಡ ನೂರು ಭಾಷೆಗಳ ನವಖಂಡ' ಎಂಬ ಮಾತು ಬಳಕೆಯಾಗಿದೆ.

3. ನೆರವೇ ಗೆಲುವು, ಔಚಿತ್ಯವೇ ಚೆಲುವು

ಈ ಪಸ್ತುತ ವಾಕ್ಯವನ್ನು 'ವಿ.ಕೃ.ಗೋಕಾಕ್' ಅವರ 'ಹಡಗದ ಚಂದ' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕವಿಯು ಓದುಗರಿಗೆ ಹೇಳುತ್ತಾರೆ. ಹಡಗಿನ ಪ್ರಯಾಣದಿಂದ ಸಂತೋಷಪಟ್ಟ ಕವಿಯು ಈ ಹಡಗು ಮಾನವನ ಕೌಶಲ್ಯಕ್ಕೆ ಕಳಸವಿಟ್ಟಿದೆ. 'ಇಲ್ಲಿ ನೆರವೇ ಗೆಲುವು, ಔಚಿತ್ಯವೇ ಚೆಲುವು' ಎಂಬುದನ್ನು ಬರೆದು ಕೊರೆದು ಸಾರಿದೆ ಎಂದು ಹೇಳುತ್ತಾರೆ.

## ಭಾಷಾಭ್ಯಾಸ

ಅ) ಕೆಳಗಿನ ಪದಗಳ ತದ್ಭವಗಳನ್ನು ಬರೆಯಿರಿ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|

| | | | |
|---|---|---|---|
| ಬ್ರಹ್ಮ | ಬೊಮ್ಮ | ಭ್ರಮೆ | ಬೆಮೆ |
| ಕಲಶ | ಕಲಸ | ಯಂತ್ರ | ಜಂತ್ರ |
| ಪಟ್ಟಣ | ಪತ್ತನ | | |

ಆ) ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಕ್ರಮ x ಅಕ್ರಮ

ಖಂಡ x ಅಖಂಡ

ಗತಿ x ನಿರ್ಗತಿ

ತೃಪ್ತಿ x ಅತೃಪ್ತಿ

ಔಚಿತ್ಯ x ಅನೌಚಿತ್ಯ

ಇ) ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

1. ಹಡಗು : ನಾವೆ, ನೌಕೆ
2. ಮಹಲು : ಮನೆ, ಸೌಧ
3. ಕಾಲ : ಸಮಯ, ಅವಧಿ
4. ಅಂದ : ಸೊಗಸು, ಚೆಲುವು, ಸೌಂದರ್ಯ

ಈ) ಕೆಳಗಿನ ನುಡಿಗಟ್ಟನ್ನು ಗಮನಿಸಿರಿ. ಈ ಕವನದಲ್ಲಿರುವ ಇತರ ನುಡಿಗಟ್ಟುಗಳನ್ನು ಸಂಗ್ರಹಿಸಿರಿ.

ತೇಲಿಬಿಡು,

ಇಟ್ಟಣಿಸು, ಕಾಲಗತಿ, ವಾಯುವೇಗ, ಮನದ ಮಹಲು, ಕಳಸವಿಡು

# 16. ದರ್ಶನ

- ನಾ. ಮೊಗಸಾಲೆ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ಗಂಡ ಹೆಂಡತಿ ಮಕ್ಕಳು ಹೋದುದೆಲ್ಲಿಗೆ?
   ತಿರುಪತಿಗೆ ಹೋದರು
2. ಸರತಿಯಲ್ಲಿ ನಿಂತಿದ್ದಾಗ ಕವಿಗಳನ್ನೇ ನೋಡುತ್ತಿದ್ದವರು ಯಾರು?
   ಹಿರಿಯರೊಬ್ಬರು ಸರತಿಯ ಸಾಲಿನಲ್ಲಿ ನಿಂತಿದ್ದಾಗ ಕವಿಗಳನ್ನೇ ನೋಡುತ್ತಿದ್ದರು.
3. ಆ ಹಿರಿಯರು ಕವಿಗಳನ್ನು ಎಲ್ಲಿಗೆ ಆಹ್ವಾನಿಸಿದರು?
   ಹಿರಿಯರು ಉಳಿದ ಬಾಡಿಗೆ ಕೋಣೆಗೆ ಆಹ್ವಾನಿಸಿದರು.
4. ಆ ಹಿರಿಯರು ಯಾವುದಕ್ಕೆ ಕವಿಗಳ ಒಪ್ಪಿಗೆ ಕೇಳಿದರು?
   ಕವಿಗಳನ್ನು ಅಪ್ಪಿಕೊಳ್ಳಲು ಒಪ್ಪಿಗೆ ನೀಡಿ ಎಂದು ಕೇಳಿದರು.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಕವಿಯನ್ನು ನೋಡಿದ ಹಿರಿಯರಲ್ಲಾದ ಬದಲಾವಣೆ ಏನು?
   ಕವಿಯನ್ನು ನೋಡಿದ ಹಿರಿಯರು ಮತ್ತೆ ಮತ್ತೆ ಅವರನ್ನು ನೋಡತೊಡಗಿದರು. ಅವರ ತುಟಿಗಳ ಮೋಡ ಕರಗಿ ತುಡಿಯುತ್ತಿತ್ತು ಕವಿಯೊಂದಿಗೆ ಮಾತನಾಡಬೇಕು ಎಂಬಂತೆ. ಇವು ಕವಿಯನ್ನು ನೋಡಿ ಹಿರಿಯರಲ್ಲಾದ ಬದಲಾವಣೆಗಳು.
2. ಆ ಹಿರಯರು 'ಅನಬೇಡಿ ಇಲ್ಲ!' ಅನ್ನಲು ಕಾರಣವೇನು?
   ನಿಮ್ಮನ್ನು ನೋಡಿ ತೀರಿ ಹೋದ ನನ್ನ ಮಗನನ್ನೇ ಕಂಡಂತೆ ಆಗುತ್ತಿದೆ. ನಿಮಗೂ ಅವನಿಗೂ ರವೆಯಷ್ಟು ವ್ಯತ್ಯಾಸವಿಲ್ಲ, ನೀವು ಯಾರೇ ಆಗಿರಿ ಅಪ್ಪಿಕೊಳ್ಳಬೇಕು ಎನಿಸುತಿದೆ. ಈ ಕ್ಷಣ ಒಪ್ಪಿಗೆಯ ಕೊಡಿ ಎಂದು ಹೇಳುವ ಸಂದರ್ಭದಲ್ಲಿ 'ಅನಬೇಡಿ ಇಲ್ಲ!' ಎಂದರು.
3. ಕವಿ ಪುತ್ರನು ಭಾರತಕ್ಕೆ ಹಿಂದಿರುಗಲು ತೀರ್ಮಾನಿಸಿದ್ದು ಏಕೆ?
   ವಿದೇಶಕ್ಕೆ ಹಿಂದಿರುಗಿದ ಮಗನೊಂದಿಗೆ ಅಪ್ಪನ ಪತ್ರ ವ್ಯವಹಾರ ನಡೆದು ತಿರುಪತಿಯಲ್ಲಿ ನಡೆದ ಹಿರಿಯರ ಭೇಟಿಯ ಸಂದರ್ಭವನ್ನು ಅಪ್ಪನು ಮಗನಿಗೆ ತಿಳಿಸಿದನು. ಇದರಿಂದ ಅಪ್ಪನ ಆಸೆಯನ್ನು ಅರಿತ ಮಗ ನಾನು ಭಾರತಕ್ಕೆ ಬರುವುದರಿಂದ ನಿಮಗೆ ನಿಮ್ಮ ಮಗ, ನನಗೆ ನನ್ನ ಮಗ ಸಿಗುತ್ತಾನೆ ಎಂದು ಹಿಂದಿರುಗಲು ತೀರ್ಮಾನಿಸುತ್ತಾನೆ.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಹಿರಿಯರು ಕವಿಯನ್ನು ಸಂಭ್ರಮದಿಂದ ಸ್ವಾಗತಿಸಿದ್ದು ಹೇಗೆ?
   ಕವಿಗಳನ್ನು ಕಂಡ ಹಿರಿಯರು ತಮ್ಮ ಬಾಡಿಗೆ ಕೋಣೆಗೆ ಆಹ್ವಾನಿಸಿದರು. ಅವರ ಬಾಡಿಗೆ ಕೋಣೆಗೆ ಹೋದ ಕವಿಗಳಿಗೆ ಹಿರಿಯರು ಹಣ್ಣು ಹಂಪಲುಗಳನ್ನು ನೀಡಿದರು. ಕವಿಗಳ ಬಳಿಸಾರಿ ಕುಳಿತುಕೊಂಡರು. ಮತ್ತು ಕೈಮುಗಿದು ಅವರ ಬಳಿ ಮಾತನಾಡಲು ಮುಂದಾದರು. ಈ ರೀತಿಯಾಗಿ ಹಿರಿಯರು ಕವಿಗಳನ್ನ ಸಂಭ್ರಮದಿಂದ ಸ್ವಾಗತಿಸಿದರು.
2. ಇಬ್ಬರೂ ಬೀಳ್ಕೊಡುವಾಗ ಆದ ಅನುಭವವನ್ನು ಕವಿ ಹೇಗೆ ವ್ಯಕ್ತಪಡಿಸಿದ್ದಾರೆ?

ಕವಿಗಳನ್ನು ಕಂಡ ಹಿರಿಯರು ತಮ್ಮ ಬಾಡಿಗೆ ಕೋಣೆಗೆ ಆಹ್ವಾನಿಸಿದರು. ಅವರ ಬಾಡಿಗೆ ಕೋಣೆಗೆ ಹೋದ ಕವಿಗಳು ಹಿರಿಯರೊಂದಿಗೆ ಮಾತನಾಡಿ ಬೀಳ್ಕೊಡುವಾಗ, ಮಾತುಕತೆಯಲ್ಲಿ ಬೆಳೆದ ಬಾಂಧವ್ಯದಿಂದಾಗಿ ಇಬ್ಬರೂ ಬೆಟ್ಟದಂತೆ ನಿಶ್ಚಲವಾದರು, ಅವರಿಬ್ಬರ ನಡುವೆ ಮಗನೆ ಗಾಳಿಯಾದನು ಎಂದು ಕವಿ ಹೇಳುತ್ತಾರೆ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ಕೋಣೆಯನು ಮನೆಯೆಂದು ತಿಳಿದು ಬನ್ನಿ

ಈ ಪಸ್ತುತ ವಾಕ್ಯವನ್ನು 'ನಾ.ಮೊಗಸಾಲೆ' ಅವರ 'ದರ್ಶನ' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಹಿರಿಯರು ಕವಿಗೆ ಹೇಳುತ್ತಾರೆ. ತಿರುಪತಿಯಲ್ಲಿ ದರ್ಶನಕ್ಕೆಂದು ಸರತಿಯ ಸಾಲಿನಲ್ಲಿ ನಿಂತಿದ್ದಾಗ ಹಿರಿಯರೊಬ್ಬರು ಇವರನ್ನೆ ನೋಡುತ್ತಿದ್ದರು. ದರ್ಶನವಾದ ಮೇಲೆ ಹಿರಿಯರು ತಾವು ಉಳಿದುಕೊಂಡಿದ್ದ ಬಾಡಿಗೆ ಕೋಣೆ ಕವಿಗಳನ್ನ ಆಹ್ವಾನಿಸಿದರು. ಆಗ ಬಾಡಿಗೆ 'ಕೋಣೆಯನು ಮನೆಯೆಂದು ತಿಳಿದು ಬನ್ನಿ' ಎಂದು ಹೇಳಿದರು.

2. ನಿಮ್ಮಂತಹ ಮಗನಿದ್ದ ಅವನೂ ಕವಿ

ಈ ಪಸ್ತುತ ವಾಕ್ಯವನ್ನು 'ನಾ.ಮೊಗಸಾಲೆ' ಅವರ 'ದರ್ಶನ' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಹಿರಿಯರು ಕವಿಗೆ ಹೇಳುತ್ತಾರೆ. ಹಿರಿಯರ ಆಹ್ವಾನಕ್ಕೆ ಮನ್ನಣೆಕೊಟ್ಟು ಕವಿಗಳು ಹಿರಿಯರ ಕೋಣೆಗೆ ಹೋಗಿ ಮಾತನಾಡುವಾಗ ಕವಿಗಳನ್ನು ನೋಡಿ ಹಿರಿಯರು 'ನಿಮ್ಮಂತಹ ಮಗನಿದ್ದ ಅವನೂ ಕವಿ' ಎಂಬ ಮೇಲಿನ ಮಾತನ್ನು ಹೇಳುತ್ತಾರೆ.

3. ನಿನ್ನೆ ನನಗಿಲ್ಲಿ ಹಸಿರು ಕಾರ್ಡು ಸಿಕ್ಕಿದೆ.

ಈ ಪಸ್ತುತ ವಾಕ್ಯವನ್ನು 'ನಾ.ಮೊಗಸಾಲೆ' ಅವರ 'ದರ್ಶನ' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ಕವಿಯ ಮಗ ಪತ್ರದ ಮೂಲಕ ಕವಿಗೆ ತಿಳಿಸುತ್ತಾನೆ. ಹಿರಿಯರ ಭೇಟಿಯ ಸಂದರ್ಭವನ್ನು ಕವಿಯು ವಿದೇಶದಲ್ಲಿರುವ ಮಗನೊಂದಿಗೆ ಹಂಚಿಕೊಳ್ಳುತ್ತಾರೆ. ಇದರಿಂದ ತಂದೆಯ ಮೇಲೆ ಪ್ರೀತಿ ಮತ್ತು ಕಾಳಜಿ ಉಂಟಾಗಿ ಮಗನು ಭಾರತಕ್ಕೆ ಹಿಂದಿರುಗಲು ನಿರ್ಧರಿಸುತ್ತಾನೆ. ಆ ಸಂದರ್ಭದಲ್ಲಿ 'ನಿನ್ನೆ ನನಗಿಲ್ಲಿ ಹಸಿರು ಕಾರ್ಡು ಸಿಕ್ಕಿದೆ' ಆದರೂ ಈ ದೇಶವನ್ನು ಬಿಟ್ಟು ಭಾರತಕ್ಕೆ ಬರುತ್ತೇನೆ ಎಂದು ಹೇಳುತ್ತಾನೆ.

## ಭಾಷಾಭ್ಯಾಸ

ಅ) ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.

1. ಮೈಯೆಲ್ಲ ಕಣ್ಣಾಗಿ : ಸೈನಿಕರು ಮೈಯೆಲ್ಲ ಕಣ್ಣಾಗಿ ದೇಶದ ಗಡಿ ಕಾಯುತ್ತಾರೆ.

2. ಬೆಟ್ಟವಾಗು : ಬಹಳ ದಿನಗಳ ನಂತರ ಭೇಟಿಯಾದ ಸ್ನೇಹಿತರಿಬ್ಬರೂ ವಿದಾಯ ಹೇಳಲು ಮನಸ್ಸಿಲ್ಲದೆ ಬೆಟ್ಟವಾದರು.
3. ಇಹಪರವ ಮೀರಿ : ಸಾಧುವಾದವನು ಇಹಪರವ ಮೀರಿ ಬದುಕಬೇಕು

ಆ) ಕೆಳಗಿನ ಪದಗಳಿಗೆ ನಾನಾರ್ಥವನ್ನು ಬರೆಯಿರಿ.

1. ಕಾದು : ಬಿಸಿಯಾಗಿ, ನಿರೀಕ್ಷೆಯಲ್ಲಿರುವುದು
2. ಸರಿ : ದೂರಹೋಗುವುದು, ನಿಜ
3. ತೀರಿಹೋಗು : ಮುಗಿದು ಹೋಗು, ಮರಣಹೊಂದು
4. ಸಾರು : ಡಂಗುರ ಹೋಡೆ, ಊಟಕ್ಕೆ ಬಳಸುವ ಸಾಂಬಾರು

ಇ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಮಗನೊತ್ತಾಯ = ಮಗನ + ಒತ್ತಾಯ
ಮಾತಾಗಿ = ಮಾತು + ಆಗಿ
ನಾನವರ = ನಾನು + ಅವರ
ಮಗನಿದ್ದ = ಮಗನು + ಇದ್ದ
ಬರಬೇಕೆಂದಿರುವೆ = ಬರಬೇಕು + ಎಂದಿರುವೆ

ಈ) ಕೆಳಗಿನ ಪದಗಳನ್ನು ಸರಿಪಡಿಸಿ ಬರೆಯಿರಿ.

| ತಪ್ಪು ರೂಪ | ಸರಿ ರೂಪ | ತಪ್ಪು ರೂಪ | ಸರಿ ರೂಪ |
|---|---|---|---|
| ದರುಷನ | ದರ್ಶನ | ಅದಿನೈದು | ಹದಿನೈದು |
| ವ್ಯತಾಸ | ವ್ಯತ್ಯಾಸ | ಮೇಶ್ತ್ರು | ಮೇಷ್ತ್ರು |
| ವಿಧಾಯ | ವಿದಾಯ | ತಿರುಪಥಿ | ತಿರುಪತಿ |

ಉ) ಕೆಳಗಿನ ಕ್ರಿಯಾಪದಗಳ ನಿಷೇಧ ರೂಪ ಬರೆಯಿರಿ.

| ಮಾದರಿ: | ಹೋಗು | ಹೋಗನು |
|---|---|---|
| | ಕರೆ | ಕರೆಯನು |
| | ನೋಡು | ನೋಡನು |
| | ಕರಗು | ಕರಗದು |

ಊ) ಈ ಕೆಳಗಿನ ಸಾಮಾನ್ಯ ವಾಕ್ಯಗಳನ್ನು ಪ್ರಶ್ನಾರ್ಥಕ ವಾಕ್ಯಗಳನ್ನಾಗಿ ಬರೆಯಿರಿ.

| ಸಾಮಾನ್ಯ ವಾಕ್ಯ | ಪ್ರಶ್ನಾರ್ಥಕ ವಾಕ್ಯ |
|---|---|
| 1. ಹಿರಿಯರೊಬ್ಬರು ನನ್ನ ನೋಡುತ್ತಿದ್ದರು. | ಹಿರಿಯರೊಬ್ಬರು ನನ್ನನ್ನು ನೋಡುತ್ತಿದ್ದರೆ? |
| 2. ಇಬ್ಬರಿಗೂ ಮಾತಾಗಬೇಕೆಂಬ ತವಕ | ಇಬ್ಬರಿಗೂ ಮಾತಾಗಬೇಕೆಂಬ ತವಕವೆ? |

# 17. ಮಾನವ ಜನ್ಮ ದೊಡ್ಡದು

- ಪುರಂದರದಾಸರು.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ದಾಸರು ಯಾವ ಜನ್ಮ ದೊಡ್ಡದೆಂದು ಹೇಳಿದ್ದಾರೆ?
   ದಾಸರು ಮಾನವ ಜನ್ಮ ದೊಡ್ಡದೆಂದು ಹೇಳಿದ್ದಾರೆ.
2. ಹರಿಯ ನಾಮಾಮೃತ ಏಕೆ ಉಣ್ಣುವುದಿಲ್ಲ?
   ಹೆಣ್ಣು ಮಣ್ಣಿಗಾಗಿ ಆಸೆಪಟ್ಟು ಹರಿಯ ನಾಮಾಮೃತವನ್ನು ಉಣ್ಣುವುದಿಲ್ಲ.
3. ಹೆಣ್ಣು ಮಣ್ಣಿಗಾಗಿ ಜನರು ಏನನ್ನು ಬಿಡುತ್ತಾರೆ?
   ಹರಿಯ ನಾಮಾಮೃತವನ್ನು ಉಣ್ಣುವುದು ಬಿಟ್ಟು ಉಪವಾಸ ಇರತ್ತಾರೆ.
4. ಸತಿಸುತರು ಯಾಕೆ ನಮ್ಮನ್ನು ಕಾಯುವುದಿಲ್ಲ?
   ಯದುಪತಿನು ಮರೆತಿರುವುದರಿಂದ ಸತಿಸುತರು ಕಾಯುವುದಿಲ್ಲ.
5. ಏಕೋಭಾವದಿಂದ ಯಾರನ್ನು ಭಜಿಸಬೇಕು?
   ಶ್ರೀಪುರಂದರ ವಿಠಲರಾಯನನ್ನು ಭಜಿಸಬೇಕು.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ದಾಸರು ಮನುಷ್ಯರಿಗೆ ಏನೆಂದು ಎಚ್ಚರಿಕೆ ನೀಡುತ್ತಾರೆ?
   ಮಾನವ ಜನ್ಮ ದೊಡ್ಡದು. ಹೆಣ್ಣು ಹೊನ್ನು ಮಣ್ಣಿಗಾಗಿ ಆಸೆ ಪಟ್ಟು ಸಂಸಾರ ಬಂಧನದಲ್ಲಿ ಸಿಲುಕಿ ಅದನ್ನು ಹಾಳು ಮಾಡಿಕೊಳ್ಳಬೇಡಿರಿ ಹುಚ್ಚಪ್ಪಗಳಿರಾ ಎಂದು ಎಚ್ಚರಿಕೆ ನೀಡುತ್ತಾರೆ.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಮಾನವ ಜನ್ಮ ದೊಡ್ಡದು ಈ ಕೀರ್ತನೆಯ ಭಾವವನ್ನು ಸಂಗ್ರಹವಾಗಿ ಬರೆಯಿರಿ?
   ಮಾನವ ಜನ್ಮ ದೊಡ್ಡದು. ಅದನ್ನು ಹಾಳು ಮಾಡಿಕೊಳ್ಳಬೇಡಿರಿ ಹುಚ್ಚಪ್ಪಗಳಿರಾ. ಹೆಣ್ಣು ಹೊನ್ನು ಮಣ್ಣಿಗಾಗಿ ಆಸೆ ಪಟ್ಟು ಸಂಸಾರ ಬಂಧನದಲ್ಲಿ ಸಿಲುಕಿ ಹರಿಯ ನಾಮಾಮೃತದ ಸವಿಯನ್ನು ಸವಿಯದೆ ಉಪವಾಸ ಇರುವಿಲ್ಲ ಧೂರ್ತರೆ; ಸಾವು ನಿಮ್ಮ ಬಳಿ ಬಂದಾಗ ತಾಳು ಎಂದರೆ ಅದು ತಾಳವುದೆ ಸಾಧ್ಯವಿಲ್ಲ ಸಾವು ಸನಿಹ ಬರುವ ಮೊದಲು ಒಳ್ಳೆಯ ಕೆಲಸ ಮಾಡಿ ಧರ್ಮವನ್ನು ಗಳಿಸಿರಿ. ಈ ಸಂಸಾರದ ಜಂಜಾಟದಲ್ಲಿ ಸಿಲುಕಿ ಯದುಪತಿಯನ್ನು ಮರೆತಿದ್ದಿರಿ ಅವನಲ್ಲದೆ ನಿಮ್ಮನು ನಿಮ್ಮ ಸತಿಸುತರು ಕಾಪಾಡುತ್ತಾರೆ. ಇನ್ನಾದರೂ ಏಕ ಮನಸ್ಸಿನಿಂದ ಪುರಂದರ ವಿಠಲನನ್ನು ಭಕ್ತಿಯಿಂದ ಭಜಿಸಿ ಮುಕ್ತಿಯನ್ನು ಪಡೆಯಿರಿ.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ದಾಳಿ ಬಾರದ ಮುನ್ನ ಧರ್ಮಗಳಿಸಿರೊ.
   ಈ ಪಸ್ತುತ ವಾಕ್ಯವನ್ನು 'ಪುರಂದರದಾಸರ' 'ಮಾನವ ಜನ್ಮ ದೊಡ್ಡದು' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.
   ಈ ಮಾತನ್ನು ದಾಸರು ತಮ್ಮ ಕೀರ್ತನೆಯಲ್ಲಿ ಹೇಳಿದ್ದಾರೆ. ಮಾನವ ಜನ್ಮ ದೊಡ್ಡದು. ಅದನ್ನು ಹಾಳು ಮಾಡಿಕೊಳ್ಳಬೇಡಿರಿ ಹುಚ್ಚಪ್ಪಗಳಿರಾ. ಹೆಣ್ಣು ಹೊನ್ನು ಮಣ್ಣಿಗಾಗಿ ಆಸೆ ಪಟ್ಟು ಸಂಸಾರ ಬಂಧನದಲ್ಲಿ ಸಿಲುಕಿ ಹರಿಯ ನಾಮಾಮೃತದ ಸವಿಯನ್ನು ಸವಿಯದೆ ಉಪವಾಸ ಇರುವಿರಲ್ಲ ಧೂರ್ತರೆ; ಸಾವು ನಿಮ್ಮ ಬಳಿ ಬಂದಾಗ ತಾಳು ಎಂದರೆ ಅದು ತಾಳುವುದೆ; ಸಾಧ್ಯವಿಲ್ಲ ಸಾವು ಸನಿಹ ಬರುವ ಮೊದಲು ಒಳ್ಳೆಯ ಕೆಲಸ

ಮಾಡಿ ಧರ್ಮವನ್ನು ಗಳಿಸಿರಿ ಎಂದು ಹೇಳುವಾಗ 'ದಾಳಿ ಬಾರದ ಮುನ್ನ ಧರ್ಮಗಳಿಸಿರೊ' ಎಂಬ ಮಾತು ಬಳಕೆಯಾಗಿದೆ.

2. ಮಣ್ಣು ಮುಕ್ಕಿ ಮರುಳಾಗುವರೆ.

ಈ ಪಸ್ತುತ ವಾಕ್ಯವನ್ನು 'ಪುರಂದರದಾಸರ' 'ಮಾನವ ಜನ್ಮ ದೊಡ್ಡದು' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ದಾಸರು ತಮ್ಮ ಕೀರ್ತನೆಯಲ್ಲಿ ಹೇಳಿದ್ದಾರೆ. ಮಾನವ ಜನ್ಮ ದೊಡ್ಡದು. ಅದನ್ನು ಹಾಳು ಮಾಡಿಕೊಳ್ಳಬೇಡಿರಿ ಹುಚ್ಚಪ್ಪಗಳಿರಾ. ಕಣ್ಣು, ಕೈ, ಕಾಲು, ನಾಲಿಗೆಗಳಿದ್ದು ಅವುಗಳು ಬಯಸಿದಂತೆ ನೀವು ಒಳ್ಳೆಯತನವನ್ನು ಬಿಟ್ಟು ಆಸೆಯ ಹಿಂದೆ ಬಿದ್ದು ಮಣ್ಣು ಮುಕ್ಕುತ್ತಿದ್ದೀರಿ ಎಂದು ಹೇಳುವಾಗ 'ಮಣ್ಣು ಮುಕ್ಕಿ ಮರುಳಾಗುವರೆ' ಎಂಬ ಮಾತು ಬಳಕೆಯಾಗಿದೆ.

3. ಏನು ಕಾರಣ ಯದುಪತಿಯನು ಮರೆತಿರಿ.

ಈ ಪಸ್ತುತ ವಾಕ್ಯವನ್ನು 'ಪುರಂದರದಾಸರ' 'ಮಾನವ ಜನ್ಮ ದೊಡ್ಡದು' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ದಾಸರು ತಮ್ಮ ಕೀರ್ತನೆಯಲ್ಲಿ ಹೇಳಿದ್ದಾರೆ. ನಿಮಗೆ ಅನ್ನ ಆಹಾರವನ್ನು ಶ್ರೀಮಂತಿಕೆ ಧನಧಾನ್ಯಗಳನ್ನು ನೀಡುವವನು ಶ್ರೀಹರಿಯೇ ವಿನಃ ಸತಿ ಸುತರಲ್ಲ ಆದರೂ ಕೂಡ ನೀವು ಸಂಸಾರ ಸುಳಿಗೆ ಸಿಲುಕಿ ಶ್ರೀಹರಿಯನ್ನು ಮರೆತಿದ್ದಿರಿ. ಎಂದು ಹೇಳುವಾಗ ಹೇಳುವಾಗ 'ಏನು ಕಾರಣ ಯದುಪತಿಯನು ಮರೆತಿರಿ' ಎಂಬ ಮಾತು ಬಳಕೆಯಾಗಿದೆ.

## ಭಾಷಾಭ್ಯಾಸ

ಅ) ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

| | | | | | |
|---|---|---|---|---|---|
| ಕಾಲ | x | ಅಕಾಲ | ಧರ್ಮ | x | ಅಧರ್ಮ |
| ಕಾರಣ | x | ನಿಷ್ಕಾರಣ | ದೊಡ್ಡದು | x | ಚಿಕ್ಕದು |

ಆ) ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

1. ಹರಿ : ವಿಷ್ಣು, ಪಾಂಡುರಂಗ, ಕೃಷ್ಣ
2. ಸತಿ : ಹೆಂಡತಿ, ಮಡದಿ
3. ಸುತ : ಮಗ, ತನುಜ, ಪುತ್ರ
4. ದೂತ : ಸೇವಕ, ಕಿಂಕರ, ಕೆಲಸದವನು

ಇ) ಕೆಳಗಿನ ಪದಗಳ ತದ್ಭವಗಳನ್ನು ಬರೆಯಿರಿ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ಜನ್ಮ | ಜನುಮ | ಧರ್ಮ | ದಮ್ಮ |

| | | | |
|---|---|---|---|
| ಶ್ರೀ | ಸಿರಿ | ರಾಯ | ರಾಜ |

**ಈ) 'ಹರಿ', 'ಮರೆ' – ಈ ಪದಗಳನ್ನು ನಾಮಪದ – ಕ್ರಿಯಾಪದಗಳ ಅರ್ಥ ಬರುವಂತೆ ವಾಕ್ಯದಲ್ಲಿ ಪ್ರಯೋಗಿಸಿರಿ.**

| | | | |
|---|---|---|---|
| ಹರಿ | ನಾಮಪದದ ಅರ್ಥದಲ್ಲಿ | : | ಹರಿ ಸರ್ವಶಕ್ತನು ಅವನಿಂದಲೇ ಇಡಿ ಜಗತ್ತು ನಡೆಯುತ್ತಿದೆ. |
| | ಕ್ರಿಯಾಪದದ ಅರ್ಥದಲ್ಲಿ | : | ನೀರು ಜುಳುಜುಳು ಶಬ್ದ ಮಾಡುತ್ತಾ ಹರಿಯುತ್ತಿದೆ. |
| ಮರೆ | ನಾಮಪದದ ಅರ್ಥದಲ್ಲಿ | : | ಮರೆವು ಮನುಷ್ಯನಿಗೆ ಸಹಜವಾಗಿ ಇರುವಂತಹದ್ದು. |
| | ಕ್ರಿಯಾಪದದ ಅರ್ಥದಲ್ಲಿ | : | ಹುಡುಗ ಓಡುತ್ತಾ ಓಡುತ್ತಾ ಕಣ್ ಮರೆಯಾದನು. |

**ಉ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

| | | | | |
|---|---|---|---|---|
| ನಾಮಾಮೃತ | = | ನಾಮ | + | ಅಮೃತ |
| ಇನ್ನಾದರೂ | = | ಇನ್ನು | + | ಆದರೂ |
| ಮರುಳಾಗು | = | ಮರುಳು | + | ಆಗು |
| ಕಾಲ್ಪಿಡಿದೆಳೆ | = | ಕಾಲ್ಪಿಡಿದು | + | ಎಳೆ |

# 18. ಕಲಿಗಳ ದೇವನೊಪ್ಪಿದನು

- ರತ್ನಾಕರವರ್ಣಿ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

1. ಭರತ ಭೂತಳಕ್ಕೆ ಸಿಂಗಾರವಾದದ್ದು ಯಾವುದು?

   ಅಯೋಧ್ಯಾಪುರ ಭರತ ಭೂತಳಕ್ಕೆ ಸಿಂಗಾರವಾಗಿದೆ.
2. ಭರತ ಕುಮಾರನು ಯಾರ ಮಗ?

   ಭರತನು ಪುರು ಪರಮೇಶನ ಮಗ.
3. ಯಾರಿಗೆ ಆಹಾರ-ನೀಹಾರಗಳುಂಟು?

   ನರತತಿಗೆ ( ಮನುಷ್ಯ ಸಮೂಹಕ್ಕೆ ) ಆಹಾರ - ನೀಹಾರಗಳುಂಟು.
4. ಭರತನ ಆಸ್ಥಾನವು ಯಾವುದರಿಂದ ನಿರ್ಮಿತವಾಗಿದೆ?

   ನವರತ್ನ ಮತ್ತು ಹೇಮದಿಂದ ನಿರ್ಮಿತವಾಗಿದೆ.
5. ಸಿಂಹಾಸನವನೇರಿದ ಭರತ ಹೇಗೆ ಕಾಣುತ್ತಿದ್ದನು?

   ಉದಯಗಿರಯ ಮೇಲೆ ಮೆರೆವ (ಭಾನು) ರವಿಗೆ ಎದುರಾದ ಪ್ರತಿಸೂರ್ಯನಂತೆ ಕಾಣುತ್ತಿದ್ದನು.

ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಭರತ ಚಕ್ರೇಶ್ವರನು ಹೇಗೆ ಸುಖವಾಗಿ ಬಾಳುತ್ತಿದ್ದನು?

   ಭರತ ಭೂತಳಕ್ಕೆ ಸಿಂಗಾರವಾಗಿರುವುದು ಅಯೋಧ್ಯಾಪುರ. ಅಲ್ಲಿ ಭರತನು ಮೂರು ಲೋಕಗಳಿಂದ ಹೊಗಳಿಸಿಕೊಂಡು ಸುಖವಾಗಿ ಬಾಳುತ್ತಿದ್ದನು.
2. ಭರತನು ಇತರರಿಗಿಂತ ಭಿನ್ನವಾಗಿದ್ದ ಎಂಬುದನ್ನು ಕವಿ ವರ್ಣಿಸಿರುವ ಬಗೆ ಹೇಗೆ?

   ಧರೆಯಲ್ಲಿ ಇರುವ ಎಲ್ಲಾ ವಸ್ತುಗಳನ್ನು ಸುಟ್ಟರೆ ಬೂದಿಯಾಗುತ್ತವೆ. ಆದರೆ ಕರ್ಪೂರವನ್ನು ಸುಟ್ಟರೆ ಬೂದಿ ಸಿಗುವುದಿಲ್ಲ. ಅದೇ ರೀತಿ ಕರ್ಪೂರದಂತೆ ಭರತನು ಕೂಡ ಇತರೆ ವ್ಯಕ್ತಿಗಳಿಂತ ಭಿನ್ನವಾಗಿದ್ದಾನೆ. ಎಲ್ಲಾ ಮನುಷ್ಯರಿಗೂ ಆಹಾರ – ನೀಹಾರಗಳಿರುವಂತೆ ಭರತನಿಗೆ ಆಹಾರ – ನೀಹಾರಗಳಿಲ್ಲ ಎಂದು ಕವಿ ಹೇಳುತ್ತಾನೆ.
3. ಕಲಿಗಳ ದೇವ ಭರತನು ಶೋಭಿಸಿದ ಪರಿಯನ್ನು ಕವಿ ಹೇಗೆ ವರ್ಣಿಸಿದ್ದಾನೆ?

   ಸಿಂಹಾಸನದ ಮೇಲೆ ಕುಳಿತು ಬಲಗೈಯಲ್ಲಿ ಕಠಾರಿಯನ್ನು ಹಿಡಿದು ಅದನ್ನು ನೆಲಕ್ಕೆ ಊರಿ, ಎಡಗೈಯನ್ನು ದಿಂಬಿನ ಮೇಲೂರಿ ಇಡಿ ಶ್ರೀಮಂತಿಕೆಯನ್ನು ಆಳುವ ಕಲಿಗಳ ದೇವನಾದ ಭರತನು ಠೀವಿಯಿಂದ ಶೋಭಿಸಿದನು.

ಕೆಳಗಿನ ಪ್ರಶ್ನೆಗಳಿಗೆ 4/5 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಭರತ ಚಕ್ರಿಯು ರತ್ನ ಸಿಂಹಾಸನದಲ್ಲಿ ಶೋಭಿಸಿದ ಬಗೆಯನ್ನು ವಿವರಿಸಿರಿ?

   ನವರತ್ನ ಹೇಮದಿಂದ ನಿರ್ಮಿತವಾದ ಆಸ್ಥಾನ ಭವನದಲ್ಲಿ ಭರತನು ರತ್ನಪುಷ್ಪಕದಲ್ಲಿ ಕುಳಿತು ಮೇರೆಯುವ ದೇವರುಗಳ ರಾಜ ಇಂದ್ರನಂತೆ ಶೋಭಿಸುತ್ತಿದ್ದನು. ಕ್ಷೇಮದ ಉತ್ತುಂಗದಲ್ಲಿರುವ ಸಿಂಹಾಸನವನ್ನು ಏರಿದ ಭರತನು ತನ್ನ ದೇಹದ ಕಾಂತಿಯಿಂದ ಉದಯಗಿರಿಯ ಮೇಲೆ ಮೆರೆವ (ಭಾನು) ರವಿಗೆ ಎದುರಾದ ಪ್ರತಿಸೂರ್ಯನಂತೆ ಕಾಣುತ್ತಿದ್ದನು.

2. ಭರತೇಶನು ಸಭೆಯಲ್ಲಿ ಠೀವಿಯಿಂದ ಮೆರೆದ ಪರಿಯನ್ನು ವರ್ಣಿಸಿರಿ.

   ಭರತನ ಸಭೆಯಲ್ಲಿ ಅವನ ವೈಭವ ಮತ್ತು ಬಿಂಕ ಹೇಗಿತ್ತೆಂದರೆ, ಸಿಂಹಾಸನದಲ್ಲಿ ಕುಳಿತ ಭರತನು ತನ್ನ ಎಡಗಾಲನ್ನು ಗದ್ದುಗೆಯ ಮೇಲೆ ಇರಿಸಿ, ಕಡಗವನ್ನು ಧರಿಸಿರುವ ಬಲಗಾಲನ್ನು ಕೆಳಗೆ ಪಾದುಕೆಯಲ್ಲಿ ಇರಿಸಿ, ಬಲಗೈಯಲ್ಲಿ ಕಠಾರಿಯನ್ನು ಹಿಡಿದು ಅದನ್ನು ನೆಲಕ್ಕೆ ಊರಿ, ಎಡಗೈಯನ್ನು ದಿಂಬಿನ ಮೇಲೂರಿ ಇಡಿ ಶ್ರೀಮಂತಿಕೆಯನ್ನು ಆಳುವ ಕಲಿಗಳ ದೇವನಾದ ಭರತನು ಠೀವಿಯಿಂದ ಶೋಭಿಸಿದನು.

ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ

1. ನರಲೋಕಕೊಬ್ಬನೆ ರಾಯ.

   ಈ ಪಸ್ತುತ ವಾಕ್ಯವನ್ನು 'ರತ್ನಾಕರವರ್ಣಿಯ' 'ಭರತೇಶ ವೈಭವ' ಕೃತಿಯಿಂದ ಆರಿಸಿಕೊಂಡಿರುವ 'ಕಲಿಗಳ ದೇವನೊಪ್ಪಿದನು' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ಕವಿಯು ಭರತನ ವೈಭವವನ್ನು ಕುರಿತು ಹೇಳಿರುವುದಾಗಿದೆ. ಭರತ ಭೂತಳಕ್ಕೆ ಸಿಂಗಾರವಾಗಿರುವಂತಹ ಅಯೋಧ್ಯಾಪುರದಲ್ಲಿ ಮೂರು ಲೋಕಗಳಿಂದ ಹೊಗಳಿಸಿಕೊಂಡು ಸುಖವಾಗಿ ಬಾಳುತ್ತಿರುವ ಭರತನ ಸಿರಿಯನ್ನು ವಿವರಿಸುವ ಸಂದರ್ಭದಲ್ಲಿ ಪುರು ಪರಮೇಶನ ಹಿರಿಯ ಮಗನಾದ ಭರತನು ನರಲೋಕಕ್ಕೆ ಅಂದರೆ ಭೂಲೋಕಕ್ಕೆ ಒಬ್ಬನೆ ರಾಜ ಎಂದು ಹೇಳುವಾಗ 'ನರಲೋಕಕೊಬ್ಬನೆ ರಾಯ' ಎಂಬ ಈ ಮಾತು ಬಳಕೆಯಾಗಿದೆ.

2. ಕರ್ಪೂರವ ಸುಟ್ಟರೆ ಭಸ್ಮವುಂಟೆ?

   ಈ ಪಸ್ತುತ ವಾಕ್ಯವನ್ನು 'ರತ್ನಾಕರವರ್ಣಿಯ' 'ಭರತೇಶ ವೈಭವ' ಕೃತಿಯಿಂದ ಆರಿಸಿಕೊಂಡಿರುವ 'ಕಲಿಗಳ ದೇವನೊಪ್ಪಿದನು' ಎಂಬ ಪದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

   ಈ ಮಾತನ್ನು ಕವಿಯು ಭರತನು ಸಾಮಾನ್ಯ ಜನರಿಗಿಂತ ಭಿನ್ನ ಎಂಬುದನ್ನು ಹೇಳುವ ಸಂದರ್ಭದಲ್ಲಿ ಬಳಸಿದ್ದಾನೆ. ಧರೆಯಲ್ಲಿ ಇರುವ ಎಲ್ಲಾ ವಸ್ತುಗಳನ್ನು ಸುಟ್ಟರೆ ಬೂದಿಯಾಗುತ್ತವೆ. ಆದರೆ ಕರ್ಪೂರವನ್ನು ಸುಟ್ಟರೆ ಬೂದಿಯಾಗುವುದಿಲ್ಲ. ಅದೇ ರೀತಿ ಕರ್ಪೂರದಂತೆ ಭರತನು ಕೂಡ ಇತರೆ ವ್ಯಕ್ತಿಗಳಿಂತ ಭಿನ್ನವಾಗಿದ್ದಾನೆ. ಎಲ್ಲಾ ಮನುಷ್ಯರಿಗೂ ಆಹಾರ - ನೀಹಾರಗಳಿರುವಂತೆ ಭರತನಿಗೆ ಆಹಾರ - ನೀಹಾರಗಳಿಲ್ಲ ಎಂದು ಕವಿ ಹೇಳುತ್ತಾನೆ.

## ಭಾಷಾಭ್ಯಾಸ

ಅ) ಅಲಂಕಾರ ತಿಳಿಸಿ ಅನ್ವಯಿಸಿರಿ.

"ಉದಯಗಿರಿಯ ಮೇಲೆ ಮೆರೆವ ಭಾನುವಿಗೆ ಮತ್ತಿದಿರಾದ ಪ್ರತಿಸೂರ್ಯನಂತೆ"

ಅಲಂಕಾರ : ಉಪಮಾಲಂಕಾರ (ಉಪಮೇಯ, ಸಾಧಾರಣ ಧರ್ಮ ಲುಪ್ತ ಉಪಮಾಲಂಕಾರ)

ಉಪಮಾನ : ಉದಯಗಿರಿಯ ಮೇಲೆ ಮೆರೆವ ಭಾನುವಿಗೆ ಮತ್ತಿದಿರಾದ ಪ್ರತಿಸೂರ್ಯ

ಉಪಮೇಯ : ಭರತ

ಉಪಮವಾಚಕ : ಅಂತೆ

ಸಾಧಾರಣ ಧರ್ಮ : ಕಂಗೊಳಿಸುವುದು ಅಥವಾ ಶೋಭಿಸುವುದು.

ಅನ್ವಯ : ದೇಹಕಾಂತಿಯಿಂದ ಕಂಗೊಳಿಸುವ ಭರತನನ್ನು ಉದಯಗಿರಿಯ ಮೇಲೆ ಹೊಳಪಿನೊಂದಿಗೆ ಮೂಡುವ ಸೂರ್ಯನಿಗೆ ಪ್ರತಿಸೂರ್ಯನೆಂಬಂತೆ ಹೋಲಿಕೆ ಮಾಡಲಾಗಿದೆ. ಆದ್ದರಿಂದ ಇದು ಉಪಮಾಲಂಕಾರ.

ಆ) ಈ ಕೆಳಗಿನ ಪದಗಳನ್ನು ಸ್ವಂತವಾಕ್ಯದಲ್ಲಿ ಉಪಯೋಗಿಸಿರಿ.

1. ಕ್ಷಣ : ಕ್ಷಣ ಮಾತ್ರದಲ್ಲಿ ಹಕ್ಕಿಯು ಬಹಳ ದೂರ ಹಾರಿಹೋಯಿತು.
2. ಒಪ್ಪು : ಸೌರಭನಿಗೆ ಸೂಟು ಬೂಟು ಚೆನ್ನಾಗಿ ಒಪ್ಪುತ್ತದೆ.
3. ಉತ್ತುಂಗ : ರಾಜುವಿಗೆ ಹಿಮಾಲಯದ ಉತ್ತುಂಗಕ್ಕೆ ಏರಬೇಕು ಎಂಬ ಕನಸಿದೆ.
4. ಠೀವಿ: ಸಿಂಹವು ಠೀವಿಯಿಂದ ನಡಯುತ್ತದೆ.

ಇ) ಕೆಳಗಿನ ಪದಗಳ ತದ್ಭವಗಳನ್ನು ಬರೆಯಿರಿ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ಶೃಂಗಾರ | ಸಿಂಗಾರ | ಸಿರಿ | ಶ್ರೀ |
| ಮುಕ್ತಿ | ಮುಕುತಿ | ಲೋಕ | ಲೋಗ |
| ರತ್ನ | ರನ್ನ | ಪಾದುಕೆ | ಹಾವುಗೆ |

ಈ) ಬಿಡಿಸಿ ಬರೆದು ಸಂಧಿ ಹೆಸರಿಸಿ.

| ಸಂಧಿಪದ | = | ಪೂರ್ವಪದ | + | ಉತ್ತರಪದ | ಸಂಧಿ ಹೆಸರು |
|---|---|---|---|---|---|
| ಸಿಂಗಾರವಾದ | = | ಸಿಂಗಾರ | + | ಆದ | ವಕರಾಗಮ ಸಂಧಿ (ಆಗಮಸಂಧಿ) |
| ನರಲೋಕಕೊಬ್ಬನೆ | = | ನರಲೋಕಕೆ | + | ಒಬ್ಬನೆ | ಲೋಪಸಂಧಿ |
| ಕಣ್ಣಿಟ್ಟರೆ | = | ಕಣ್ಣು | + | ಇಟ್ಟರೆ | ಲೋಪಸಂಧಿ |
| ಬಲಗಾಲೂರಿ | = | ಬಲ | + | ಕಾಲೂರಿ | ಆದೇಶ ಸಂಧಿ |